ಸಂಪುಟ: 05 ಸಂಚಿಕೆ: 153 ಪುಟಗಳು: 08 ಶನಿವಾರ 16 ಆಗಸ್ಟ್ 2025
www.udayavahini.in epaper.udayavahini.in Udayavahini news Udayavahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ
RNI No. KARKAN/2021/80833
9448225696 +91 8035841833 ₹5
ಉದಯ ವಾಹಿನಿ
ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

# ರಕ್ತ-ನೀರು ಒಟ್ಟಿಗೆ ಹರಿಯಲ್ಲ ಬೆದರಿಕೆಗೆ ಹೆದರಲ್ಲ

## 1ಗಂಟೆ 43 ನಿಮಿಷ ಸ್ವಾತಂತ್ರ್ಯೋತ್ಸವ ಭಾಷಣ ದಾಖಲೆ ಬರೆದ ಮೋದಿ

• ಉದಯವಾಹಿನಿ, ನವದೆಹಲಿ

ದೇಶಾದ್ಯಂತ 79ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಅತ್ಯಂತ ವೈಭವ ಹಾಗೂ ಸಂಭ್ರಮದೊಂದಿಗೆ ಆಚರಣೆ ಮಾಡಲಾಗುತ್ತಿದೆ. ದೆಹಲಿಯ ಕೆಂಪು ಕೋಟೆಯಲ್ಲಿ ಪ್ರಧಾನಿ ಮೋದಿ ತ್ರಿವರ್ಣ ಧ್ವಜಾರೋಹಣ ಮಾಡಿದರು. ಕೇಂದ್ರ ಸಚಿವರು, ವಿರೋಧ ಪಕ್ಷದ ನಾಯಕರು ಮತ್ತು ವಿಶೇಷ ಅತಿಥಿಗಳ ಸಮ್ಮುಖದಲ್ಲಿ ರಾಷ್ಟ್ರಧ್ವಜವು ಹಾರಿತು. ಆರಂಭದಲ್ಲಿ ವಿಶೇಷ ಹೆಲಿಕಾಪ್ಟರ್‌ಗಳು ಕೆಂಪು ಕೋಟೆಯಲ್ಲಿ ಹೂವುಗಳ ಸುರಿಮಳೆಗೈದವು. 2047ರ ಅಭಿವೃದ್ಧಿ ಹೊಂದಿದ ಭಾರತದ ದೃಷ್ಟಿಕೋನ ಮತ್ತು ನವ ಭಾರತದ ಥೀಮ್‌ನೊಂದಿಗೆ 15ನೇ ಸ್ವಾತಂತ್ರ್ಯ ದಿನಾಚರಣೆ ಮಾಡಲಾಗುತ್ತಿದೆ. ಇದಕ್ಕೂ ಮುನ್ನ, ಪ್ರಧಾನಿ ಮೋದಿ ರಾಜ್‌ಘಾಟ್‌ಗೆ ತಲುಪಿ ಮಹಾತ್ಮ ಗಾಂಧಿಯವರಿಗೆ ಗೌರವ ಸಲ್ಲಿಸಿದರು. ನಂತರ, ಮೋದಿ ಅವರನ್ನು ಕೆಂಪು ಕೋಟೆಯಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಸ್ವಾಗತಿಸಿದರು. ಅದರ ನಂತರ, ಪ್ರಧಾನಿ ರಕ್ಷಣಾ ಪಡೆಗಳಿಂದ ಗೌರವ ವಂದನೆ ಸ್ವೀಕರಿಸಿದರು. ನಂತರ,

ತಂತ್ರಜ್ಞಾನ ಕ್ಷೇತ್ರದಲ್ಲಿ ಭಾರತ ದಾಪುಗಾಲಿಡುತ್ತಿರುವುದನ್ನು ನರೇಂದ್ರ ಮೋದಿ ತಮ್ಮ ಭಾಷಣದಲ್ಲಿ ಪ್ರಸ್ತಾಪಿಸಿದರು. ಅದರಲ್ಲೂ ಎಲೆಕ್ಟ್ರಾನಿಕ್, ರಕ್ಷಣೆ ಮತ್ತು ಸಂಪರ್ಕ ಕ್ಷೇತ್ರದಲ್ಲಿ ಸೆಮಿಕಂಡಕ್ಟರ್ ಉದ್ಯಮದ ಬೆಳವಣಿಗೆಯನ್ನು ಒತ್ತಿ ಹೇಳಿದರು. 'ಮೇಡ್ ಇನ್ ಇಂಡಿಯಾ ಚಿಪ್' ಮೂಲಕ ಅತ್ಯಾಧುನಿಕ ತಂತ್ರಜ್ಞಾನ

### ಆಧುನಿಕ ತಂತ್ರಜ್ಞಾನ ಮತ್ತು ಮೇಡ್ ಇನ್ ಇಂಡಿಯಾ ಸೆಮಿಕಂಡಕ್ಟರ್ ಚಿಪ್

ಕ್ಷೇತ್ರದಲ್ಲೂ ಭಾರತ ಸ್ವಾವಲಂಬಿಯಾಗಲಿದೆ. ಆ ಮೂಲಕ ಅನ್ಯ ರಾಷ್ಟ್ರಗಳ ಮೇಲಿನ ಅವಲಂಬನೆಯನ್ನು ತಗ್ಗಿಸಿಕೊಂಡು ಸ್ವದೇಶಿ ಉತ್ಪಾದನೆ ಆರಂಭವಾಗಲಿದೆ ಎಂದಿದ್ದಾರೆ. ಶುದ್ಧ ಇಂಧನ ಉತ್ಪಾದನೆಯಲ್ಲಿ ನವೀಕರಿಸಬಹುದಾದ ಇಂಧನದ ಗುರಿಯನ್ನು 2025ರಲ್ಲೇ ಶೇ 50ರಷ್ಟನ್ನು ಭಾರತ ಸಾಧಿಸಿದೆ.

ಮೋದಿ ಕೆಂಪು ಕೋಟೆಯಲ್ಲಿ ತ್ರಿವರ್ಣ ಧ್ವಜವನ್ನು ಹಾರಿಸಿ ರಾಷ್ಟ್ರವನ್ನುದ್ದೇಶಿಸಿ ಮಾತನಾಡಿದರು. ಪೆಹಲ್ಗಾಮ್ ಭಯೋತ್ಪಾದಕ ದಾಳಿಗೆ ಪ್ರತೀಕಾರವಾಗಿ, ಉಗ್ರರಿಗೆ ತಕ್ಕ ಪಾಠ ಕಲಿಸಲು ಕೈಗೊಳ್ಳಲಾದ ಆಪರೇಷನ್ ಸಿಂಧೂರ್ ಸಂಕೇತವಾಗಿ ಮೋದಿ ಕೇಸರಿ ಬಣ್ಣದ ಉಡುಪನ್ನು ಧರಿಸಿದ್ದರು. ಜೊತೆಗೆ, ಕೇಸರಿ ಬಣ್ಣದ ಪೇಟವನ್ನು ಸಹ ಧರಿಸಿದ್ದರು. ತ್ರಿವರ್ಣಗಳನ್ನು ಹೊಂದಿರುವ ಸ್ಕಾರ್ಫ್ ಅನ್ನು ಅವರು ಕುತ್ತಿಗೆಗೆ ಸುತ್ತಿಕೊಂಡು ಗಮನ ಸೆಳೆದರು. ಸ್ವಾತಂತ್ರ್ಯ ದಿನಾಚರಣೆ ಹಿನ್ನೆಲೆಯಲ್ಲಿ ದೆಹಲಿಯಲ್ಲಿ ಬಿಗಿ ಭದ್ರತಾ ವ್ಯವಸ್ಥೆ ಮಾಡಲಾಗಿದೆ. ಸ್ನೈಪರ್‌ಗಳು ಸೇರಿದಂತೆ 11,000 ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಕೆಂಪು ಕೋಟೆಯ ಸುತ್ತಮುತ್ತ 3,000 ಸಂಚಾರ ಪೊಲೀಸರನ್ನು ನಿಯೋಜನೆ ಮಾಡಲಾಗಿದೆ. ದೆಹಲಿಯಾದ್ಯಂತ ಸಿಸಿಟಿವಿ ಕಣ್ಗಾವಲು ಬಲಪಡಿಸಲಾಗಿದೆ. ಪ್ರಮುಖ ರೈಲು ನಿಲ್ದಾಣಗಳು, ಅಂತಾರಾಜ್ಯ ಬಸ್ ಟರ್ಮಿನಲ್‌ಗಳು ಮತ್ತು ಮೆಟ್ರೋ ನಿಲ್ದಾಣಗಳಲ್ಲಿ ಭದ್ರತೆ ಬಿಗಿಗೊಳಿಸಲಾಗಿದೆ.

ಇದೇ ವೇಳೆ ಮೋದಿ ಮತ್ತೊಂದು ಅಪರೂಪದ ಸಾಧನೆ ಮಾಡಿದರು. ಸತತ 12ನೇ ಬಾರಿಗೆ ಕೆಂಪು ಕೋಟೆಯ ಮೇಲೆ ರಾಷ್ಟ್ರಧ್ವಜವನ್ನು ಹಾರಿಸಿದ ಮೋದಿ, ಅತಿ ಹೆಚ್ಚು ಬಾರಿ ಧ್ವಜಾರೋಹಣ ಮಾಡಿದ ಮೂರನೇ ಪ್ರಧಾನಿ ಎಂಬ ದಾಖಲೆಯನ್ನು ಸೃಷ್ಟಿಸಿದ್ದಾರೆ. ಈ ಸಾಧನೆ ಮಾಡಿದ ಮೊದಲ ಪ್ರಧಾನಿ ಪಂಡಿತ್ ಜವಾಹರಲಾಲ್ ನೆಹರು ಅವರು 1947-64 ರವರೆಗೆ 17 ಬಾರಿ ಧ್ವಜಾರೋಹಣ ಮಾಡಿದ್ದರು. ಅದರ ನಂತರ, ಇಂದಿರಾ ಗಾಂಧಿ ಪ್ರಧಾನಿಯಾಗಿ ತ್ರಿವರ್ಣ ಧ್ವಜವನ್ನು 16 ಬಾರಿ ಹಾರಿಸಿದ್ದರು. ಸ್ವಾತಂತ್ರ್ಯ ದಿನಾಚರಣೆಯಂದು ಸತತವಾಗಿ ಅತಿ ಹೆಚ್ಚು ಬಾರಿ ಕೆಂಪು ಕೋಟೆಯ ಮೇಲೆ ಧ್ವಜಾರೋಹಣ ಮಾಡಿದ ಮೊದಲ ಕಾಂಗ್ರೆಸ್ಸೇತರ ಪ್ರಧಾನಿ ಮತ್ತು ಸಚಿವ ಎಂಬ ಹೆಗ್ಗಳಿಕೆಗೆ ನರೇಂದ್ರ ಮೋದಿ ಪಾತ್ರರಾದರು. ನಾವು ನಮ್ಮ ಸಶಸ್ತ್ರ ಪಡೆಗಳಿಗೆ ಮುಕ್ತ ಹಸ್ತ ನೀಡಿದ್ದೇವೆ. ಇದೀಗ ನಮ್ಮ ದೇಶ ಭಯೋತ್ಪಾದಕರು ಮತ್ತು ಅವರನ್ನು ಬೆಂಬಲಿಸುವವರ ನಡುವೆ ವ್ಯತ್ಯಾಸವನ್ನು ನೋಡುವುದಿಲ್ಲ. ಭವಿಷ್ಯದಲ್ಲಿ ಪಾಕಿಸ್ತಾನದಿಂದ ಯಾವುದೇ ದುಷ್ಕೃತ್ಯ ಎದುರಾದರೂ ಅದಕ್ಕೆ ಶಿಕ್ಷೆಯನ್ನು ನಮ್ಮ ಸಶಸ್ತ್ರ ಪಡೆಗಳೇ ನಿರ್ಧರಿಸುತ್ತವೆ ಎಂದು ತಿಳಿಸಿದರು.

ರಕ್ತ ಮತ್ತು ನೀರು ಒಟ್ಟಿಗೆ ಹರಿಯುವುದಿಲ್ಲ ಎಂದು ಭಾರತ ಈಗಾಗಲೇ ನಿರ್ಧಾರ ಮಾಡಿದೆ. ಸಿಂಧೂ ನದಿ ನೀರು ಒಪ್ಪಂದವು ಅನ್ಯಾಯವಾಗಿದೆ ಎಂದು ನಮ್ಮ ದೇಶದ ಜನರು ಅರಿತುಕೊಂಡಿದ್ದಾರೆ. ಸಿಂಧೂ ನದಿ ಒಪ್ಪಂದದಿಂದ ನೀರು ಶತ್ರುಗಳ ಭೂಮಿಗೆ ನೀರಾವರಿಗೆ ಸಹಾಯಕವಾಗಿದೆ. ಆದರೆ, ನಮ್ಮದೇ ರೈತರು ತೊಂದರೆ ಅನುಭವಿಸುತ್ತಿದ್ದಾರೆ. ಭಾರತದಲ್ಲಿ ಹುಟ್ಟುವ ನದಿ ನೀರಿನ ಹಕ್ಕು ಭಾರತೀರಿಗೆ ಇದೆ. ದೇಶದ ರೈತರಿಗೆ ಇದೆ. ಕಳೆದ ಏಳು ದಶಕಗಳಿಂದ ಒಪ್ಪಂದದ ಮೇರೆಗೆ ಬೇರೆ ದೇಶಗಳಿಗೆ ಭಾರತ ನೀರುಣಿಸುತ್ತಿತ್ತು. ನಮ್ಮ ಭೂಮಿ ಬರಿದಾಗುತ್ತಿತ್ತು. ಅಂದ ಮೇಲೆ ಅಂತಹ ಒಪ್ಪಂದ ಏಕೆ ಬೇಕು ಎಂದು ಪ್ರಶ್ನೆ ಮಾಡಿದರು.

### ಸ್ವಾತಂತ್ರ್ಯ ಹೋರಾಟಗಾರ ಹಾಗೂ ಬಿಜೆಪಿ ಮುಖಂಡ ಡಾ. ಶ್ಯಾಮ ಪ್ರಸಾದ್ ಮುಖರ್ಜಿಗೆ ನಮನ

ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ ಪ್ರತಿಯೊಬ್ಬ ಹೋರಾಟಗಾರ ತ್ಯಾಗ ಹಾಗೂ ಬಲಿದಾನದಿಂದಾಗಿ ಇಂದು ದೇಶ ಉತ್ತಮ ಸ್ಥಿತಿಯಲ್ಲಿದೆ. ಹೋರಾಟದಲ್ಲಿ ಪಾಲ್ಗೊಂಡಿದ್ದ ಡಾ. ಶ್ಯಾಮ ಪ್ರಸಾದ ಮುಖರ್ಜಿ ಅವರಿಗೆ ವಿಶೇಷ ಗೌರವವನ್ನು ಮೋದಿ ಸಲ್ಲಿಸಿದ್ದಾರೆ. 'ದೂರದೃಷ್ಟಿಯ ನಾಯಕರಾಗಿದ್ದ ಡಾ. ಮುಖರ್ಜಿ ಅವರು ದೇಶದ ಐಕ್ಯತೆ ಮತ್ತು ಸಮಗ್ರತೆಗೆ ಒತ್ತು ನೀಡಿದವರು. ಹಿಂದಿನ ನಾಯಕರ ಮಾರ್ಗದರ್ಶನ ಭಾರತದ ವರ್ತಮಾನ ಹಾಗೂ ಭವಿಷ್ಯಕ್ಕೆ ದಾರಿದೀಪವಾಗಿದೆ' ಎಂದರು.




### ಸಿಂಧೂ ನದಿ ಒಪ್ಪಂದ, ನೀರು ಹಂಚಿಕೆಯಲ್ಲಿ ಸ್ಪಷ್ಟ ನಿಲುವು

ದೇಶದ ನೀರಿನ ಭದ್ರತೆ ಮತ್ತು ಮೂಲಸೌಕರ್ಯಗಳ ಸುಸ್ಥಿರ ನಿರ್ವಹಣೆಗೆ ಭಾರತ ಸದಾ ಬದ್ಧ. ಭಾರತ ಮತ್ತು ಪಾಕಿಸ್ತಾನದ ನದಿ ನೀರಿನ ಸಂಬಂಧದಲ್ಲಿ ಸಿಂಧೂ ಜಲ ಒಪ್ಪಂದವು ಮೂಲಾಧಾರವಾಗಿ ಉಳಿದಿದೆ. ರಾಷ್ಟ್ರದ ಹಿತಾಸಕ್ತಿಗೆ ಪೂರಕವಾಗಿಯೇ ಭಾರತವು ಅಂತರರಾಷ್ಟ್ರೀಯ ಒಪ್ಪಂದಗಳನ್ನು ಮಾಡಿಕೊಳ್ಳಲಾಗುವುದು ಎಂದು ಪ್ರಧಾನಿ ಮೋದಿ ಹೇಳಿದ್ದಾರೆ.

# ಸಂವಿಧಾನದ ಉಳಿವಿಗಾಗಿ ಪಣ ತೊಡೋಣ

## ಸ್ವಾತಂತ್ರ್ಯೋತ್ಸವ ಭಾಷಣದಲ್ಲಿ ಸಿಎಂ ಸಿದ್ದರಾಮಯ್ಯ



• ಉದಯವಾಹಿನಿ, ಬೆಂಗಳೂರು:

'ನಮ್ಮ ಸರ್ಕಾರದ ಗ್ಯಾರಂಟಿ ಯೋಜನೆಗಳಿಂದ ಜನರ ತಲಾ ಆದಾಯ ಹೆಚ್ಚಿದ್ದು, ರಾಜ್ಯವು ತಲಾ ಆದಾಯದಲ್ಲಿ ದೇಶದಲ್ಲೇ ಪ್ರಥಮ ಸ್ಥಾನದಲ್ಲಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು. ಮಾಣೆಕ್ ಷಾ ಮೈದಾನದಲ್ಲಿ ಶುಕ್ರವಾರ ನಡೆದ 79ನೇ ಸ್ವಾತಂತ್ರ್ಯೋತ್ಸವ ಕಾರ್ಯಕ್ರಮದಲ್ಲಿ ಧ್ವಜಾರೋಹರಣ ನೆರವೇರಿಸಿ ಮಾತನಾಡಿದ ಅವರು, ಗ್ಯಾರಂಟಿ ಯೋಜನೆ, ಸರ್ಕಾರದ ನೀತಿಗಳು, ಅಭಿವೃದ್ಧಿ ಯೋಜನೆಗಳ ಜಾರಿ, ಆಶಯಗಳನ್ನು ಬಿಡಿಸಿಟ್ಟರು. 'ಕರ್ನಾಟಕವು ಈಗ ತಲಾ ಆದಾಯದ ವಿಚಾರದಲ್ಲಿ ಮೊದಲ ಸ್ಥಾನದಲ್ಲಿದೆ.

ತಲಾ ಆದಾಯದಲ್ಲಿ ಕಳೆದ ಹತ್ತು ವರ್ಷಗಳಲ್ಲಿ ಶೇ 101ರಷ್ಟು ಪ್ರಗತಿಯನ್ನು ಸಾಧಿಸಿದ ರಾಜ್ಯ ನಮ್ಮ ಕರ್ನಾಟಕವಾಗಿದೆ. 2013-14ರಲ್ಲಿ ಸ್ಥಿರ ದರಗಳಲ್ಲಿ 1,01,858 ಗಳಷ್ಟಿದ್ದ ತಲಾದಾಯವು 2024-25ರ ವೇಳೆಗೆ 2,04,605 ಗೆ ತಲುಪಿದೆ' ಎಂದು ತಿಳಿಸಿದರು.

'ಅನ್ನಭಾಗ್ಯ, ಶಕ್ತಿ, ಗೃಹಲಕ್ಷ್ಮಿ, ಗೃಹ ಜ್ಯೋತಿ, ಯುವನಿಧಿ ಯೋಜನೆಗಳಿಗೆ ಈವರೆಗೆ 96 ಸಾವಿರ ಕೋಟಿಗೂ ಹೆಚ್ಚಿನ ಮೊತ್ತವನ್ನು ವಿನಿಯೋಗಿಸಿದ್ದೇವೆ. ಮಧ್ಯವರ್ತಿಗಳ ಹಾವಳಿಯಿಲ್ಲದೆ ಜನರಿಗೆ ತಲುಪುವ ಯೋಜನೆಗಳು ರಾಜ್ಯದ ಜನರ ತಲಾ ಆದಾಯದ ಜತೆಗೆ ಕಾರ್ಮಿಕ ಶಕ್ತಿಯಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ಶೇ 23 ರಷ್ಟು ಹೆಚ್ಚಿಸಿವೆ ಎಂದು ಹಲವು ಅಧ್ಯಯನಗಳು ಹೇಳುತ್ತಿವೆ' ಎಂದು ಹೇಳಿದರು.

'ಗ್ಯಾರಂಟಿ ಯೋಜನೆಗಳಿಗೆ ಎರಡು ವರ್ಷದಲ್ಲಿ ನಮ್ಮ ಸರ್ಕಾರ ಬಲ ತುಂಬಿದೆ. ಮಹಿಳೆಯರ ಭಾಗವಹಿಸುವಿಕೆ ಪ್ರಮಾಣ ಹೆಚ್ಚಿ, ತಲಾ ಆದಾಯದಲ್ಲೂ ಏರಿಕೆ ಕಂಡಿದೆ' ಎಂದು ಯೋಜನೆಗಳನ್ನು ಸಮರ್ಥಿಸಿಕೊಂಡರು. 'ನಮ್ಮ ಸರ್ಕಾರವು ಗ್ಯಾರಂಟಿ ಯೋಜನೆಗಳೂ ಸೇರಿದಂತೆ ಸಹಾಯಧನ, ಪ್ರೋತ್ಸಾಹ ಧನ, ವಿದ್ಯಾರ್ಥಿವೇತನ, ಸಾಮಾಜಿಕ ಯೋಜನೆಗಳಿಗಾಗಿ ವಿನಿಯೋಗಿಸುತ್ತಿರುವ ಪಿಂಚಣಿ ಮುಂತಾದವುಗಳಿಗಾಗಿ 1.12 ಲಕ್ಷ ಕೋಟಿಗಳಿಗೂ ಹೆಚ್ಚಿನ ಮೊತ್ತವನ್ನು ಜನ ಕಲ್ಯಾಣಕ್ಕಾಗಿ ಖರ್ಚು ಮಾಡುತ್ತಿದೆ.



ಕಲ್ಯಾಣ ಕಾರ್ಯಕ್ರಮಗಳ ಜತೆ ಬಂಡವಾಳ ವೆಚ್ಚಗಳಿಗೆ ಈ ವರ್ಷ 83,200 ಕೋಟಿ ವಿನಿಯೋಗಿಸುತ್ತಿದ್ದೇವೆ' ಎಂದು ವಿವರಿಸಿದರು. 'ಬಸವಾದಿ ಶರಣರ ಧ್ಯೆಯದಲ್ಲಿ ನಂಬಿಕೆಯಿಟ್ಟು ರಾಜ್ಯವು ಅಭಿವೃದ್ಧಿ ಮಾದರಿಗಳನ್ನು ಹುಟ್ಟು ಹಾಕಿದೆ.

ಇದಕ್ಕೆ 'ಕರ್ನಾಟಕ ಅಭಿವೃದ್ಧಿ ಮಾದರಿ' ಎಂಬ ಹೆಸರಿನಲ್ಲಿ ಮನ್ನಣೆ ದೊರೆತಿದೆ. ವಿಶ್ವಸಂಸ್ಥೆ ಮುಖ್ಯಸ್ಥ ಫಿಲೆಮಾನ್ ಯಾಂಗ್ರ ಅವರು ಗ್ಯಾರಂಟಿ ಯೋಜನೆಗಳ ಬಗ್ಗೆ ಮುಕ್ತ ಕಂಠದಿಂದ ಶ್ಲಾಘಿಸಿದ್ದಾರೆ. ಈ ಮೂಲಕ ನಮ್ಮ ಯೋಜನೆಗಳು ವಿಶ್ವಮಾನ್ಯಗೊಂಡಿವೆ' ಎಂದು ಸಿದ್ದರಾಮಯ್ಯ ಅಭಿಪ್ರಾಯಪಟ್ಟರು.

'ಬಲಾಢ್ಯರು ಮಾತ್ರ ಬದುಕಿ, ಉಳಿದವರು ಗುಲಾಮರಾಗಿ, ಬಲಾಢ್ಯರಿಗಾಗಿ ದುಡಿಯಬೇಕು ಎನ್ನುವ ಮನುವಾದಿ ಸಿದ್ಧಾಂತದ ಮಾದರಿಯೇ ಸಾಮಾಜಿಕ ಡಾರ್ವಿನ್‌ವಾದ. ಈ ಮೃಗೀಯ ಸಿದ್ಧಾಂತಕ್ಕೆ ಎದುರಾಗಿ ಅಸಹಾಯಕರಿಗೆ ಮೊದಲು ಆದ್ಯತೆ ಸಿಗಬೇಕು ಎನ್ನುವುದು ನಮ್ಮ ಸಂವಿಧಾನವಾದ. ಆದ್ದರಿಂದ ಸಂವಿಧಾನದ ಉಳಿವಿಗಾಗಿ ಪಣ ತೊಡೋಣ' ಎಂದು ಕರೆ ನೀಡಿದರು.

ವಿನಿಯೋಗಿ



## 2.67 ಲಕ್ಷ ಟನ್ ಯೂರಿಯಾ ಪೂರೈಕೆಗೆ ಮನವಿ: ಕೃಷಿ ಸಚಿವ

• ಉದಯವಾಹಿನಿ, ಬೆಂಗಳೂರು

ಕರ್ನಾಟಕಕ್ಕೆ ಅಗತ್ಯವಿರುವ 2.67 ಲಕ್ಷ ಟನ್ ಯೂರಿಯಾ ಗೊಬ್ಬರವನ್ನು ಪೂರೈಕೆ ಮಾಡುವಂತೆ ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದರು. ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚವ್ಹಾಣ್ ಅವರು ಎಲ್ಲಾ ರಾಜ್ಯಗಳ ಕೃಷಿ ಸಚಿವರ ಜತೆ ನಡೆಸಿದ ವಿಡಿಯೊ ಸಂವಾದದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಕೇಂದ್ರ ಸರ್ಕಾರ 2025-26ನೇ ಸಾಲಿನಲ್ಲಿ ಹಂಚಿಕೆ ಮಾಡಿರುವಷ್ಟು ಪ್ರಮಾಣದಲ್ಲಿ ರಸಗೊಬ್ಬರ ಬಾರದೆ ಕರ್ನಾಟಕದಲ್ಲಿ ಯೂರಿಯಾ ಕೊರತೆಯಾಗಿದೆ. ಬಾಕಿ ಇರುವ ಗೊಬ್ಬರವನ್ನು ತ್ವರಿತವಾಗಿ ಕಳುಹಿಸಿಕೊಡಬೇಕು ಎಂದರು. ಕರ್ನಾಟಕದಲ್ಲಿ ಮುಂಗಾರು ವಿಕಸಿತ ಕೃಷಿ ಅಭಿಯಾನವನ್ನು ಯಶಸ್ವಿಯಾಗಿ ನಡೆಸಲಾಗಿದೆ. ಜುಲೈ ತಿಂಗಳಿಗೆ 1.27 ಲಕ್ಷ ಟನ್ ಯೂರಿಯಾ ಮತ್ತು ಆಗಸ್ಟ್‌ಗೆ 1.40 ಲಕ್ಷ ಟನ್ ಯೂರಿಯಾ ಕೊರತೆ ಇದೆ. ಒಟ್ಟಾರೆ 2.67 ಲಕ್ಷ ಟನ್ ಯೂರಿಯಾ ಬೇಕಿದೆ ಎಂದರು.

## ಧರ್ಮಸ್ಥಳ ವಿರುದ್ಧ ಷಡ್ಯಂತ್ರ: ಡಿಸಿಎಂಗೆ ಗೊತ್ತಿರುವ ವಿಚಾರ ಸಿಎಂಗೆ ತಿಳಿದಿಲ್ಲವೇ

### ಧರ್ಮಸ್ಥಳಕ್ಕೆ ಕಪ್ಪು ಮಸಿ ಬಳಿಯಲು ಸರ್ಕಾರದ್ದೂ ಸಾಥ್ ಇದೆಯೇ?

• ಉದಯವಾಹಿನಿ, ಮಂಗಳೂರು


ಡಿಸಿಎಂ ಡಿಕೆ ಶಿವಕುಮಾರ್ ಧರ್ಮಸ್ಥಳದ ವಿರುದ್ಧ ಷಡ್ಯಂತ್ರ ನಡೆದಿದೆ ಎಂದಿದ್ದಾರೆ. ಆತುರದಲ್ಲಿ ಎಸ್‌ಐಟಿ ರಚಿಸಿದ ರಾಜ್ಯ ಸರ್ಕಾರದ್ದೇ ಷಡ್ಯಂತ್ರವಿದೆಯೇ ಎಂದು ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಪ್ರಲ್ಹಾದ ಜೋಶಿ ಚಾಟಿ ಬೀಸಿದ್ದಾರೆ.

ಡಿಕೆ ಶಿವಕುಮಾರ್ ಹೇಳಿಕೆಗೆ ಪ್ರತಿಕ್ರಿಯಿಸಿರುವ ಕೇಂದ್ರ ಸಚಿವರು, ಧರ್ಮಸ್ಥಳ ಪ್ರಕರಣದಲ್ಲಿ ಷಡ್ಯಂತ್ರ ಇರುವುದು ಡಿಸಿಎಂಗೆ ಗೊತ್ತಿದೆ ಅಂದಮೇಲೆ ಸಿಎಂ ಸಿದ್ದರಾಮಯ್ಯ ಅವರಿಗೆ ಗೊತ್ತಾಗದೇ ಹೋಯಿತೇ ಎಂದು ಪ್ರಶ್ನಿಸಿದ್ದಾರೆ. ಧರ್ಮಸ್ಥಳದಲ್ಲಿ ನೂರಾರು ಅನಾಮಿಕ ಶವಗಳನ್ನು ಹೂತು ಹಾಕಿದೆ ಎಂಬ ಅನಾಮಿಕನ ಆರೋಪ ಕುರಿತಂತೆ ಪ್ರಕರಣ ಕೈಗೆತ್ತಿಕೊಂಡ ರಾಜ್ಯ ಸರ್ಕಾರ, ಆತುರದಲ್ಲಿ ಎಸ್‌ಐಟಿ ರಚಿಸುವ ಅವಶ್ಯಕತೆ ಏನಿತ್ತು ಎಂದು ಜೋಶಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

**ಧರ್ಮಸ್ಥಳಕ್ಕೆ ಕಪ್ಪು ಮಸಿ-ಸರ್ಕಾರದ್ದೂ ಸಾಥ್ ಇದೆಯೇ:** ತನಿಖೆಗೆ ಒತ್ತಡ, ಒತ್ತಾಯ ಹೆಚ್ಚಿದ್ದರಿಂದ ರಾಜ್ಯ ಸರ್ಕಾರ ಎಸ್‌ಐಟಿ ತನಿಖೆಗೆ ಆದೇಶಿಸಿತ್ತು. ಆದರೆ, ಆತುರದಲ್ಲಿ ಇಂಥ ನಿರ್ಧಾರ ತೆಗೆದುಕೊಂಡು ಧರ್ಮಸ್ಥಳಕ್ಕೆ ಕಪ್ಪು ಮಸಿ ಬಳಿಯುವ ಯತ್ನಕ್ಕೆ ಸರ್ಕಾರವೂ ಸಾಥ್ ನೀಡಿದೆಯೇ ಇದರಲ್ಲಿ ಸರ್ಕಾರದ್ದೇ ಷಡ್ಯಂತ್ರ ಏನಾದರೂ ಇದೆಯೇ ಎಂದು ಸಚಿವ ಜೋಶಿ ಮಾರ್ಮಿಕವಾಗಿ ಹೇಳಿದ್ದಾರೆ.

### ಕೇಂದ್ರ ಸಚಿವ ಜೋಶಿ ಚಾಟಿ

**ಡಿಸಿಎಂಗೆ ಗೊತ್ತಾದ ವಿಚಾರ ಸಿಎಂಗೆ ಗೊತ್ತಾಗಲಿಲ್ಲವೇ:** ಡಿಸಿಎಂ ಡಿಕೆ ಶಿವಕುಮಾರ್, ಧರ್ಮಸ್ಥಳದ ವಿರುದ್ಧ ಷಡ್ಯಂತ್ರ ನಡೆದಿದೆ. ಯಾರದ್ದೆಂದು ಹೇಳಲ್ಲ. ಒಳ್ಳೇ ಯೋಜನೆ, ತಂತ್ರಗಾರಿಕೆ ಹೆಣೆದು ಕಪ್ಪು ಚುಕ್ಕೆ ತರಲು ನೋಡುತ್ತಿದ್ದಾರೆ. ಆದರೆ, ಯಾರು ಏನು ಅಂತ ಮಾತನಾಡಲು ನಾನು ಹೋಗುವುದಿಲ್ಲ. ತೇಜೋವಧೆ ಮೂಲಕ ನೂರಾರು ವರ್ಷಗಳ ಪರಂಪರೆ ಹಾಳು ಮಾಡಲು ಹೊರಟಿದ್ದಾರೆ ಎಂದಿದ್ದಾರೆ. ಡಿಸಿಎಂಗೆ ಗೊತ್ತಿರುವ ಈ ವಿಚಾರ ಸಿಎಂಗೆ ಗೊತ್ತಾಗಿರಲಿಲ್ಲವೇ ಎಂದು ಜೋಶಿ ಪ್ರಶ್ನಿಸಿದ್ದಾರೆ. ಡಿಕೆ ಶಿವಕುಮಾರ್ ಹೇಳುವಂತೆ ಷಡ್ಯಂತ್ರ ನಡೆಯುತ್ತಿದೆ ಎಂಬ ವಿಚಾರ ಗೊತ್ತಾದ ಮೇಲೂ ಸಿಎಂ ಸಿದ್ದರಾಮಯ್ಯ ಅವರು ತನಿಖೆಗೆ ಎಸ್‌ಐಟಿ ರಚಿಸಿದ್ದೇಕೆ ಇಷ್ಟೆಲ್ಲಾ ಹೈಡ್ರಾಮಾ ಮಾಡುವ ಪ್ರಸಂಗವಾದರೂ ಏನಿತ್ತು ಎಂದು ಕೇಂದ್ರ ಸಚಿವರು ವಾಗ್ದಾಳಿ ನಡೆಸಿದ್ದಾರೆ.



**ಗುಡ್ಡ ಅಗೆದರೂ ಇಲಿ ಹಿಡಿಯದಂತಾದ ಸರ್ಕಾರ:** ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸತ್ಯ ತಿಳಿದಿದ್ದರೂ ಎಸ್‌ಐಟಿ ತನಿಖೆ, ಶೋಧ ಕಾರ್ಯ, ಅಗೆತ ಕಾರ್ಯಾಚರಣೆಗೆ ಆದೇಶ ನೀಡಿದ್ದಾರೆಯೇ ಎಂದು ಪ್ರಶ್ನಿಸಿದ್ದಾರೆ. ಪೊಲೀಸ್ ತನಿಖೆ ಬಳಿಕ ಕುರುಹುಗಳೇನಾದರೂ ಸಿಕ್ಕಿದ್ದೇ ಆಗಿದ್ದಲ್ಲಿ ಎಸ್‌ಐಟಿ ರಚಿಸಿ ಹೆಚ್ಚಿನ ತನಿಖೆ ಮುಂದುವರಿಸಬಹುದಿತ್ತು. ಆದರೆ, ಸರ್ಕಾರ ಗುಡ್ಡ ಅಗೆದು ಇಲಿ ಹಿಡಿಯದಂತೆಯೂ ಆಗಿದೆ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಟೀಕಿಸಿದರು. ಇನ್ನೊಂದು ಕಡೆ, ಎಡಪಂಥೀಯ ಸಂಘಟನೆಗಳ ಒತ್ತಡದಿಂದಾಗಿ ನಾವು ಧರ್ಮಸ್ಥಳ ಪ್ರಕರಣವನ್ನು ಎಸ್‌ಐಟಿಗೆ ನೀಡಬೇಕಾಯಿತು ಎಂದು ರಾಜ್ಯ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಕೂಡಾ ಹೇಳಿದ್ದರು. 13ನೇ ಪಾಯಿಂಟ್ ನಲ್ಲಿ ಸಾಕಷ್ಟು ಶವವನ್ನು ಹೂತಿದ್ದೇನೆ ಎಂದು ಅನಾಮಿಕ ಹೇಳಿದ್ದ. ಆದರೆ ಎರಡೆರಡು ಬಾರಿ ಬಗೆದರೂ ಏನೂ ಸಿಕ್ಕಿರಲಿಲ್ಲ. ಹೂತಿದ್ದು ಹೌದು, ಈಗ ಶವ ಸಿಗಲಿಲ್ಲವೆಂದರೆ ಅದಕ್ಕೆ ನಾನು ಹೊಣೆಯಲ್ಲ ಎಂದು ಅನಾಮಿಕ, ಮಾಧ್ಯಮದ ಜೊತೆಗಿನ ಸಂದರ್ಶನದಲ್ಲಿ ಹೇಳಿದ್ದಾನೆ.

# ಸತೀಶ್ ಸೈಲ್ ಮನೆ ಮೇಲೆ ಇಡಿ ರೇಡ್: ಕೆಜಿಗಟ್ಟಲೆ ಬಂಗಾರ, ಕೋಟಿಗಟ್ಟಲೆ ಹಣ ಪತ್ತೆ

## ■ 1.68 ಕೋಟಿ ರೂ. ನಗದು ಮತ್ತು 6.75 ಕೆಜಿ ಚಿನ್ನ ಪತ್ತೆ ■ ಸತೀಶ್ ಸೈಲ್ ಅವರಿಗೆ 7 ವರ್ಷಗಳ ಜೈಲು ಶಿಕ್ಷೆ

• ಉದಯವಾಹಿನಿ, ಕಾರವಾರ

ಉತ್ತರ ಕನ್ನಡದ ಶಾಸಕ ಸತೀಶ್ ಸೈಲ್ ಅವರ ನಿವಾಸದ ಮೇಲೆ ಇ.ಡಿ. ಅಧಿಕಾರಿಗಳು ಆ. 14ರಂದು ದಾಳಿ ನಡೆಸಿದ್ದರು. ಈ ಸಂದರ್ಭದಲ್ಲಿ ಮನೆಯಲ್ಲಿ ಕೋಟ್ಯಂತರ ಹಣ, ಕೆಜಿಗಟ್ಟಲೆ ಚಿನ್ನ ಪತ್ತೆಯಾಗಿದೆ. ಆ ಸಂದರ್ಭದಲ್ಲಿ ಸತೀಶ್ ಸೈಲ್ ಮನೆಯಲ್ಲಿರಲಿಲ್ಲ. ವಿಧಾನಸಭಾ ಅಧಿವೇಶನ ನಡೆಯುತ್ತಿರುವುದರಿಂದ ಅವರು ಬೆಂಗಳೂರಿನಲ್ಲಿದ್ದರು. ದಿನವಿಡೀ ಮನೆಯನ್ನು ಜಾಲಾಡಿರುವ ಅಧಿಕಾರಿಗಳು, ಕೈಗೆ ಸಿಕ್ಕ ಹಣ, ಚಿನ್ನವನ್ನು ಜಪ್ತಿ ಮಾಡಿದ್ದಾರೆ.

ಸೈಲ್ ನಿವಾಸ ಸೇರಿದಂತೆ ಹೊಸಪೇಟೆ, ವಿಜಯನಗರ ಗಣಿ ಉದ್ಯಮಿಗಳ ಮನೆಗಳ ಮೇಲೂ ದಾಳಿ ನಡೆಸಲಾಗಿತ್ತು. ತಾವು ದಾಳಿ ನಡೆಸಿದಾಗ ಸೈಲ್ ಅವರ ನಿವಾಸದಲ್ಲಿ ಸಿಕ್ಕಿರುವ ಹಣದ ಬಗ್ಗೆ ಇ.ಡಿ. ತನ್ನ ಅಧಿಕೃತ ಎಕ್ಸ್ ಜಾಲತಾಣದಲ್ಲಿ ಈ ಬಗ್ಗೆ ಮಾಹಿತಿ ಹಂಚಿಕೊಂಡಿದೆ. ಆ. 13 ಹಾಗೂ 14ರಂದು ಕಾಂಗ್ರೆಸ್ ಶಾಸಕ ಸತೀಶ್ ಸೈಲ್ ಅವರಿಗೆ ಸಂಬಂಧಿಸಿದ ಕಾರವಾರ, ಗೋವಾ, ಮುಂಬೈ, ನವದೆಹಲಿಯ ಸ್ಥಳಗಳ ಮೇಲೆ ಏಕಕಾಲದಲ್ಲಿ ನಡೆಸಲಾಗಿರುವ



ದಾಳಿಯಲ್ಲಿ 1.68 ಕೋಟಿ ರೂ. ನಗದು, 6.75 ಕೆಜಿಯಷ್ಟು ಚಿನ್ನ (ಆಭರಣ, ಬಿಸ್ಕೆಟ್ ಸೇರಿ), ಬ್ಯಾಂಕ್ ಖಾತೆಗಳಲ್ಲಿ 14.13 ಕೋಟಿ ರೂ. ಠೇವಣಿ ಸಿಕ್ಕಿದೆ. ಬ್ಯಾಂಕಿನಲ್ಲಿರುವ ಠೇವಣಿಯನ್ನು ಫ್ರೀಜ್ ಮಾಡಲಾಗಿದೆ ಎಂದು ಇ.ಡಿ ತಿಳಿಸಿದೆ.

### ಶಿಕ್ಷೆ ತೀರ್ಪು ಅಮಾನತಿನಲ್ಲಿಟ್ಟ ಹೈಕೋರ್ಟ್

ಕಾಂಗ್ರೆಸ್ ಶಾಸಕ ಸತೀಶ್ ಸೈಲ್ ಅವರಿಗೆ ಬೇಲೆಕೇರಿ ಬಂದರು ಅದಿರು ನಾಪತ್ತೆ ಪ್ರಕರಣಕ್ಕೆ ಸಂಬಂಧಿಸಿದಂತೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯವು ವಿಧಿಸಿದ್ದ 7 ವರ್ಷಗಳ ಜೈಲು ಶಿಕ್ಷೆ ಮತ್ತು ದುಬಾರಿ ದಂಡವನ್ನು ಹೈಕೋರ್ಟ್ ಅಮಾನತುಗೊಳಿಸಿದೆ. ಒಟ್ಟು 6 ಪ್ರಕರಣಗಳಲ್ಲಿ ವಿಶೇಷ ನ್ಯಾಯಾಲಯ ನೀಡಿದ್ದ ಶಿಕ್ಷೆಯನ್ನು ಅಮಾನತ್ತಿನಲ್ಲಿಡುವಂತೆ ಹೈಕೋರ್ಟ್ ಬುಧವಾರ ಮಹತ್ವದ ಆದೇಶ ಹೊರಡಿಸಿದೆ. ಈ ಹಿನ್ನೆಲೆಯಲ್ಲಿ, ಸತೀಶ್ ಸೈಲ್ ಮತ್ತು ಇತರ ಆರೋಪಿಗಳು ಶೀಘ್ರದಲ್ಲೇ ಜೈಲಿನಿಂದ ಬಿಡುಗಡೆಯಾಗುವ ಸಾಧ್ಯತೆ ಇದೆ.

ಅಂದಹಾಗೆ, ಸತೀಶ್ ಸೈಲ್ ಅವರು ಬೇಲೇಕೇರಿ ಬಂದರಿನಿಂದ ಅದಿರನ್ನು ಕಳ್ಳಸಾಗಣೆ ಮಾಡಿರುವ ಆರೋಪಕ್ಕೊಳಗಾಗಿರುವ ಅವರು,, ಇತ್ತೀಚೆಗೆ ಬೆಂಗಳೂರಿನಲ್ಲಿರುವ ಜನಪ್ರತಿನಿಧಿ ನ್ಯಾಯಾಲಯದಿಂದ ಶಿಕ್ಷೆಗೆ ಗುರಿಯಾಗಿದ್ದಾರೆ. ಅದೇ ಪ್ರಕರಣಕ್ಕೆ ಸಂಬಂಧಿಸಿದಂತೆ, ಅಕ್ರಮ ಹಣಕಾಸು ವರ್ಗಾವಣೆ ಪ್ರಕರಣವೊಂದರಲ್ಲಿ ಸತೀಶ್ ಸೈಲ್ ಅವರ ನಿವಾಸದ ಮೇಲೆ ದಾಳಿ ನಡೆಸಲಾಗಿದೆ ಎಂದು ಇ.ಡಿ. ತನ್ನ ಎಕ್ಸ್ ಜಾಲತಾಣದ ಪೋಸ್ಟ್‌ನಲ್ಲಿ ಉಲ್ಲೇಖಿಸಿದೆ.

**ಸತೀಶ್ ಸೈಲ್ ಯಾರು? ಬೇಲೆಕೇರಿ ಕೇಸ್ ಗೂ ಅವರಿಗೂ ಏನು ಸಂಬಂಧ ?:** ಇಲ್ಲಿ ಬೆಂಗಳೂರಿನ ಜನಪ್ರತಿನಿಧಿ ನ್ಯಾಯಾಲಯದಿಂದ 2009-10ರ ಬೇಲೆಕೇರಿ ಅದಿರು ನಾಪತ್ತೆ ಪ್ರಕರಣಕ್ಕೆ ಸಂಬಂಧಿಸಿದಂತೆ 7 ವರ್ಷಗಳ ಜೈಲು ಶಿಕ್ಷೆ, 9.6 ಕೋಟಿ ರೂ. ದಂಡ ವಿಧಿಸಲ್ಪಟ್ಟಿರುವ ಕಾರವಾರ ಶಾಸಕ ಸತೀಶ್ ಸೈಲ್ ಅವರ ಹಿನ್ನೆಲೆ ಹಾಗೂ ಈ ಪ್ರಕರಣದೊಂದಿಗಿನ ಅವರ ಸಂಬಂಧದ ಕುರಿತು ವಿವರ ನೀಡಲಾಗಿದೆ. ಸತೀಶ್ ಸೈಲ್ ಅವರು ರಾಜಕೀಯಕ್ಕೆ ಬರುವ ಮುನ್ನ ಗಣಿ ಉದ್ಯಮದಲ್ಲಿದ್ದರು ಮತ್ತು ಅವರ ಕಂಪನಿಗಳು ಅದಿರು ರಫ್ತು ವ್ಯವಹಾರದಲ್ಲಿ ತೊಡಗಿದ್ದವು.

ಬೇಲೆಕೇರಿ ಬಂದರಿನ ಮೂಲಕ ರಫ್ತಾಗಿದ್ದ ಅದಿರನ್ನು ಅಕ್ರಮವಾಗಿ ಸಾಗಿಸಿದ ಆರೋಪದ ಮೇಲೆ ಅವರ ವಿರುದ್ಧ ಸಿಬಿಐ ಪ್ರಕರಣ ದಾಖಲಿಸಿತ್ತು, ಇದೀಗ ನ್ಯಾಯಾಲಯವು ಅವರನ್ನು ತಪ್ಪಿತಸ್ಥರೆಂದು ತೀರ್ಪು ನೀಡಿದೆ.

| ಈ ದಿನದ ದರ | | | | |
|---|---|---|---|---|
| ಪೆಟ್ರೋಲ್: 103.50 ₹/L | ಡೀಸೆಲ್ : 90.03 ₹/L | ಬಂಗಾರ: ₹10,124/Gram24ct | ₹9,280/Gram22ct | ಬೆಳ್ಳಿ: ₹116.00/Gram |

# 79ನೇ ಸ್ವಾತಂತ್ರ್ಯ ದಿನಾಚರಣೆ ಪ್ರಯುಕ್ತ ಕಾಲ್ನಡಿಗೆ ಜಾಥ

• ಉದಯವಾಹಿನಿ, ಬೆಂಗಳೂರು

ಬಿಬಿಎಂಪಿ ಕೇಂದ್ರ ಕಛೇರಿಯಲ್ಲಿ ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಸ್ವಾತಂತ್ರ್ಯ ದಿನಾಚರಣೆ ಪ್ರಯುಕ್ತ ಕಾಲ್ನಡಿಗೆ ಜಾಥ ಮತ್ತು ಕಾಶ್ಮೀರ ಪೆಹಲ್ಗಾಮ್‌ನಲ್ಲಿ ನವೆಂಬರ್ 22ರಂದು ರಾಷ್ಟ್ರೀಯ ಕರ್ನಾಟಕ ರಾಜ್ಯೋತ್ಸವ, ಉಗ್ರರ ದಾಳಿಯಲ್ಲಿ ಮಡಿದವರಿಗೆ ನುಡಿನಮನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಇದರ ಕುರಿತು ಟೀಸರ್ ಮತ್ತು ಪೋಸ್ಟರ್ ಬಿಡುಗಡೆ ಸಮಾರಂಭ. ಬಿಬಿಎಂಪಿ ಆಡಳಿತಗಾರರಾದ ತುಷಾರ್ ಗಿರಿನಾಥ್ ರವರು ಮುಖ್ಯ ಆಯುಕ್ತರಾದ ಮಹೇಶ್ವರರಾವ್ ರವರು, ವಿಶೇಷ ಆಯುಕ್ತರುಗಳಾದ ಡಾ.ಹರೀಶ್ , ಮುನೀಶ್ ಮೌದ್ಗಿಲ್, ಪ್ರೀತಿ ಗೆಹ್ಲೋಟ್ ರವರು ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರಾದ ಎ.ಅಮೃತ್ ರಾಜ್ ರವರು ಸ್ವಾತಂತ್ರ್ಯೋತ್ಸವದ ಕಾಲ್ನಡಿಗೆ ಜಾಥಗೆ ಚಾಲನೆ, ರಾಷ್ಟ್ರೀಯ ಕರ್ನಾಟಕ ರಾಜ್ಯೋತ್ಸವ ಪೋಸ್ಟರ್, ಟೀಸರ್ ಬಿಡುಗಡೆ ಮಾಡಿದರು. ಎ.ಅಮೃತ್ ರಾಜ್ ರವರು ಮಾತನಾಡಿ ಕನ್ನಡ ಭಾಷೆಗೆ 2500ಸಾವಿರ ವರ್ಷಗಳ ಇತಿಹಾಸವಿದೆ. ಕನ್ನಡ ಭಾಷೆ ಉಳಿಸಿ, ಬೆಳೆಸಬೇಕು ಪ್ರತಿಯೊಬ್ಬರು ಕನ್ನಡ ಬಳಸಬೇಕು. ಕನ್ನಡ ಭಾಷೆ ಉಳಿಸಿ, ಬೆಳೆಸಿ ಬೆಳಗಿಸಲು ನಮ್ಮ ಸಂಘವು ರಾಜ್ಯ, ಹೊರ ರಾಜ್ಯ ವಿದೇಶಗಳಲ್ಲಿ ಸಹ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮ ಹಮ್ಮಿಕೊಂಡು ಬರಲಾಗುತ್ತಿದೆ. ಕನ್ನಡ ಭಾಷೆ ಉಳಿಸಲು, ನಾಡಿನ


ಉದಯವಾಹಿನಿ ಚಿತ್ರ

**ಪ್ರಥಮ ಬಾರಿಗೆ 2022ರಲ್ಲಿ ಕಾಶಿಯಲ್ಲಿ ರಾಷ್ಟ್ರೀಯ ಕರ್ನಾಟಕ ರಾಜ್ಯೋತ್ಸವ, 2023ರಲ್ಲಿ ನೇಪಾಳದಲ್ಲಿ ಅಂತರಾಷ್ಟ್ರೀಯ ಕರ್ನಾಟಕ ರಾಜ್ಯೋತ್ಸವ ಮತ್ತು 2024ರಲ್ಲಿ ಹರಿದ್ವಾರದಲ್ಲಿ ರಾಷ್ಟ್ರೀಯ ಕರ್ನಾಟಕ ರಾಜ್ಯೋತ್ಸವ ಇದೀಗ 2025ರಲ್ಲಿ ಹೆಲ್ಗಾಮ್‌ನಲ್ಲಿ ಕರ್ನಾಟಕ ರಾಜ್ಯೋತ್ಸವ, ಉಗ್ರರ ದಾಳಿಯಲ್ಲಿ ಮಡಿದವರಿಗೆ ನುಡಿ ನಮನ ಕಾರ್ಯಕ್ರಮವನ್ನು ನವೆಂಬರ್ 22ರಂದು ಆಚರಿಸಲಾಗುತ್ತಿದೆ ಎಂದು ಹೇಳಿದರು.**

ಕಲೆ ಸಾಹಿತ್ಯ, ಸಂಗೀತ ವಿವಿಧ ಕಲಾವಿದರನ್ನ ಪ್ರೋತ್ಸಾಹ, ಸಹಕಾರ ನೀಡುತ್ತಿದೆ. ಬಿಬಿಎಂಪಿ ಕೇಂದ್ರ ಕಛೇರಿಯಿಂದ ಎಂ.ಜಿ.ರಸ್ತೆ ಗಾಂಧಿ ಪ್ರತಿಮೆವರೆಗೆ ಕಾಲ್ನಡಿಗೆ ಜಾಥ ಮೂಲಕ ಸಾಗಿ ಮಹಾತ್ಮ ಗಾಂಧೀಜಿರವರ ಪ್ರತಿಮೆಗೆ ಮಾಲಾರ್ಪಣೆ ಮಾಡಲಾಯಿತು. ಬಿಬಿಎಂಪಿ ಅಧಿಕಾರಿ, ನೌಕರರ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು, ಅಧಿಕಾರಿ, ನೌಕರರು ಪಾಲ್ಗೊಂಡಿದ್ದರು.

## ಸ್ವತಂತ್ರ್ಯ ದಿನಾಚರಣೆ ಪ್ರಯುಕ್ತ ರಾಷ್ಟ್ರಧ್ವಜ ಧ್ವಜಾರೋಹಣ

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ಸ್ವತಂತ್ರ್ಯ ದಿನಾಚರಣೆ ಪ್ರಯುಕ್ತ ಅಕ್ಷಯ ವಿಪ್ರಮಹಾಸಭದ ಪ್ರಧಾನ ಕಚೇರಿಯಲ್ಲಿ ಅಧ್ಯಕ್ಷರಾದ ಎನ್. ಕೆ. ರಾಮಚಂದ್ರ ರಾವ್, ಗೌರವ ಅಧ್ಯಕ್ಷರಾದ ಡಾ, ಕೀರ್ತಿರಾಜ್‌ರವರು ಧ್ವಜಾರೋಹಣ ಮಾಡಿ ಸ್ವಾತಂತ್ರ್ಯ ದಿನಾಚರಣೆಯ ಕಾರ್ಯಕ್ರಮವನ್ನು ವಿದ್ಯುಕ್ತವಾಗಿ ನೆರವೇರಿಸಿದರು. ಕಚೇರಿಗೆ ಆಗಮಿಸಿದ ಎಲ್ಲಾ ಪದಾಧಿಕಾರಿಗಳು, ಸದಸ್ಯರುಗಳು ರಾಷ್ಟ್ರಗೀತೆ ಹಾಡಿ ರಾಷ್ಟ್ರಧ್ವಜಕ್ಕೆ ಗೌರವ ವಂದನೆ ಸಲ್ಲಿಸಿದರು ನಂತರ ಎಲ್ಲರಿಗೂ ಸಿಹಿಯನ್ನು ವಿತರಿಸಲಾಯಿತು.

ಈ ಸಂದರ್ಭದಲ್ಲಿ ಪ್ರಧಾನ ಕಾರ್ಯದರ್ಶಿ ರಾಘವೇಂದ್ರ ರಾವ್, ಕಾರ್ಯದರ್ಶಿ ಎನ್.ಎಸ್. ಸುಧೀಂದ್ರ ರಾವ್, ಉಪಾಧ್ಯಕ್ಷರಾದ ಲಕ್ಷ್ಮೀಶ, ಶ್ರೀಪ್ರಕಾಶ್ ಜಂಟಿ ಕಾರ್ಯದರ್ಶಿಗಳಾದ ತ. ನಾ. ಶಾಂತಕುಮಾರ್, ಮಹೇಶ್, ಡಾ, ಗುರುಶಂಕರ್, ಅಶ್ವತ್, ಭರತ್ ಕಾಡನೂರ್,ಪ್ರಾಣೇಶ್ ರಾವ್ ಸೇರಿದಂತೆ ಪಧಾಧಿಕಾರಿಗಳು ಹಾಜರಿದ್ದರು.

## ಸ್ವಾತಂತ್ರ್ಯೋತ್ಸವದ ಅಂಗವಾಗಿ ಸರ್ವಧರ್ಮ ಸಮನ್ವಯ ಪ್ರಾರ್ಥನೆ



ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಮುನೇಶ್ವರ ಬ್ಲಾಕ್ ಅವಲಹಳ್ಳಿ ಜ್ಞಾನ ಕಾಶಿಯ ಪಟೇಲ್ ಗುಳ್ಳಪ್ಪ ಶಿಕ್ಷಣ ಸಂಸ್ಥೆಯಲ್ಲಿ 79ನೇ ಸ್ವಾತಂತ್ರ್ಯೋತ್ಸವದ ಅಂಗವಾಗಿ ಮಾಜಿ ಉಪ ಮಹಾಪೌರ ಶ್ರೀ ಎಂ. ಲಕ್ಷ್ಮೀನಾರಾಯಣರವರು ಧ್ವಜಾರೋಹಣ ನೆರವೇರಿಸಿದರು. ಪಟೇಲ್ ಗುಳ್ಳಪ್ಪ ಶಿಕ್ಷಣ ಸಂಸ್ಥೆಗಳ ಸಂಸ್ಥಾಪಕರು ಮತ್ತು ಕನ್ನಡ ಸಾಹಿತ್ಯ ಪರಿಷತ್ತಿನ ಕೋಶಾಧ್ಯಕ್ಷರಾದ ಡಾ. ಬಿ ಎಂ ಪಟೇಲ್ ಪಾಂಡುರವರು ಅಧ್ಯಕ್ಷತೆ ವಹಿಸಿದ್ದ ಸಮಾರಂಭದಲ್ಲಿ ಸೂರ್ಯ ಕಿರಣ ಫೌಂಡೇಶನ್ ವತಿಯಿಂದ ವಿಶಿಷ್ಟವಾದ ಸರ್ವಧರ್ಮ ಸಮನ್ವಯ ಪ್ರಾರ್ಥನಾ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಸೂರ್ಯ ಕಿರಣ ಫೌಂಡೇಶನ್ ನ ಸಂಸ್ಥಾಪಕ ಕಾರ್ಯದರ್ಶಿ ಡಾ.ರಮೇಶ್ ರಾಜನಹಳ್ಳಿರವರ ನೇತೃತ್ವದಲ್ಲಿ ಹಿಂದೂ ಧರ್ಮದ ಪ್ರಾರ್ಥನೆ ಮತ್ತು ಆಶಯವನ್ನು ಸಂಸ್ಕೃತಿ ಚಿಂತಕ ಡಾ. ಗುರುರಾಜ ಪೋಶೆಟ್ಟಿಹಳ್ಳಿ ತಿಳಿಸುತ್ತ ಸರ್ವ ಜನಾಂಗದ ಶಾಂತಿಯ ತೋಟವಾದ ಭಾರತದಲ್ಲಿ ಭಾವೈಕ್ಯದ ಸಹೋದರ ಭಾವನೆಯ ವಿಶಾಲ ಚಿಂತನೆ ಸನಾತನ ಧರ್ಮದ ಸತ್ವ -ತತ್ವ ಎಂದು ಹೇಳಿದರು. ಇಸ್ಲಾಂ ಧರ್ಮದ ಪ್ರಾರ್ಥನೆಯನ್ನು ಅಕ್ತರ್ ಅಲಿ, ಕ್ರೈಸ್ತ ಧರ್ಮದ ಪ್ರಾರ್ಥನೆಯನ್ನು ವಿಲಿಯಂ ಪ್ರಜ್ವಲ್, ಸಿಖ್ ಧರ್ಮದ ಪ್ರಾರ್ಥನೆಯನ್ನು ರಂದೀಪ್ ಹಾಗು ಜೈನ ಧರ್ಮದ ಪ್ರಾರ್ಥನೆಯನ್ನು ರೊ. ವಿಜಯರಾಜ ಎಸ್ ರವರು ನಡೆಸಿಕೊಟ್ಟರು. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸಹಾಯಕ ಕಾರ್ಯ ಪಾಲಕ ಅಭಿಯಂತರ ಬಿ.ಆರ್.ಚಂದ್ರಶೇಖರ್ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

## ಟಾರ್ಪಾಲ್ ವಿಚಾರಕ್ಕೆ ಶುರುವಾದ ಜಗಳ ಕೊಲೆಯಲ್ಲಿ ಅಂತ್ಯ

• ಉದಯವಾಹಿನಿ, ಬೆಂಗಳೂರು

ಟಾರ್ಪಾಲ್ ವಿಚಾರಕ್ಕೆ ಜಗಳ ಉಂಟಾಗಿ ಕೂಲಿ ಕಾರ್ಮಿಕರೊಬ್ಬರನ್ನು ದೊಣ್ಣೆಯಿಂದ ಹೊಡೆದು ಕೊಲೆ ಮಾಡಿರುವ ಘಟನೆ ಶುಕ್ರವಾರ ಮುಂಜಾನೆ ಜೆಪಿ ನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ. ರಾಮನಗರ ತಾಲ್ಲೂಕಿನ ನಿವಾಸಿ ಚಿಕ್ಕಣ್ಣ (60) ಕೊಲೆಯಾದ ಕೂಲಿ ಕಾರ್ಮಿಕ.ಇವರು ಬನಶಂಕರಿಯ ಸಾರಕ್ಕಿ ಮಾರ್ಕೆಟ್‌ನಲ್ಲಿ ಕೂಲಿ ಕೆಲಸ ಮಾಡಿಕೊಂಡು ಎಲ್ಲೆಂದರಲ್ಲಿ ಮಲಗುತ್ತಿದ್ದರು.

ರಾತ್ರಿ ಮಳೆ ಬಂದ ಪರಿಣಾಮ ಮಾರ್ಕೆಟ್ ಸಮೀಪದಲ್ಲಿರುವ ನಿರ್ಮಾಣ ಹಂತದ ಕಟ್ಟಡಕ್ಕೆ ಹೋಗಿ ಅಲ್ಲಿದ್ದ ಟಾರ್ಪಾಲ್ ಅನ್ನು ತೆಗೆದುಕೊಂಡು ಹಾಸಿಕೊಂಡು ಮಲಗಿದ್ದಾರೆ. ನಂತರ ಅಲ್ಲಿಗೆ ಮುಂಜಾನೆ ಬಂದ ಚಿಂದಿ ಆಯುವ ವ್ಯಕ್ತಿಯೊಬ್ಬ ನಾನು ಹಾಸಿಕೊಂಡು ಮಲಗುವ ಟಾರ್ಪಾಲ್ ಅನ್ನು ನೀನು ಏಕೆ ತೆಗೆದುಕೊಂಡು ಮಲಗಿದ್ದೀಯ ಎಂದು ಜಗಳ ಮಾಡಿದ್ದಾನೆ. ಜಗಳ ವಿಕೋಪಕ್ಕೆ ಹೋದಾಗ ಆರೋಪಿ ಕಟ್ಟಡದಲ್ಲಿದ್ದ ದೊಣ್ಣೆಯೊಂದನ್ನು ತೆಗೆದುಕೊಂಡು ತಲೆ ಹಾಗೂ ಇನ್ನಿತರ ಭಾಗಗಳ ಮೇಲೆ ಹಲ್ಲೆ ಮಾಡಿ ಪರಾರಿಯಾಗಿದ್ದಾನೆ. ಹಲ್ಲೆಯಿಂದ ತೀವ್ರ ಗಾಯಗೊಂಡ ಚಿಕ್ಕಣ್ಣ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಸುದ್ದಿ ತಿಳಿದ ಜೆಪಿನಗರ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸಿ ಶವವನ್ನು ಆಸ್ಪತ್ರೆಗೆ ರವಾನಿಸಿ ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ. ಕೊಲೆಮಾಡಿ ಪರಾರಿಯಾಗಿರುವ ಆರೋಪಿಯ ಬಂಧನಕ್ಕಾಗಿ ಪೊಲೀಸರು ಬಲೆ ಬೀಸಿದ್ದಾರೆ.

## ಅವಾಚ್ಯ ಶಬ್ದಗಳಿಂದ ಬೈದು ಪೊಲೀಸ್ ಕರ್ತವಕ್ಕೆ ಅಡ್ಡಿ: ಇಬ್ಬರ ವಿರುದ್ಧ ಎಫ್‌ಐಆರ್

• ಉದಯವಾಹಿನಿ, ಬೆಂಗಳೂರು

ಪೊಲೀಸರ ಕರ್ತವ್ಯಕ್ಕೆ ಅಡ್ಡಿಪಡಿಸಿದ ಆರೋಪದಡಿ ಇಬ್ಬರ ವಿರುದ್ಧ ಯಲಹಂಕ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಯಲಹಂಕ ನ್ಯೂ ಟೌನ್ ನಿವಾಸಿಗಳಾದ ಮಹಮದ್ ಸರ್ಬಾಸ್ ಹಾಗೂ ಹೀರಲ್ ವ್ಯಾಸಾ ಅವರ ವಿರುದ್ಧ ಪ್ರಕರಣ ದಾಖಲಾಗಿದೆ. ನಿರ್ಬಂಧಿತ ಸ್ಥಳದಲ್ಲಿ ನಿಲುಗಡೆ ಮಾಡಿದ್ದ ವಾಹನಗಳನ್ನು ಯಲಹಂಕ ಸಂಚಾರ ಠಾಣೆಯ ಪೊಲೀಸರು ಪತ್ತೆಹಚ್ಚಿ ಆ ವಾಹನಗಳಿಗೆ ಸ್ಟೀಲ್ ಕ್ಯಾಪ್ ಹಾಕುತ್ತಿದ್ದರು. ಆರೋಪಿ ಮಹಮದ್ ಸರ್ಬಾಸ್ ಸಹ ನಿರ್ಬಂಧಿತ ಸ್ಥಳದಲ್ಲಿ ಬೈಕ್ ನಿಲುಗಡೆ ಮಾಡಿದ್ದರು. ವೀಲ್ ಕ್ಯಾಪ್ ಹಾಕಲು ಮುಂದಾಗಿದ್ದ ಪೊಲೀಸರ ಕರ್ತವ್ಯಕ್ಕೆ ಅಡ್ಡಿಪಡಿಸಿ ಅವಾಚ್ಯ ಶಬ್ದಗಳಿಂದ ಆರೋಪಿಗಳು ನಿಂದಿಸಿದ್ದರು ಎಂದು ಮೂಲಗಳು ತಿಳಿಸಿವೆ. ಆರೋಪಿಗಳು ಪೊಲೀಸರಿಗೆ ನಿಂದನೆ ಮಾಡುತ್ತಿರುವ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ಪೊಲೀಸರ ಮೇಲೆ ಕೂಗಾಡುವುದರಿಂದ ನೀವು ವೀರರಾಗುವುದಿಲ್ಲ. ಅಸಭ್ಯ ಪದಗಳು ಮತ್ತು ಬೆದರಿಕೆಗಳು ನಿಮಗೆ ವಿಶೇಷ ವ್ಯಕ್ತಿಯಂತೆ ವಿಶೇಷ ಉಪಚಾರದ ಪಾಸ್‌ಗೆ ಕಾರಣವಾಗಬಹುದು. ಅದುವೇ ನೇರ ಪೊಲೀಸ್ ಠಾಣೆಗೆ ಎಚ್ಚರಿಕೆ ಬೆಂಗಳೂರು ನಗರ ಪೊಲೀಸರು ನಿಮ್ಮನ್ನು ಗಮನಿಸುತ್ತಿದ್ದಾರೆ ಎಂದು ಎಕ್ಸ್ ಖಾತೆಯಲ್ಲಿ ಪೊಲೀಸರು ಎಚ್ಚರಿಕೆ ನೀಡಿದ್ದಾರೆ.

## 79ನೇ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಕಾಂಗ್ರೆಸ್ ಕಚೇರಿಯಲ್ಲಿ ಧ್ವಜಾರೋಹಣ

# ಸಂವಿಧಾನ ರಕ್ಷಿಸಲು ಪಕ್ಷದ ಕಾರ್ಯಕರ್ತರಿಗೆ 5 ಶಪಥ ಬೋಧಿಸಿದ ಡಿಕೆಶಿ

• ಉದಯವಾಹಿನಿ, ಬೆಂಗಳೂರು

ಪಾರದರ್ಶಕ ಚುನಾವಣೆ ವ್ಯವಸ್ಥೆಗೆ ಹಾನಿ ಮಾಡಿ, ಪ್ರಜಾಪ್ರಭುತ್ವ, ಸಂವಿಧಾನಕ್ಕೆ ಧಕ್ಕೆಯುಂಟು ಮಾಡಿರುವವರ ವಿರುದ್ಧ ನಿರಂತರ ಹೋರಾಟದ ಅಗತ್ಯವಿದೆ ಎಂದು ಪ್ರತಿಪಾದಿಸಿರುವ ಉಪಮುಖ್ಯಮಂತ್ರಿ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಪಕ್ಷದ ಕಾರ್ಯಕರ್ತರಿಗೆ 5 ಶಪಥಗಳನ್ನು ಬೋಧಿಸಿದ್ದಾರೆ.79ನೇ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಕಾಂಗ್ರೆಸ್ ಕಚೇರಿಯಲ್ಲಿ ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಅವರು, ಮತಗಳ್ಳತನದ ಮೂಲಕ ದೇಶದ ಗೌರವಕ್ಕೆ ಧಕ್ಕೆ ತರಲಾಗಿದೆ ಎಂದು ಆರೋಪಿಸಿದರು. ನಾವು ಧ್ವಜಾರೋಹಣ ನೆರವೇರಿಸಿ ರಾಷ್ಟ್ರಗೀತೆ ಹಾಡಿದರೆ ಸಾಲದು. ಭಾರತಕ್ಕೆ ಸ್ವಾತಂತ್ರ್ಯ ತಂದುಕೊಟ್ಟಿದ್ದು ಕಾಂಗ್ರೆಸ್ ಪಕ್ಷ ಎಂದು ಮುಂದಿನ ಪೀಳಿಗೆಗೆ ಧೈರ್ಯವಾಗಿ ಹೇಳಬೇಕಿದೆ. ಇಲ್ಲವಾದರೆ ದೇಶ ದ್ರೋಹಿಗಳು ನಮಗೆ ದೇಶ ಪ್ರೇಮದ ಪಾಠ ಮಾಡುತ್ತಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಮಹಾತಗಾಂಧೀಜಿ, ಜವಾಹರ್ ಲಾಲ್‌ನೆಹರೂ, ಸರ್ದಾರ್‌ವಲ್ಲಭಭಾಯಿ ಪಟೇಲ್ ಅವರಂತಹ ಮಹಾನ್ ನಾಯಕರು ಸ್ವಾತಂತ್ರ್ಯಕ್ಕೆ ಹೋರಾಟ ನಡೆಸಿದ್ದಾರೆ.

ಆದರೆ ಕೆಲವು ದೇಶ ದ್ರೋಹಿಗಳು ದೇಶಕ್ಕೆ ಕಾಂಗ್ರೆಸ್‌ನ ಕೊಡುಗೆ ಏನು ಎಂದು ಪ್ರಶ್ನಿಸುತ್ತಿದ್ದು, ಮಹಾತಗಾಂಧೀಜಿ, ನೆಹರು ಅವರು ಸ್ವಾತಂತ್ರ್ಯ ಹೋರಾಟ ನಡೆಸಿಲ್ಲ ಎಂದು ಅಪಪ್ರಚಾರ ನಡೆಸುತ್ತಿದ್ದಾರೆ ಎಂದು ದೂರಿದರು.


ಉದಯವಾಹಿನಿ ಚಿತ್ರ

**ಕಾಂಗ್ರೆಸ್ ನಾಯಕರು ಮತಗಳ್ಳತನದ ವಿರುದ್ಧ ಕರ್ನಾಟಕದಿಂದ ಹೋರಾಟಕ್ಕೆ ಚಾಲನೆ ನೀಡಿದ್ದಾರೆ. ದೇಶಾದ್ಯಂತ ಎಲ್ಲಾ ವಿರೋಧ ಪಕ್ಷಗಳು ಒಗ್ಗಟ್ಟಿನ ಹೋರಾಟಕ್ಕೆ ಮುಂದಾಗಿವೆ.**
**ಇದು ರಾಜಕೀಯ ವ್ಯವಸ್ಥೆಯಲ್ಲಿ ಹೊಸ ತಿರುವು ತಂದುಕೊಡಲಾಗಿದೆ ಎಂದು ಹೇಳಿದರು. ಕಳೆದ ಎರಡೂವರೆ ವರ್ಷಗಳ ಕಾಂಗ್ರೆಸ್ ಸರ್ಕಾರ ಆಡಳಿತ ನಡೆಸುತ್ತಿದೆ. ಬಿಜೆಪಿ ಭಾವನೆಗಳ ಮೇಲೆ ರಾಜಕೀಯ ಮಾಡಿದರೆ, ಕಾಂಗ್ರೆಸ್ ಜನರ ಬದುಕಿನ ಮೇಲೆ ರಾಜಕೀಯ ಮಾಡುತ್ತಿದೆ ಎಂದರು.**

### ಕಾಂಗ್ರೆಸ್ ಪಾರದರ್ಶಕ ಚುನಾವಣೆ

**ಸ್ವಾತಂತ್ರ್ಯ ಹೋರಾಟಕ್ಕೂ, ಕರ್ನಾಟಕಕ್ಕೂ ಅವಿನಾಭಾವ ಸಂಬಂಧವಿದೆ. ರಾಜ್ಯದ ಈಸೂರು ದೇಶದಲ್ಲೇ ಮೊದಲ ಬಾರಿಗೆ ಸ್ವಾತಂತ್ರ್ಯಗಳಿಸಿದ ಗ್ರಾಮ, ಬ್ರಿಟಿಷರನ್ನು ತೊಲಗಿಸಿತ್ತು. ಕಿತ್ತೂರುರಾಣಿ ಚೆನ್ನಮ ಬ್ರಿಟಿಷರ ವಿರುದ್ಧ ಹೋರಾಟ ಮಾಡಿದ ಮಹಿಳೆ. 1939ರಲ್ಲಿ ಅಂಕೋಲಾದ ಹನುಮಂತರಾವ್ ಅವರು ಸತ್ಯಾಗ್ರಹವನ್ನು ನಡೆಸಿದರು ಎಂದು ಹಲವಾರು ಪ್ರಸಂಗಗಳನ್ನು ಉಲ್ಲೇಖಿಸಿದರು. ರಾಜಕೀಯ ಸ್ವಾತಂತ್ರ್ಯಕ್ಕೆ ಧಕ್ಕೆ ಬರುವಂತೆ ಮೋಸ ಮಾಡಿರುವವರು ಸಂವಿಧಾನ ವಿರೋಧಿಗಳಷ್ಟೇ ಅಲ್ಲ, ಜೀವ ವಿರೋಧಿಗಳು, ಸಮಾಜ ಘಾತುಕರು ಎಂದು ಪರಿಗಣಿಸಬೇಕು. ಕಾಂಗ್ರೆಸ್ ಪಾರದರ್ಶಕ ಚುನಾವಣೆ ನಡೆಸಿತ್ತು. ಆದರೆ ಈಗ ಮತಗಳ್ಳತನದ ಮೂಲಕ ರಾಜಕೀಯ ಸ್ವಾತಂತ್ರ್ಯವನ್ನು ಬುಡಮೇಲು ಮಾಡಲಾಗುತ್ತಿದೆ. ಅದರ ಪರಿಣಾಮವನ್ನು ಕಾಂಗ್ರೆಸ್ ಅನುಭವಿಸಿದೆ ಎಂದು ವಿಷಾದಿಸಿದರು.**

### ಕಾಂಗ್ರೆಸ್ ಕೊಡುಗೆ ಏನು

ನೆಹರೂ 3262 ದಿನ ಜೈಲಿನಲ್ಲಿದ್ದರು. ಅವರಂತೆ ದೇಶದ ಸ್ವಾತಂತ್ರ್ಯಕ್ಕಾಗಿ ತನು, ಮನ, ಧನ ಅರ್ಪಿಸಿದ ನೂರಾರು ನಾಯಕರು ಇದ್ದಾರೆ. ರಾಷ್ಟ್ರಗೀತೆ, ರಾಷ್ಟ್ರ ಧ್ವಜವನ್ನು ದೇಶಕ್ಕೆ ನೀಡಿದ್ದು ಕಾಂಗ್ರೆಸ್ ಪಕ್ಷ. ಆದರೆ ಕಾಂಗ್ರೆಸ್‌ನ ಕೊಡುಗೆಗಳ ಬಗ್ಗೆಯೇ ಮರೆಮಾಚಲಾಗುತ್ತಿದೆ. ಯುವಪೀಳಿಗೆಯಿಂದ ಸತ್ಯಾಂಶವನ್ನು ಮರೆಮಾಚಲಾಗುತ್ತಿದೆ. ಇದರ ಬಗ್ಗೆ ನಾವು ಎಚ್ಚೆತ್ತುಕೊಳ್ಳಬೇಕಿದೆ ಎಂದರು. 79ನೇ ಸ್ವಾತಂತ್ರ್ಯ ದಿನಾಚರಣೆ ಸಂದರ್ಭದಲ್ಲಿ ಕಾಂಗ್ರೆಸ್‌ನ ಕಾರ್ಯಕರ್ತರು 5 ಶಪಥಗಳನ್ನು ಮಾಡಬೇಕು. ಪ್ರಜಾಪ್ರಭುತ್ವವನ್ನು ಉಳಿಸುತ್ತೇನೆ. ಸಂವಿಧಾನ ರಕ್ಷಿಸುತ್ತೇನೆ, ಚುನಾವಣೆ ಅಕ್ರಮ, ಮತಗಳ್ಳತನ ತಡೆಯುತ್ತೇನೆ, ತೆರಿಗೆ ಅಸಮಾನತೆಯ ವಿರುದ್ಧ ಹೋರಾಟ ಮಾಡುತ್ತೇನೆ, ದೇಶದಲ್ಲಿ ಸರ್ವಾಧಿಕಾರವನ್ನು ತೊಲಗಿಸಿ ಜನಪರ ಸರ್ಕಾರವನ್ನು ಅಧಿಕಾರಕ್ಕೆ ತರುತ್ತೇನೆ ಎಂಬ ಪ್ರಮಾಣಗಳನ್ನು ಕಾರ್ಯಕರ್ತರು ಕೈಗೊಳ್ಳಬೇಕೆಂದು ಹೇಳಿದರು. ಬಿಬಿಎಂಪಿ, ಜಿಲ್ಲಾಪಂಚಾಯತ್, ತಾಲ್ಲೂಕು ಪಂಚಾಯತ್‌ಗಳು ಸೇರಿ ನಗರ, ಸ್ಥಳೀಯ ಸಂಸ್ಥೆಗಳಿಗೆ ಮುಂದಿನ 6ತಿಂಗಳ ಒಳಗೆ ಚುನಾವಣೆ ಮುಗಿಸಲು ಸರ್ಕಾರ ನಿರ್ಧಾರ ಮಾಡಿದೆ. 2028ಕ್ಕೆ ಕಾಂಗ್ರೆಸ್ ಸರ್ಕಾರವನ್ನು ಮತ್ತೆ ಅಧಿಕಾರಕ್ಕೆ ತರಲು ಪಕ್ಷದ ಕಾರ್ಯಕರ್ತರು ಪಣ ತೊಡಬೇಕು ಎಂದು ಹೇಳಿದರು.ಸಿಎಂ ಸಿದ್ದರಾಮಯ್ಯ, ಮಾಜಿ ಮುಖ್ಯಮಂತ್ರಿ ವೀರಪ್ಪಮೊಯ್ಲಿ ಸೇರಿದಂತೆ ಕಾಂಗ್ರೆಸ್‌ನ ಅನೇಕ ನಾಯಕರು ಭಾಗವಹಿಸಿದ್ದರು.


## ಧರ್ಮಸ್ಥಳದ ವಿರುದ್ಧ ಷಡ್ಯಂತ್ರ ಸಾಮೂಹಿಕ ಶಿವಪಂಚಾಕ್ಷರಿ ಮಂತ್ರ ಜಪಿಸಲು ವಿಎಚ್‌ಪಿ ಕರೆ

• ಉದಯವಾಹಿನಿ, ಬೆಂಗಳೂರು

ಶ್ರೀಕ್ಷೇತ್ರ ಧರ್ಮಸ್ಥಳದ ಅಪಪ್ರಚಾರ, ಷಡ್ಯಂತ್ರ ದೂರವಾಗಿ, ಕ್ಷೇತ್ರದ ಶ್ರದ್ಧೆಭಕ್ತಿ ಹೆಚ್ಚಾಗಲಿ ಎಂಬ ಸಂಕಲ್ಪದೊಂದಿಗೆ ಸಾಮೂಹಿಕ ಶಿವಪಂಚಾಕ್ಷರಿ ಓಂ ನಮಃ ಶಿವಾಯ ನಾಮ ಜಪ ಪಠಿಸಲು ವಿಶ್ವ ಹಿಂದೂ ಪರಿಷದ್ ಕರೆ ನೀಡಿದೆ.

ಶ್ರೀ ಮಂಜುನಾಥನ ಶ್ರೀಕ್ಷೇತ್ರ ಕಳೆದ ಹಲವು ದಶಕಗಳಿಂದ ಸಹಸ್ರಾರು ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾ, ನೂರಾರು ಧಾರ್ಮಿಕ ಕ್ಷೇತ್ರಗಳನ್ನು ಜೀರ್ಣೋದ್ಧಾರಗೊಳಿಸುವ ಪವಿತ್ರ ಕಾರ್ಯವನ್ನು ಮಾಡಿಕೊಂಡು ಬಂದಿದೆ. ಜೊತೆಗೆ ಕ್ಷೇತ್ರದಲ್ಲಿ ನಿರಂತರ ಅನ್ನದಾನದ ಪುಣ್ಯ ಕಾರ್ಯ ಮಾಡುತ್ತಿದೆ.

ರಾಜ್ಯ, ದೇಶ ವಿದೇಶಗಳಿಂದ ಕೋಟ್ಯಂತರ ಭಕ್ತರು ಕ್ಷೇತ್ರಕ್ಕೆ ಆಗಮಿಸಿ ಶಿವನ ದರ್ಶನ ಪಡೆದು ಧನ್ಯರಾಗುತ್ತಾರೆ. ನೂರಾರು ವರ್ಷಗಳ ಪರಂಪರೆ ಇರುವ ಒಂದು ನಂಬಿಕೆಯ ಶ್ರದ್ಧಾಕೇಂದ್ರವನ್ನು ಇವತ್ತು ಧರ್ಮ ವಿರೋಧಿ ಶಕ್ತಿಗಳು ವ್ಯಾಪಕವಾಗಿ ಷಡ್ಯಂತ್ರ ಮಾಡಿ ಅಪಪ್ರಚಾರವೆಸಗುವ ಮೂಲಕ ಕ್ಷೇತ್ರಕ್ಕೆ ಕೆಟ್ಟ ಹೆಸರು ತರುವ ಸಂಚು ನಡೆಸುತ್ತಿದ್ದಾರೆ. ಧರ್ಮಸ್ಥಳ ಪವಿತ್ರ ಶ್ರದ್ಧಾಕೇಂದ್ರವು ಧರ್ಮ ವಿರೋಧಿ ಶಕ್ತಿಗಳ ಷಡ್ಯಂತ್ರದಿಂದ ವ್ಯಾಪಕವಾಗಿ ಅಪಚಾರಕ್ಕೆ ಗುರಿಯಾಗಿದೆ, ಇಂತಹ ಷಡ್ಯಂತ್ರಗಳಿಗೆ ಸೋಲುಂಟಾಗಲು, ಅಪಪ್ರಚಾರ ಕೊನೆಯಾಗಿ ಕ್ಷೇತ್ರದಲ್ಲಿ ಶ್ರದ್ಧೆಭಕ್ತಿ ಬೆಳಗಿ ಶಾಂತಿ ನೆಲಸಲಿ


ಉದಯವಾಹಿನಿ ಚಿತ್ರ

ಎಂಬ ಸಂಕಲ್ಪದೊಂದಿಗೆ ರಾಜ್ಯದಾದ್ಯಂತ 18 ಆಗಸ್ಟ್ 2025 ಸೋಮವಾರದಿಂದ ಒಂದು ವಾರದ ಕಾಲ ಸಾಮೂಹಿಕ ಶಿವಪಂಚಾಕ್ಷರಿ ಓಂ ನಮಃ ಶಿವಾಯ ಜಪ ಅನುಷ್ಠಾನಕ್ಕೆ ಎಲ್ಲಾ ಭಕ್ತರಲ್ಲಿ ವಿಶ್ವ ಹಿಂದೂ ಪರಿಷದ್ ಕರೆ ನೀಡುತ್ತಿದೆ. ರಾಜ್ಯದ ಎಲ್ಲಾ ಹಿಂದೂ ಸಂಘಟನೆಗಳು, ಧಾರ್ಮಿಕ ಸಂಘಸಂಸ್ಥೆಗಳು, ಮಠ ಮಂದಿರ, ಭಜನಾಮಂದಿರ, ದೇವಸ್ಥಾನ, ದೈವಸ್ಥಾನಗಳಲ್ಲಿ ಸಾಮೂಹಿಕವಾಗಿಯೂ, ಮನೆ ಮನೆಗಳಲ್ಲಿ ವೈಯುಕ್ತಿಕವಾಗಿಯೂ ಶಿವಪಂಚಾಕ್ಷರಿ ಮಂತ್ರದ ಓಂ ನಮಃ ಶಿವಾಯ ನಾಮ ಜಪ ಮಾಡುವಂತೆ ಸರ್ವ ಭಕ್ತರಲ್ಲಿ ವಿನಂತಿ ಮಾಡುತ್ತೇವೆ ಎಂದು ವಿಹೆಚ್‌ಪಿ ಮಾಧ್ಯಮ ಹೇಳಿಕೆಯಲ್ಲಿ ತಿಳಿಸಿದೆ.

## ಇಂದು ಅಟಲ್ ಸ್ಮರಣಸಂಚಿಕೆ ಲೋಕಾರ್ಪಣೆ

• ಉದಯವಾಹಿನಿ, ಬೆಂಗಳೂರು

ಭಾರತ ಕಂಡ ಅಪರೂಪದ ಪ್ರಧಾನಿ ಭಾರತರತ್ನ, ಅಜಾತಶತ್ರು, ಅಟಲ್ ಬಿಹಾರಿ ವಾಜಪೇಯಿ ಜೀ ಅವರ ಜನ್ಮ ಶತಮಾನೋತ್ಸವದ ಕಾರ್ಯಕ್ರಮವನ್ನು ಶನಿವಾರ ಆಯೋಜಿಸಲಾಗಿದೆ ಎಂದು ವಿಧಾನಪರಿಷತ್ ಮಾಜಿ ಸದಸ್ಯ ಡಾ.ಎ.ಹೆಚ್.ಶಿವಯೋಗಿಸ್ವಾಮಿ ತಿಳಿಸಿದ್ದಾರೆ. ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಅಟಲ್ ಜೀ ಅವರ ಜೀವನ ಮತ್ತು ಸಾಧನೆಯನ್ನು ಯುವಜನತೆ, ಎಲ್ಲಾ ಜನರಿಗೆ ತಲುಪಿಸಲು ಅವರ ಸ್ಮರಣಸಂಚಿಕೆ ಲೋಕಾರ್ಪಣೆ ಸಂಬಂಧ ಆ.16 ರ ಸಂಜೆ 4:30 ಕ್ಕೆ ಟೌನ್‌ಹಾಲ್‌ನಲ್ಲಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್, ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ.ವಿಜಯೇಂದ್ರ, ಮಾಜಿ ಸಿಎಂ ಡಿ.ವಿ.ಸದಾನಂದ ಗೌಡ, ವಿರೋಧ ಪಕ್ಷದ ನಾಯಕ ಆರ್.ಅಶೋಕ್, ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು. ಅಟಲ್ ಜೀ ಅವರ ಕಾಲದಲ್ಲಿ ಕೇಂದ್ರ ಸಚಿವರಾಗಿದ್ದ ದಿವಂಗತ ಅನಂತ್ ಕುಮಾರ್ ಅವರ ಧರ್ಮಪತ್ನಿ ಶ್ರೀಮತಿ ತೇಜಸ್ವಿನಿ ಅನಂತ್ ಕುಮಾರ್, ಬೆಂಗಳೂರಿನ ಎಲ್ಲಾ ಸಂಸದರು, ಶಾಸಕರು ಮತ್ತು ವಿಧಾನಪರಿಷತ್ ಸದಸ್ಯರು ಉಪಸ್ಥಿತರಿರಲಿದ್ದಾರೆ ಎಂದು ಹೇಳಿದ್ದಾರೆ.



ಉದಯವಾಹಿನಿ ಚಿತ್ರ

ವಾಜಪೇಯಿ ಜೀ ಅವರ ಜನ್ಮ ಶತಮಾನೋತ್ಸವ ಸಂಬಂಧ ವರ್ಷಪೂರ್ತಿ ಕಾರ್ಯಕ್ರಮ ನಡೆಸಲು ನಿರ್ಧರಿಸಲಾಗಿತ್ತು. ಕೇಂದ್ರದ ಯೋಜನೆಯಂತೆ ರಾಜ್ಯದಲ್ಲಿಯೂ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರ ನೇತೃತ್ವದಲ್ಲಿ ಹಾಗೂ ರಾಜ್ಯ ಪ್ರಧಾನ ಕಾರ್ಯದರ್ಶಿ ಪಿ.ರಾಜೀವ್ ಅವರ ಮಾರ್ಗದರ್ಶನದಲ್ಲಿ ಕಳೆದ ಜನವರಿಯಿಂದ ವಿವಿಧ ಕಾರ್ಯಕ್ರಮಗಳನ್ನು ನಡೆಸಿದ್ದೇವೆ ಎಂದು ವಿವರಿಸಿದ್ದಾರೆ.

ಅಟಲ್ ಜೀ ಕಾಲಘಟ್ಟದಲ್ಲಿ ಕೆಲಸ ಮಾಡಿದ ಅವರ ಒಡನಾಡಿಗಳು, ಅವರ ಕಾಲದಲ್ಲಿ ಕಾರ್ಯಕರ್ತರಾಗಿ ಕೆಲಸ ಮಾಡಿದ ಹಿರಿಯರ ಮನೆಗಳಿಗೆ ತೆರಳಿ ಅವರಿಗೆ ಗೌರವ ಸಮರ್ಪಣೆ ಮಾಡಲಾಗಿದೆ. ಹಿರಿಯರ ಅನುಭವ, ಅನಿಸಿಕೆಗಳನ್ನೂ ಸಂಗ್ರಹಿಸಿದ್ದೇವೆ ಎಂದು ತಿಳಿಸಿದ್ದಾರೆ.

### ವಿವಿಧ ಸ್ಪರ್ಧೆಗಳ ಆಯೋಜನೆ

**ನಾಳೆ ಟೌನ್‌ಹಾಲ್‌ನಲ್ಲಿ ಚಿತ್ರ ನಮನ ಸ್ಪರ್ಧೆ ಮತ್ತು ಸ್ವರ ನಮನ ನಡೆಯಲಿದೆ. ಬೆಂಗಳೂರಿನಲ್ಲಿ ರಂಗೋಲಿ ನಮನ ಸ್ಪರ್ಧೆ ನಡೆದಿದ್ದು, 200 ಕ್ಕಿಂತ ಹೆಚ್ಚು ಮಹಿಳೆಯರು ಭಾಗವಹಿಸಿದ್ದಾರೆ. ನುಡಿ ನಮನ ಸ್ಪರ್ಧೆಯಲ್ಲಿ 300 ಕ್ಕಿಂತ ಹೆಚ್ಚು ಕಾಲೇಜು ವಿದ್ಯಾರ್ಥಿಗಳು ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಬರಹ ನಮನ ಸ್ಪರ್ಧೆಯಲ್ಲಿ 350 ಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು. ವಿಜೇತರಿಗೆ ಇಂದು ಬಹುಮಾನ ವಿತರಿಸಲಾಗುವುದು ಎಂದಿದ್ದಾರೆ.**


## 500 ಕಾರುಗಳಲ್ಲಿ ಧರ್ಮಸ್ಥಳಕ್ಕೆ ಹೊರಟ ಬಿಜೆಪಿ ಕಾರ್ಯಕರ್ತರು

• ಉದಯವಾಹಿನಿ, ಬೆಂಗಳೂರು

ಶಾಸಕ ಎಸ್.ಆರ್ ವಿಶ್ವನಾಥ್ ನೇತೃತ್ವದಲ್ಲಿ ಆ.16ರಂದು ಧರ್ಮಸ್ಥಳಕ್ಕೆ 500 ಕಾರುಗಳಲ್ಲಿ ಬಿಜೆಪಿ ಕಾರ್ಯಕರ್ತರು ಹೊರಡಲು ಸಿದ್ಧತೆ ನಡೆಸಿದ್ದಾರೆ. ಯಲಹಂಕದಿಂದ ಶನಿವಾರ ಮುಂಜಾನೆ ಕಾರ್ಯಕರ್ತರು ಹೊರಡಲಿದ್ದಾರೆ. ನೂರಾರು ಜನ ಭಗವಾಧ್ವಜ ಹಿಡಿದು ಕೇಸರಿ ಶಾಲು ಧರಿಸಿ, ಧರ್ಮಸ್ಥಳಕ್ಕೆ ಹೊರಡಲಿದ್ದಾರೆ. ಪ್ರಯಾಣಕ್ಕೆ ಬೇಕಾದ ಎಲ್ಲಾ ವ್ಯವಸ್ಥೆಗಳನ್ನು ಮಾಡಿಕೊಳ್ಳಲಾಗಿದೆ. ಮಧ್ಯಾಹ್ನ ಸುಮಾರು 3 ಗಂಟೆಗೆ ವಿಶ್ವನಾಥ್ ತಂಡ ಧರ್ಮಸ್ಥಳ ತಲುಪಲಿದೆ. ದೇವರ ದರ್ಶನ ಪಡೆದು ಧರ್ಮಸ್ಥಳದಲ್ಲೇ ಶನಿವಾರ ರಾತ್ರಿ ವಾಸ್ತವ್ಯ ಹೂಡಲಿದ್ದಾರೆ. ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ನೇತೃತ್ವದ ಶಾಸಕರ ನಿಯೋಗವೂ ಭಾನುವಾರ (ಆ.17) ಧರ್ಮಸ್ಥಳ ಭೇಟಿ ಮಾಡಲಿದೆ. ಉಡುಪಿ, ಮಂಗಳೂರು, ಚಿಕ್ಕಮಗಳೂರು, ಹಾಸನ ಜಿಲ್ಲೆಗಳ ಬಿಜೆಪಿ ಶಾಸಕರು ನಿಯೋಗದಲ್ಲಿರಲಿದ್ದಾರೆ. ಬಿಜೆಪಿ ನಾಯಕರು ಧರ್ಮಾಧಿಕಾರಿಗಳನ್ನೂ ಭೇಟಿ ಮಾಡಿ ನೈತಿಕ ಬೆಂಬಲ ಸೂಚಿಸಲಿದ್ದಾರೆ ಎಂದು ಬಿಜೆಪಿ ಪ್ರಕಟಣೆಯಲ್ಲಿ ತಿಳಿಸಿದೆ.

## ಕೈದಿಗಳ ಮನಃಪರಿವರ್ತನೆಗೆ ಪ್ರಯತ್ನ

• ಉದಯವಾಹಿನಿ, ಬೆಂಗಳೂರು



ಕರ್ನಾಟಕ ಸಾಹಿತ್ಯ ಅಕಾಡೆಮಿಯು ವಿವಿಧ ಕಾರಾಗೃಹ ವಾಸಿಗಳಿಗೆ ಹಮ್ಮಿಕೊಂಡಿದ್ದ ಸಾಹಿತ್ಯ ಕಮ್ಮಟಗಳಿಗೆ ಉತ್ತಮ ಸ್ಪಂದನೆ ವ್ಯಕ್ತವಾಗಿರುವುದರಿಂದ, ಇಲ್ಲಿನ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿರುವ ಕೈದಿಗಳಿಗೂ ಈ ಕಮ್ಮಟದ ಮೂಲಕ ಸಾಹಿತ್ಯಾಭಿರುಚಿ ಮೂಡಿಸಲು ಅಕಾಡೆಮಿ ಮುಂದಾಗಿದೆ.

ಅಕಾಡೆಮಿ ಹಮ್ಮಿಕೊಂಡಿದ್ದ ಕಾರಾಗೃಹ ವಾಸಿಗಳಿಗೆ ಕಮ್ಮಟ ಯೋಜನೆಗೆ ಮೇ ತಿಂಗಳಲ್ಲಿ ಚಾಲನೆ ದೊರೆತಿತ್ತು. ಈಗಾಗಲೇ ಮೈಸೂರಿನ ಕೇಂದ್ರ ಕಾರಾಗೃಹ, ಬೆಳಗಾವಿಯ ಹಿಂಡಲಗಾ ಜೈಲು, ಹಾವೇರಿ ಜಿಲ್ಲಾ ಕಾರಾಗೃಹದಲ್ಲಿ ಈ ಕಮ್ಮಟವನ್ನು ನಡೆಸಲಾಗಿದೆ. ಕೈದಿಗಳು ಹಾಗೂ ಜೈಲು ಅಧಿಕಾರಿಗಳು ಉತ್ತಮವಾಗಿ ಸ್ಪಂದಿಸಿದ್ದರಿಂದ ವಿವಿಧ ಕಾರಾಗೃಹಗಳಲ್ಲಿ ಈ ಕಮ್ಮಟವನ್ನು ಹಮ್ಮಿಕೊಳ್ಳಲು ಅಕಾಡೆಮಿ ನಿರ್ಧರಿಸಿದೆ. ಈ ಸಂಬಂಧ ವಿವಿಧ ಕಾರಾಗೃಹಗಳ ಅಧಿಕಾರಿಗಳ ಜತೆಗೆ ಮಾತುಕತೆ ನಡೆಸುತ್ತಿದ್ದು, ಇಲ್ಲಿನ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿಯೂ ಕಮ್ಮಟ ಆಯೋಜಿಸಲು ಯೋಜನೆ ರೂಪಿಸಿದೆ.

ರಾಜ್ಯದ ಅತಿದೊಡ್ಡ, ಪ್ರಮುಖ ಕಾರಾಗೃಹವಾಗಿರುವ ಪರಪ್ಪನ ಅಗ್ರಹಾರಕ್ಕೆ, ರಾಜ್ಯದ ವಿವಿಧ ಭಾಗಗಳಿಂದ ಬಂದ ಅಪರಾಧಿಗಳನ್ನು ಇರಿಸಲಾಗುತ್ತದೆ. ಆದ್ದರಿಂದ ಸುರಕ್ಷತೆ ಹಾಗೂ ಸಿದ್ಧತೆಯನ್ನು ಖಚಿತಪಡಿಸಿಕೊಂಡು ಕಮ್ಮಟ ಹಮ್ಮಿಕೊಳ್ಳಲು ಅಕಾಡೆಮಿ ನಿರ್ಧರಿಸಿದೆ. ಮೂರು ದಿನಗಳು ಈ ಕಮ್ಮಟ ನಡೆಯಲಿದ್ದು, ಕೈದಿಗಳ ಮನಃಪರಿವರ್ತನೆಗೆ ಸಾಹಿತ್ಯ ಉಪನ್ಯಾಸಗಳನ್ನು ಹಮ್ಮಿಕೊಳ್ಳುವ ಜತೆಗೆ, ಕಾರಾಗೃಹ ವಾಸಿಗಳಿಗೆ ಕಥೆ, ಕವನ ಬರೆಯಲು ಅವಕಾಶ ನೀಡಲಾಗುತ್ತದೆ.

**ಕೈದಿಗಳಿಗೆ ಚಟುವಟಿಕೆ:** ಈ ಕಮ್ಮಟದಲ್ಲಿ ಕೈದಿಗಳನ್ನು ವಿವಿಧ ಸಾಹಿತ್ಯ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲಾಗುತ್ತದೆ. ಸಾಹಿತ್ಯ ಕ್ಷೇತ್ರದ ಪ್ರಮುಖರು ಉಪನ್ಯಾಸ ನೀಡುತ್ತಾರೆ. ಸಾಹಿತ್ಯ ಹಾಗೂ ಪುಸ್ತಕಗಳ ಓದಿನ ಮಹತ್ವದ ಬಗ್ಗೆಯೂ ಮನವರಿಕೆ ಮಾಡಿಸಲಾಗುತ್ತದೆ.

## ಧರ್ಮಾಧಿಕಾರಿಗಳ ವಿರುದ್ಧ ಅವಹೇಳನ ಮಾಡಲಾಗುತ್ತಿದೆ: ಸಚಿವೆ

• ಉದಯವಾಹಿನಿ, ಬೆಂಗಳೂರು

ಎಸ್‌ಐಟಿ ತನಿಖೆಯಿಂದ ಧರ್ಮಸ್ಥಳ ಪ್ರಕರಣದ ಸತ್ಯಾಸತ್ಯತೆ ಹೊರಬರಲಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವರು ಹಾಗೂ ಉಡುಪಿ ಜಿಲ್ಲಾ ಉಸ್ತುವಾರಿ ಸಚಿವರಾದ ಲಕ್ಷ್ಮಿ ಹೆಬ್ಬಾಳ್ಕರ್ ಹೇಳಿದರು. ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರು,


ಉದಯವಾಹಿನಿ ಚಿತ್ರ

ಧರ್ಮಸ್ಥಳ ವಿಚಾರದಲ್ಲಿ ರಾಜಕೀಯ ಮಾಡುವುದು ಸಲ್ಲ. ತನಿಖೆಯಿಂದಷ್ಟೇ ಸತ್ಯಾಸತ್ಯತೆ ಹೊರ ಬರಬೇಕಿದೆ ಎಂದರು. ಧರ್ಮಸ್ಥಳ ವಿಚಾರದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಅವರ ಹೇಳಿಕೆಯನ್ನು ಗಮನಿಸಿದ್ದೇನೆ. ನಾವೆಲ್ಲರೂ ಧರ್ಮಸ್ಥಳ ಮಂಜುನಾಥನ ಭಕ್ತರು, ಈ ವಿಚಾರವಾಗಿ ಡಿಸಿಎಂ ಅವರ ಹೇಳಿಕೆಗೆ ನನ್ನ ಸಹಮತವಿದೆ. ಎಸ್‌ಐಟಿ ತನಿಖೆ ಬಗ್ಗೆ ಅಧಿಕಾರಿಗಳು ಗೃಹ ಸಚಿವರಿಗೆ ಮಾಹಿತಿ ನೀಡುತ್ತಿದ್ದಾರೆ ಎಂದು ತಿಳಿಸಿದರು.

# ಎಲೆಕ್ಟ್ರಾನಿಕ್ ಸಿಟಿ ಮೆಟ್ರೋ ನಿಲ್ದಾಣದ ಹೆಸರು ಅದಲು ಬದಲು

## ಎಲ್ಲಿ ಇಳಿಯಬೇಕು, ಹತ್ತಬೇಕು ತಿಳಿಯದೇ ಪ್ರಯಾಣಿಕರು ತಬ್ಬಿಬ್ಬು, ಹಳದಿ ಮಾರ್ಗದಲ್ಲಿ ಮೆಟ್ರೋ ಸಂಚಾರ ಆರಂಭಕ್ಕೆ ಭರ್ಜರಿ ರೆಸ್ಪಾನ್ಸ್

• ಉದಯವಾಹಿನಿ, ಬೆಂಗಳೂರು

ನಮ್ಮ ಮೆಟ್ರೋ ಹಳದಿ ಮಾರ್ಗದ ಸಂಚಾರ ಆರಂಭವಾಗಿ 4 ದಿನಗಳು ಕಳೆದಿದ್ದು, ನಿರೀಕ್ಷೆಗೂ ಮೀರಿ ಜನರು ಪ್ರಯಾಣ ಮಾಡುತ್ತಿದ್ದಾರೆ. ಇನ್ನೊಂದೆಡೆ ಅಧಿಕಾರಿಗಳು ಮಾಡಿರುವ ಎಡವಟ್ಟಿನಿಂದಾಗಿ ಪ್ರಯಾಣಿಕರು ಸಂಕಷ್ಟ ಎದುರಿಸುವಂತಾಗಿದೆ. ಎಲೆಕ್ಟ್ರಾನಿಕ್ ಸಿಟಿ ಮೆಟ್ರೋ ನಿಲ್ದಾಣ ಇರುವ ಜಾಗದಲ್ಲಿ ಇನ್ಫೋಸಿಸ್ ಫೌಂಡೇಶನ್- ಕೋನಪ್ಪನ ಅಗ್ರಹಾರ ಎಂದು ಹೆಸರಿಡಲಾಗಿದೆ. ಕೋನಪ್ಪನ ಅಗ್ರಹಾರ ಮೆಟ್ರೋ ನಿಲ್ದಾಣ ಎಂದು ಇರಬೇಕಾದ ಜಾಗದಲ್ಲಿ ಎಲೆಕ್ಟ್ರಾನಿಕ್ ಸಿಟಿ ಎಂದು ಹೆಸರಿಡಲಾಗಿದೆ.

ಹೆಸರು ಅದಲು-ಬದಲು ಆಗಿರುವುದಿರಂದ ಪ್ರಯಾಣಿಕರು ಎಲ್ಲಿ ಇಳಿಯಬೇಕು, ಎಲ್ಲಿ ಹತ್ತಬೇಕು ಎನ್ನುವ ಗೊಂದಲಕ್ಕೆ ಒಳಗಾಗುತ್ತಿದ್ದಾರೆ. ಕೋನಪ್ಪನ ಅಗ್ರಹಾರ ಮತ್ತು ಎಲೆಕ್ಟ್ರಾನಿಕ್ ಸಿಟಿ ನಿಲ್ದಾಣಗಳಲ್ಲಿ ಬಹಳ ವ್ಯತ್ಯಾಸ ಕಂಡು ಬಂದಿದ್ದು, ಮೆಟ್ರೊದಲ್ಲಿ ಪ್ರಯಾಣಿಸುವ ಜನರಲ್ಲಿ ಈ ವ್ಯತ್ಯಾಸದಿಂದಾಗಿ ಕೆಲ ಗೊಂದಲ ಉಂಟಾಗುತ್ತಿದೆ. ಎಲೆಕ್ಟ್ರಾನಿಕ್ ಸಿಟಿ ಹಾಗೂ ಕೋನಪ್ಪನ ಅಗ್ರಹಾರ ನಿಲ್ದಾಣಗಳಿಗೆ ಟಿಕೆಟ್ ಖರೀದಿಸುವ ವೇಳೆ ತುಂಬಾ ಗೊಂದಲ ಮತ್ತು ಸಮಸ್ಯೆ ಸೃಷ್ಟಿಯಾಗಿದೆ ಎಂದು ಪ್ರಯಾಣಿಕರು ದೂರಿದ್ದಾರೆ.

**ಹೆಸರು ಅದಲು ಬದಲು ಸಮಸ್ಯೆ:** ಎಲೆಕ್ಟ್ರಾನಿಕ್ ಸಿಟಿಗೆ ಹೋಗಬೇಕಾದ ಪ್ರಯಾಣಿಕರು ಕೋನಪ್ಪನ ಅಗ್ರಹಾರಕ್ಕೆ ಟಿಕೆಟ್ ಪಡೆಯಬೇಕು,


ಉದಯವಾಹಿನಿ ಚಿತ್ರ

**ನಿರೀಕ್ಷೆಗೂ ಮೀರಿ ಪ್ರಯಾಣ**

ಕೋನಪ್ಪನ ಅಗ್ರಹಾರಕ್ಕೆ ಹೋಗುವ ಪ್ರಯಾಣಿಕರು ಎಲೆಕ್ಟ್ರಾನಿಕ್ ಸಿಟಿಗೆ ಟಿಕೆಟ್ ಪಡೆಯಬೇಕಾಗಿದೆ.

ಈ ಗೊಂದಲದಿಂದ ಸಾಕಷ್ಟು ತೊಂದರೆ ಅನುಭವಿಸುವಂತಾಗಿದೆ ಎಂದು ಪ್ರಯಾಣಿಕರೊಬ್ಬರು ದೂರಿದ್ದಾರೆ. ಈ ಎರಡು ಮೆಟ್ರೋ ನಿಲ್ದಾಣಗಳಲ್ಲಿರುವ ಹೆಸರು ಮತ್ತು ಅಲ್ಲೇ ಪಕ್ಕದಲ್ಲಿರುವ ಬಿಎಂಟಿಸಿ ನಿಲ್ದಾಣಗಳಲ್ಲಿರುವ ಹೆಸರು ಪ್ರಯಾಣಿಕರನ್ನು ಮತ್ತಷ್ಟು ತಬ್ಬಿಬ್ಬುಗೊಳಿಸುತ್ತಿದೆ ಎನ್ನುತ್ತಾರೆ ಪ್ರಯಾಣಿಕರು.

**ಮೆಟ್ರೊಗೆ ಜಮೀನು ನೀಡಲು ಸಿಎಂಗೆ ಪತ್ರ:** ಹೆಬ್ಬಾಳದಲ್ಲಿ ಬಿಎಂಆರ್ ಸಿಎಲ್‌ಗೆ 45 ಎಕರೆ ಭೂಮಿ ಮಂಜೂರು ಮಾಡಲು ಕೋರಿ, ಕೇಂದ್ರ ಸಚಿವ ಶೋಭಾ ಕರಂದ್ಲಾಜೆ. ಸಿಎಂ ಸಿದ್ದರಾಮಯ್ಯ ಅವರಿಗೆ ಬರೆದಿದ್ದಾರೆ. ಬಿಎಂಆರ್‌ಸಿಎಲ್‌ಗೆ ಮಂಜೂರಾಗಬೇಕಿದ್ದ ಜಾಗಕ್ಕೆ ಸಂಬಂಧಿಸಿದಂತೆ ಕೆಐಎಡಿಬಿ ಈ ಹಿಂದೆ ಜಮೀನು ಪಡೆದ ಖಾಸಗಿ ಸಂಸ್ಥೆಗೆ ಮೂಲ ಭೂಮಾಲೀಕರಿಗೆ ಪರಿಹಾರ ನೀಡುವಂತೆ ನೋಟಿಸ್ ನೀಡಲು ಕ್ರಮ ವಹಿಸಿರುವುದು ತಿಳಿದು ಬಂದಿದೆ. ಈ ಕ್ರಮದಿಂದ ಖಾಸಗಿ ಸಂಸ್ಥೆಗೆ ಭೂಮಿಯ ಮೇಲಿನ ಹಿಡಿತ ಹೆಚ್ಚಾಗುತ್ತದೆ. ಇದರಿಂದಾಗಿ ಬಿಎಂಆರ್ ನಿರ್ಮಾಣ ಮಾಡಬೇಕೆಂದುಕೊಂಡಿರುವ ಡಿಪೋ, ಮಲ್ಟಿ-ಮೋಡಲ್ ಹಬ್, ಪಾರ್ಕಿಂಗ್ ಸೌಲಭ್ಯ ಮತ್ತು ಇತರ ಮೂಲಸೌಕರ್ಯಗಳಿಗೆ ಅಗತ್ಯವಿರುವ 45 ಎಕರೆಗೆ ತೊಂದರೆಯಾಗುವ ಸಾಧ್ಯತೆ ಇದೆ ಎಂದು ಪತ್ರದಲ್ಲಿ ವಿವರಿಸಿದ್ದಾರೆ

### ಬಿಎಂಆರ್‌ಸಿಎಲ್‌ಗೆ ಮನವಿ

**ಬೆಂಗಳೂರಿನ ನಮ್ಮ ಮೆಟ್ರೋ ಹಳದಿ ಮಾರ್ಗದಲ್ಲಿ ಎಲೆಕ್ಟ್ರಾನಿಕ್ ಸಿಟಿ ಮತ್ತು ಕೋನಪ್ಪನ ಅಗ್ರಹಾರ ನಿಲ್ದಾಣಗಳ ಹೆಸರು ಅದಲು ಬದಲಾದ ಹಿನ್ನೆಲೆ ಬದಲಾವಣೆಯಿಂದ ಪ್ರಯಾಣಿಕರು ತೊಂದರೆ ಅನುಭವಿಸುತ್ತಿದ್ದಾರೆ. ಇದರಿಂದ ಟಿಕೆಟ್ ಖರೀದಿಸುವಾಗ ಎಲ್ಲಿಗೆ ಯಾವ ಟಿಕೆಟ್ ತೆಗೆದುಕೊಳ್ಳಬೇಕು. ಎಲ್ಲಿ ಇಳಿದರೆ ತಮ್ಮ ಗಮ್ಯಸ್ಥಾನ ಸಿಗುತ್ತದೆ ಎಂದು ತಿಳಿಯದೇ ಪ್ರಯಾಣಿಕರು ಕಳೆದೊಂದು ವಾರದಿಂದ ಕಂಗಾಲಾಗಿದ್ದಾರೆ. ಈ ಸಮಸ್ಯೆಯನ್ನು ಸರಿಪಡಿಸುವಂತೆ ಬಿಎಂಆರ್‌ಸಿಎಲ್‌ಗೆ ಮನವಿ ಮಾಡಿದ್ದಾರೆ.**

### ಹೆಸರುಗಳ ಎಡವಟ್ಟು ಪ್ರಯಾಣಿಕರಿಗೆ ಇಕ್ಕಟ್ಟು

**ಹಳದಿ ಮಾರ್ಗ ಸಂಚಾರ ಆರಂಭದ ಮೂಲಕ ಪ್ರಯಾಣದ ಸಮಯ 30 ನಿಮಿಷಕ್ಕೆ ಇಳಿದಿದೆ. ಆದರೆ, ಎಲೆಕ್ಟ್ರಾನಿಕ್ಸ್ ಸಿಟಿ ಮತ್ತು ಇನ್ಫೋಸಿಸ್ ಫೌಂಡೇಶನ್ ಕೋನಪ್ಪನ ಅಗ್ರಹಾರ ನಿಲ್ದಾಣ ಎಂಬ ಎರಡು ನಿಲ್ದಾಣಗಳ ಹೆಸರುಗಳಲ್ಲಿ ಬಹಳಷ್ಟು ಗೊಂದಲಗಳಿವೆ. ಅವನ್ನು ಬದಲಾಯಿಸಬೇಕು ಎಂದು ಪ್ರಯಾಣಿಕರೊಬ್ಬರು ದೂರಿದ್ದಾರೆ. ಹಳದಿ ಮಾರ್ಗ ಆರಂಭವಾದ ನಂತರ ಮೆಟ್ರೋ ಪ್ರಯಾಣಿಕರ ಸಂಖ್ಯೆ 10 ಲಕ್ಷ ದಾಟಿದೆ. ಸದ್ಯ ಆರಂಭದಲ್ಲಿಯೇ ಈ ಸಮಸ್ಯೆ ಬಗೆಹರಿಸಿದರೆ ಮುಂಬರುವ ದಿನಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಗೊಂದಲ ತಡೆಗಟ್ಟಬಹುದಾಗಿದೆ. ಈ ಸಮಸ್ಯೆಯನ್ನು ಬಿಎಂಆರ್‌ಸಿಎಲ್ ಕೂಡಲೇ ಬಗೆಹರಿಸಬೇಕಿದೆ ಎಂದು ಪ್ರಧಿಯಾಧಿಣಿಧಿಕರು ಆಗ್ರಹಿಸಿದ್ದಾರೆ.**

ಅಂತರಾಳದಿಂದ.. EDITORIAL

# ಧರ್ಮಸ್ಥಳದಲ್ಲಿ ಎಸ್‌ಐಟಿ ತನಿಖೆ: ಅವಸರ ಬೇಡ, ಸತ್ಯ ಹೊರಬರಲಿ


ಉದಯವಾಹಿನಿ ಚಿತ್ರ

ಧರ್ಮಸ್ಥಳದ ಪರಿಸರದಲ್ಲಿ ಅತ್ಯಾಚಾರ, ಕೊಲೆ ಮತ್ತು ಶವಗಳನ್ನು ಸಾಮೂಹಿಕವಾಗಿ ಹೂತಿರುವ ಕೃತ್ಯಗಳು ನಡೆದಿದ್ದು, ಅವುಗಳ ಹಿಂದೆ ಆ ಭಾಗದ ಪ್ರಭಾವಿ ವ್ಯಕ್ತಿಗಳ ಕೈವಾಡ ಇದೆ ಎಂದು ವ್ಯಕ್ತಿಯೊಬ್ಬ ನೀಡಿದ ದೂರು ಆಧರಿಸಿ ರಾಜ್ಯ ಸರ್ಕಾರವು ವಿಶೇಷ ತನಿಖಾ ತಂಡವನ್ನು (ಎಸ್‌ಐಟಿ) ರಚಿಸಿರುವುದು ದೇಶದ ಗಮನ ಸೆಳೆದಿದೆ. ಆದರೆ, ತನಿಖಾ ಪ್ರಕ್ರಿಯೆಯ ಬಗ್ಗೆ ಎಸ್‌ಐಟಿ ಮಧ್ಯಂತರ ವರದಿ ಸಲ್ಲಿಸಬೇಕು ಎಂದು ಕೆಲವು ಶಾಸಕರು ಆಗ್ರಹಿಸಿರುವುದು ಈ ಸಂದರ್ಭದಲ್ಲಿ ಸರಿಯಲ್ಲ; ಅಂಥದ್ದೊಂದು ವರದಿಯನ್ನು ಈ ಸಂದರ್ಭದಲ್ಲಿ ಪಡೆದುಕೊಳ್ಳುವುದು ಉಪಯುಕ್ತವಾಗಲಾರದು. ಆರೋಪದ ಸ್ವರೂಪವು ಗಂಭೀರವಾಗಿರುವಾಗ, ಅಪರಾಧದ ಕೃತ್ಯಗಳು ಬಹಳ ದೀರ್ಘ ಅವಧಿಯವರೆಗೆ ನಡೆದಿವೆ ಎಂಬ ಆರೋಪ ಇರುವಾಗ, ಇಲ್ಲಿ ಭಾವನಾತ್ಮಕ ಸಂಗತಿಗಳೂ ಮಿಳಿತವಾಗಿರುವಾಗ, ಆರೋಪಗಳ ಕುರಿತ ತನಿಖೆಯು ಬಹಳ ಸೂಕ್ಷ್ಮವಾಗಿ ಅವಸರವಿಲ್ಲದೆ ನಡೆಯಬೇಕು. ಸತ್ಯವನ್ನು ಹೊರಗೆ ಎಳೆಯಲು ಅಥವಾ ಅನುಮಾನಗಳನ್ನು ಬಗೆಹರಿಸಿಕೊಳ್ಳಲು ಎಸ್‌ಐಟಿ ಸ್ವತಂತ್ರವಾಗಿ ಕೆಲಸ ಮಾಡಬೇಕು, ಅದು ರಾಜಕೀಯ ಹಸ್ತಕ್ಷೇಪದಿಂದ ಮುಕ್ತವಾಗಿ ಇರಬೇಕು. ಧರ್ಮಸ್ಥಳದ ಮಂಜುನಾಥ ಸ್ವಾಮಿ ದೇವಸ್ಥಾನದ ಆಡಳಿತವನ್ನು ನಿರ್ವಹಿಸುತ್ತಿರುವ ಹೆಗ್ಗಡೆ ಕುಟುಂಬವನ್ನು ಗುರಿಯಾಗಿಸಿಕೊಂಡ ಗುಸುಗುಸು ಮಾತುಗಳು ದಶಕಗಳಿಂದ ಇವೆ. ಒಂದು ದಶಕದ ಹಿಂದೆ ನಡೆದ 17 ವರ್ಷ ವಯಸ್ಸಿನ ಸೌಜನ್ಯಾ ಎನ್ನುವ ಯುವತಿಯ ಮೇಲೆ ನಡೆದ ಅತ್ಯಾಚಾರ ಮತ್ತು ಕೊಲೆ ಪ್ರಕರಣವು, ಹೆಗ್ಗಡೆ ಕುಟುಂಬದ ಬಗ್ಗೆ ಗುಟ್ಟಾಗಿ ಆಡುತ್ತಿದ್ದ ಮಾತುಗಳು ದೊಡ್ಡ ದನಿಯನ್ನು ಪಡೆಯುವಂತೆ ಮಾಡಿತು. ಸೌಜನ್ಯಾ ಹತ್ಯೆ ಪ್ರಕರಣದಲ್ಲಿ ಪೊಲೀಸರು ನಡೆಸಿದ ತನಿಖೆಯು ಅದೆಷ್ಟು ಅದಕ್ಷತೆಯಿಂದ ಕೂಡಿತ್ತೆಂದರೆ, ಅಧಿಕಾರಿಗಳನ್ನು ಹೈಕೋರ್ಟ್ ಕಟುವಾಗಿ ತರಾಟೆಗೆ ತೆಗೆದುಕೊಂಡಿತ್ತು. ತನಿಖೆಯ ಹೊಣೆಯನ್ನು ಸಿಬಿಐ ವಹಿಸಿಕೊಂಡ ನಂತರವೂ ಈ ಪ್ರಕರಣದ ಅಪರಾಧಿಗಳನ್ನು ಪತ್ತೆ ಮಾಡಲು ಸಾಧ್ಯವಾಗಲಿಲ್ಲ. ವೈದ್ಯಕೀಯ ವಿದ್ಯಾರ್ಥಿನಿ ಅನನ್ಯಾ ಭಟ್ ಅವರ ನಾಪತ್ತೆ ಪ್ರಕರಣದ ಸಂದರ್ಭದಲ್ಲಿಯೂ ಸಾರ್ವಜನಿಕರಲ್ಲಿ ಆತಂಕವು ಹೆಚ್ಚಾಗಿತ್ತು. ಈ ಪ್ರಕರಣಗಳು ಉತ್ತರವಿಲ್ಲದ ಪ್ರಶ್ನೆಗಳನ್ನು ಉಳಿಸಿಬಿಟ್ಟಿವೆ. ಧರ್ಮಸ್ಥಳದಲ್ಲಿ ಸ್ವಚ್ಛತಾ ಕಾರ್ಮಿಕ ಆಗಿ ಕೆಲಸ ಮಾಡಿರುವುದಾಗಿ ಹೇಳಿಕೊಂಡಿರುವ ವ್ಯಕ್ತಿಯೊಬ್ಬರು, ನೂರಾರು ಮೃತದೇಹಗಳನ್ನು ಹೂತುಹಾಕುವ ಕೆಲಸವನ್ನು 1995ರಿಂದ 2014ರ ನಡುವೆ ತಮ್ಮಿಂದ ಒತ್ತಾಯಪೂರ್ವಕವಾಗಿ ಮಾಡಿಸಲಾಗಿದೆ ಎಂದು ಈಗ ದೂರಿದ್ದಾರೆ. ಹೂತು ಹಾಕಿದ ಹಲವು ಮೃತದೇಹಗಳ ಮೇಲೆ ಲೈಂಗಿಕ ಹಲ್ಲೆ ನಡೆದ ಗುರುತುಗಳು ಇದ್ದವು ಎಂದೂ ಹೇಳಿದ್ದಾರೆ. ಇಂತಹ ಪ್ರಕರಣದಲ್ಲಿ, ಅಸ್ಥಿಪಂಜರದ ತುಂಡುಗಳನ್ನು ಇಟ್ಟುಕೊಂಡು ನಿರ್ಣಯವೊಂದಕ್ಕೆ ಬರುವುದು ಕಷ್ಟದ ಕೆಲಸ. ಆದರೆ, ಎಸ್‌ಐಟಿ ಹೊಣೆಯು ಇಷ್ಟಕ್ಕೇ ಸೀಮಿತ ಆಗಬಾರದು. ಆ ಪ್ರದೇಶಕ್ಕೆ ಸಂಬಂಧಿಸಿದಂತೆ ಇರುವ ಇತರ ಹಲವು ಆರೋಪಗಳನ್ನು ಕೂಡ ಅದು ತನಿಖೆಗೆ ಒಳಪಡಿಸಬೇಕು. ದಶಕವೊಂದರ ಹಿಂದೆ ಟಿ.ವಿ. ವಾಹಿನಿಯೊಂದು ಆ ಭಾಗದಲ್ಲಿ ಯುವತಿಯರು ನಾಪತ್ತೆಯಾಗಿರುವ ಬಗ್ಗೆ ಸರಣಿ ವರದಿಯನ್ನು ಬಿತ್ತರಿಸಿತ್ತು. ಯುವತಿಯರ ನಾಪತ್ತೆ ಆರೋಪವನ್ನು ಮತ್ತೆ ಮತ್ತೆ ಮಾಡಲಾಗಿದೆ ಎಂಬುದು ಗಮನಾರ್ಹ. ಪೊಲೀಸ್ ದಾಖಲೆಗಳನ್ನು ಪರಿಶೀಲಿಸಿ, ಈ ಆರೋಪದ ಬಗ್ಗೆ ಎಸ್‌ಐಟಿ ತನಿಖೆ ನಡೆಸಬಹುದು. ಸಾಕ್ಷ್ಯ ಎಂಬುದಾಗಿ ಹೇಳಿಕೊಂಡು 8,000ಕ್ಕೂ ಹೆಚ್ಚಿನ ವೆಬ್ ಕೊಂಡಿಗಳನ್ನು ವೆಬ್‌ಸೈಟ್‌ಗಳಲ್ಲಿ ಪ್ರಕಟಿಸಿರುವ ವಿವಿಧ ಯೂಟ್ಯೂಬರ್‌ಗಳು ಹಾಗೂ ಸ್ಥಳೀಯ ಸಾಮಾಜಿಕ ಕಾರ್ಯಕರ್ತರನ್ನು ಕೂಡ ಎಸ್‌ಐಟಿ ಕರೆಸಿ, ಮಾಹಿತಿ ಪಡೆಯಬೇಕು. ಇಲ್ಲಿನ ಆರೋಪಗಳಿಗೆ ಸಂಬಂಧಿಸಿದ ಚಿತ್ರಣವು ಗೋಜಲು ಗೋಜಲಾಗಿದೆ. ಪ್ರಶ್ನಾರ್ಹವಾದ ಆಸ್ತಿ ವಹಿವಾಟುಗಳು, ಕಿರುಸಾಲಕ್ಕೆ ಸಂಬಂಧಿಸಿದ ಕೆಲವು ವಿವಾದಗಳು ಕೂಡ ಈಗ ಮುನ್ನೆಲೆಗೆ ಬಂದಿವೆ. ದೇವಸ್ಥಾನವನ್ನು ಜೈನ ಸಮುದಾಯಕ್ಕೆ ಸೇರಿದ ಕುಟುಂಬವೊಂದು ನಿರ್ವಹಿಸುತ್ತಿದೆ ಎನ್ನುವುದು ಕೂಡ ಕೆಲವರಿಗೆ ಅಪಥ್ಯವಾಗಿರಬಹುದು.

> **ಧರ್ಮಸ್ಥಳದಲ್ಲಿ ನಡೆದಿದೆ ಎನ್ನಲಾದ ದುಷ್ಕೃತ್ಯಗಳ ತನಿಖೆಯನ್ನು ಎಸ್‌ಐಟಿ ಎಲ್ಲಾ ಆಯಾಮಗಳಿಂದ ನಡೆಸಬೇಕು; ಅನುಮಾನಕ್ಕೆ ಆಸ್ಪದ ಇಲ್ಲದಂತೆ ಸತ್ಯ ಸಾಬೀತು ಮಾಡಬೇಕು.**

ಆದರೆ, ಇದಕ್ಕೆ ಸುಪ್ರೀಂ ಕೋರ್ಟ್ 1976ರಲ್ಲೇ ಸ್ಪಷ್ಟವಾಗಿ ಉತ್ತರ ನೀಡಿದೆ. ದೇವಸ್ಥಾನವು ಹೆಗ್ಗಡೆ ಕುಟುಂಬದ್ದು, ಅದರ ಆಡಳಿತ ನಿರ್ವಹಣೆಯು ವಂಶಪಾರಂಪರ್ಯವಾಗಿ ಧರ್ಮಾಧಿಕಾರಿಯ ಕೈಯಲ್ಲಿ ಇರುತ್ತದೆ ಎಂದು ಕೋರ್ಟ್ ಹೇಳಿದೆ. ಈಗ ಬಂದಿರುವ ಆರೋಪಗಳ ಹರವು ಗಮನಿಸಿದಾಗ, ಆರೋಪಗಳ ಬಗ್ಗೆ ಎಸ್‌ಐಟಿ ಸಮಗ್ರ ತನಿಖೆ ನಡೆಸುವುದು ಅಗತ್ಯ. ಇದು ರೋಚಕವಾಗಿ ಕಾಣುವಂತಹ ಒಂದು ಆರೋಪಕ್ಕೆ ಸಂಬಂಧಿಸಿದ ವಿಚಾರ ಅಲ್ಲ; ಬದಲಿಗೆ, ಇದೇ ಬಗೆಯ ಇನ್ನೂ ಕೆಲವು ಆರೋಪಗಳ ಇತಿಹಾಸ ಇರುವುದರ ಕುರಿತಾದದ್ದು. ಇಂತಹ ಆರೋಪಗಳನ್ನು ಉಪೇಕ್ಷಿಸಿದರೆ ವಿಶ್ವಾಸಕ್ಕೆ ಚ್ಯುತಿ ಬರುತ್ತದೆ. ಇಲ್ಲಿ ನಡೆದಿರುವುದು ದುರುದ್ದೇಶದ, ಕೆಟ್ಟ ಹೆಸರು ತರುವ ಅಭಿಯಾನವೋ ಅಥವಾ ಸತ್ಯವನ್ನು ಮುಚ್ಚಿ ಹಾಕುವ ಪ್ರಯತ್ನವೋ ಎಂಬುದು ತನಿಖೆಯಿಂದ ಬಯಲಾಗಬೇಕು. ಎಸ್‌ಐಟಿಯು ಅಗತ್ಯವಿರುವ ಎಲ್ಲಾ ಆಯಾಮಗಳಿಂದ ತನಿಖೆ ನಡೆಸಬೇಕು. ಸತ್ಯವನ್ನು ಅನುಮಾನಗಳಿಗೆ ಎಡೆಯಿಲ್ಲದಂತೆ ಸಾಬೀತು ಮಾಡುವ ಗುರಿಯನ್ನು ಎಸ್‌ಐಟಿ ಇರಿಸಿಕೊಳ್ಳಬೇಕು.

# ರಾಮಾಯಣ



## ಅನಸೂಯಾ ಸೀತಾದೇವಿಯರ ಸಂಭಾಷಣೆ

• ಹಿಂದಿನ ಸಂಚಿಕೆಯಿಂದ 116ನೆಯ ಅಧ್ಯಾಯ

ನನ್ನ ತಂದೆಯು ಸಮುದ್ರದೊಳಗೆ ಮುಳುಗಿ ತಡಿಯನ್ನು ಕಾಣದವನಂತೆ ನನ್ನನ್ನು ನೋಡಿ ಚಿಂತೆ ಪಡುತ್ತ ನನಗೆ ತಕ್ಕ ವಯೋರೂಪಗಳುಳ್ಳ ಪುರುಷನಾರೆಂದು ವಿಚಾರಿಸುತ್ತ ನನಗೆ ಸ್ವಯಂವರವನ್ನು ಮಾಡಬೇಕೆಂದು ನಿಶ್ಚಯಿಸಿದನು. ಪೂರ್ವದಲ್ಲಿ ನಮ್ಮ ತಂದೆಯಾದ ಜನಕರಾಯನು ಯಾಗಮಾಡಿದಾಗ ಹವಿರ್ಭಾಗಗಳಿಂದ ವರುಣನು ಮೆಚ್ಚಿ ಆತನಿಗೆ ಒಂದು ದಿವ್ಯವಾದ ಧನುಸ್ಸನ್ನೂ ಅಕ್ಷಯಬಾಣಗಳುಳ್ಳ ಎರಡು ಬತ್ತಳಿಕೆಗಳನ್ನೂ ಕೊಟ್ಟನು. ಆ ಬಿಲ್ಲು ಮನುಷ್ಯರಿಂದ ಚಲನ ಮಾಡುವುದಕ್ಕೂ ಅಶಕ್ಯವಾದದ್ದು. ಜನಕರಾಯನು ಸ್ವಪ್ನದಲ್ಲಿಯಾದರೂ ಕದಲಿಸುವುದಕ್ಕೆ ಅಸಾಧ್ಯವಾದ ಆ ಬಿಲ್ಲನ್ನು ಸಭೆಗೆ ತರಿಸಿ ಸಮಸ್ತ ಅರಸರನ್ನೂ ಕರೆಯಿಸಿ ಅವರ ಸಂಮುಖದಲ್ಲಿ ಆ ಬಿಲ್ಲನ್ನು ಹೆದೆಯೇರಿಸಿದವನಿಗೆ ನನ್ನನ್ನು ಕೊಡುವುದಾಗಿ ಪ್ರತಿಜ್ಞೆಯನ್ನು ಮಾಡಿದನು. ನನ್ನ ತಂದೆಯ ಆ ಮಾತನ್ನು ಕೇಳಿ ಆ ಅರಸರು ಬಿಲ್ಲನ್ನು ನೋಡಿ ಕದಲಿಸುವುದಕ್ಕೂ ಸಮರ್ಥರಲ್ಲದೆ ದೂರದಿಂದಲೇ ಆ ಬಿಲ್ಲಿಗಭಿವಂದಿಸಿ ತಮ್ಮ ತಮ್ಮ ದೇಶಗಳಿಗೆ ಹಿಂತಿರುಗಿ ಹೋದರು. ಈ ಪ್ರಕಾರ ಕೆಲವು ಕಾಲ ಕಳೆದಮೇಲೆ ವಿಶ್ವಾಮಿತ್ರಮುನೀಶ್ವರನು ಶ್ರೀರಾಮಲಕ್ಷ್ಮಣಸಮೇತನಾಗಿ ನನ್ನ ತಂದೆಯು ಮಾಡುತ್ತಿದ್ದ ಯಜ್ಞವನ್ನು ನೋಡಬೇಕೆಂದು ಬಂದನು. ನನ್ನ ತಂದೆಯು ಆ ಮುನೀಶ್ವರನಿಗೆ ಸತ್ಕಾರವನ್ನು ಮಾಡಿ ಆ ರಾಜಕುಮಾರರು ಯಾರೆಂದು ಕೇಳಿದನು. ಆತನು ಅವರು ದಶರಥಮಹಾರಾಜನ ಕುಮಾರರೆಂದೂ ಮಹಾಪರಾಕ್ರಮಿ ಗಳೆಂದೂ ಅವರ ಹೆಸರು ರಾಮಲಕ್ಷ್ಮಣರೆಂದೂ ಅವರು ಜನಕರಾಜನ ಅರಮನೆಯಲ್ಲಿ ದಿವ್ಯವಾದ ಒಂದು ಬಿಲ್ಲಿದೆಯೆಂದು ಕೇಳಿ ಅದನ್ನು ನೋಡಬೇಕೆಂದು ಬಂದರೆಂದೂ ನುಡಿದನು. ಅದನ್ನು ಕೇಳಿ ಆ ಬಿಲ್ಲನ್ನು ತರಿಸಿ ರಾಮಲಕ್ಷ್ಮಣರ ಮುಂದಿರಿಸಿದನು. ಶ್ರೀರಾಮನು ಆ ಬಿಲ್ಲನ್ನು ನೋಡಿ ಒಂದು ಕ್ಷಣಮಾತ್ರದಲ್ಲಿ ಹೆದೆಯನ್ನೇರಿಸಿ ಕಿವಿಯ ಪರ್ಯಂತ ಬಿಲ್ಲುನಾರಿಯನ್ನು ಸೆಳೆಯಲು ಆ ರಭಸಕ್ಕೆ ಆ ಬಿಲ್ಲು ಚಟಚಟಧ್ವನಿಯಿಂದ ಎರಡು ತುಂಡಾಗಿ ಮುರಿಯಿತು. ಆ ಧ್ವನಿಯು ಒಂದೇಸಾರಿ ಆನೇಕ ಸಿಡಿಲುಗಳೊಡೆದವೋ ಎಂಬಂತೆ ಅತಿಭಯಂಕರವಾಗಿ ಕೇಳಿಸುತ್ತ ಸ್ವರ್ಗಮರ್ತ್ಯಪಾತಾಳಗಳೆಂಬ ಮೂರು ಲೋಕಗಳಲ್ಲಿಯೂ ತುಂಬಿತು ಆ ಸಮಯದಲ್ಲಿ ನಮ್ಮ ತಂದೆಯಾದ ಜನಕರಾಜನು ಸುವರ್ಣಕಲಶಗಳಲ್ಲಿ ಪುಣ್ಯ ತೀರ್ಥೋದಕವನ್ನು ತಂದು ನನ್ನನ್ನು ಆತನಿಗೆ ಧಾರೆಯೆರೆದುಕೊಡಲು ಯತ್ನ ಮಾಡಲು ಶ್ರೀರಾಮನು ತನ್ನ ತಂದೆಯಾದ ದಶರಥರಾಯನಿಗೆ ಅರಿಕೆಯಿಲ್ಲದೆ ವಿವಾಹವಾಗ ಬಾರದೆಂದನು. ನನ್ನ ತಂದೆಯು ದಶರಥರಾಯನನ್ನು ತನ್ನ ಮಂತ್ರಿಗಳಿಂದ ಕರೆಯಕಳುಹಿಸಿ ಆ ವೃತ್ತಾಂತವನ್ನು ಅರಿಕೆಮಾಡಿ ಅತ್ಯುತ್ಸವದಿಂದ ನನ್ನನ್ನು ಶ್ರೀರಾಮನಿಗೆ ಧಾರೆಯೆರೆದುಕೊಟ್ಟು ನನ್ನ ತಂಗಿಯಾದ ಊಳಾದೇವಿಯನ್ನು ಲಕ್ಷ್ಮಣನಿಗೆ ಕೊಟ್ಟನು. ಈ ಪ್ರಕಾರ ನಾನು ಸ್ವಯಂವರದಲ್ಲಿ ಶ್ರೀರಾಮನನ್ನು ಕೈಹಿಡಿದು ಕೃತಾರ್ಥಳಾಗಿ ಆತನ ಸೇವೆಯನ್ನು ಮಾಡಿಕೊಂಡು ಇದ್ದೇನೆ ಎಂದು ಹೇಳಿದಳು.

ಮುಂದುವರಿಯುವುದು...

# ಬೆಳಗಾವಿಯಲ್ಲಿಯೂ ಹೊಸ ಮಳಿಗೆ ತೆರೆದ ರಾಯಲ್ ಓಕ್ ಫರ್ನಿಚರ್

## ಇದು ಕರ್ನಾಟಕದಲ್ಲಿ ರಾಯಲ್‌ಓಕ್ ಫರ್ನಿಚರ್‌ನ 63ನೇ ಮಳಿಗೆ

• ಉದಯವಾಹಿನಿ, ಬೆಳಗಾವಿ

ಭಾರತದ ನಂ.1 ಫರ್ನಿಚರ್ ಬ್ರಾಂಡ್ ಆಗಿರುವ ರಾಯಲ್ ಓಕ್ ಫರ್ನಿಚರ್ ಸಂಸ್ಥೆಯು ಬೆಳಗಾವಿಯಲ್ಲಿ ತನ್ನ ಹೊಸ ಮಳಿಗೆಯನ್ನು ಉದ್ಘಾಟಿಸಿದೆ. ಈ ಮೂಲಕ ಕರ್ನಾಟಕದಲ್ಲಿ ತನ್ನ ಉಪಸ್ಥಿತಿಯನ್ನು ವಿಸ್ತರಿಸಿದೆ. ಈ ಮಳಿಗೆ ಉದ್ಘಾಟನಾ ಸಂದರ್ಭದಲ್ಲಿ ರಾಯಲ್‌ಓಕ್ ಇನ್‌ಕಾರ್ಪೊರೇಶನ್ ಪ್ರೈ. ಲಿಮಿಟೆಡ್‌ನ ಅಧ್ಯಕ್ಷ ಶ್ರೀ ವಿಜಯ್ ಸುಬ್ರಮಣಿಯಂ ಮತ್ತು ವ್ಯವಸ್ಥಾಪಕ ನಿರ್ದೇಶಕ ಶ್ರೀ ಮಥನ್ ಸುಬ್ರಮಣಿಯಂ ಉಪಸ್ಥಿತರಿದ್ದರು. ರಾಯಲ್‌ಓಕ್ ನ ಫ್ರಾಂಚೈಸ್ ಹೆಡ್ ಶ್ರೀ ಕಿರಣ್ ಛಾಬ್ರಿಯಾ, ವಿಷುವಲ್ ಮರ್ಚಂಡೈಸಿಂಗ್ ಮತ್ತು ಹೊಸ ಸ್ಟೋರ್ ಓಪನಿಂಗ್ ವಿಭಾಗದ ಹೆಡ್ ಶ್ರೀ ತಮ್ಮಯ್ಯ ಕೊಟೇರ, ಫ್ರಾಂಚೈಸ್ ಆಪರೇಷನ್ ಹೆಡ್ ಶ್ರೀ ಮಹೇಶ್ ಪಂಡಿತ್, ಫ್ರಾಂಚೈಸ್ ಮ್ಯಾನೇಜರ್ ಶ್ರೀ ಅರುಣ್ ಗೌಡ ಮತ್ತು ಫ್ರಾಂಚೈಸ್ ಪಾಲುದಾರರಾದ ಶ್ರೀ ಸುನೀಲ್ ಕುಮಾರ್, ಶ್ರೀಮತಿ ಅನು ಬಾಯಿ, ಶ್ರೀ ರಾಘವೇಂದ್ರ ಹಾಗೂ ಶ್ರೀಮತಿ ಶ್ವೇತಾ ಅವರು


ಉದಯವಾಹಿನಿ ಚಿತ್ರ

ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಮಾತನಾಡಿದ ರಾಯಲ್‌ಓಕ್ ಫರ್ನಿಚರ್‌ನ ಅಧ್ಯಕ್ಷ ಶ್ರೀ ವಿಜಯ್ ಸುಬ್ರಮಣಿಯಂ ಅವರು, ಕರ್ನಾಟಕದಲ್ಲಿ ಈಗಾಗಲೇ 60ಕ್ಕೂ ಹೆಚ್ಚು ಮಳಿಗೆಗಳನ್ನು ಮತ್ತು ದೇಶದಾದ್ಯಂತ 200 ಮಳಿಗೆಗಳ ಜಾಲವನ್ನು ಹೊಂದಿರುವ ನಾವು ಬೆಳಗಾವಿಯಲ್ಲಿ ಹೊಸ ಮಳಿಗೆ ಆರಂಭಿಸಲು ಸಂತೋಷ ಪಡುತ್ತೇವೆ. ಗ್ರಾಹಕರಿಗೆ ಅತ್ಯುತ್ತಮ ಪೀಠೋಪಕರಣ ಉತ್ಪನ್ನಗಳು ಮತ್ತು ಉತ್ತಮ ಸೇವೆ ಒದಗಿಸುವ ಉದ್ದೇಶದಿಂದ ಈ ಮಳಿಗೆ ತೆರೆಯಲಾಗಿದೆ. ಬೆಳಗಾವಿಯ ಜನರು ಅಂತರರಾಷ್ಟ್ರೀಯ ಗುಣಮಟ್ಟದ ಉತ್ಪನ್ನಗಳನ್ನು ಕೈಗೆಟುಕುವ ಬೆಲೆಯಲ್ಲಿ ತಮ್ಮದಾಗಿಸಿಕೊಳ್ಳುವುದನ್ನು ನೋಡಲು ನಾವು ಉತ್ಸುಕರಾಗಿದ್ದೇವೆ. ಗ್ರಾಹಕರಿಗೆ ತಮ್ಮ ಕನಸಿನ ಮನೆಯನ್ನು ರೂಪಿಸಲು ಬೇಕಾದ ಉತ್ಪನ್ನಗಳನ್ನು ಒದಗಿಸಲು ನಾವು ಕಾತರದಿಂದ ಕಾಯುತ್ತಿದ್ದೇವೆ ಎಂದರು.

ಈ ಮಳಿಗೆಯಲ್ಲಿ ವಿಶೇಷವಾದ 'ಕಂಟ್ರಿ ಸ್ಟೋರ್' ವಿಭಾಗವಿದ್ದು, ಇಲ್ಲಿ ಅಮೆರಿಕಾ, ಇಟಲಿ, ಮಲೇಷಿಯಾ ಮತ್ತು ಭಾರತದ ಉತ್ತಮ ಮತ್ತು ಅನನ್ಯ ಫರ್ನಿಚರ್ ಗಳನ್ನು ಪ್ರದರ್ಶಿಸಲಾಗುತ್ತದೆ. ರಾಯಲ್‌ಓಕ್ ಭಾರತದಾದ್ಯಂತ ಇರುವ ಎಲ್ಲಾ ಮಹಾ ನಗರಗಳು ಮತ್ತು 2ನೇ ಮತ್ತು 3ನೇ ಶ್ರೇಣಿಯ ನಗರಗಳಲ್ಲಿ ಉಪಸ್ಥಿತಿ ಹೊಂದಿದ್ದು, 10 ಮಿಲಿಯನ್ ಗಳಿಗೂ ಹೆಚ್ಚು ಮಂದಿಗೆ ಉತ್ತಮ ಸೇವೆ ಒದಗಿಸುತ್ತಿದೆ. ಕಾಶ್ಮೀರದಿಂದ ಕನ್ಯಾಕುಮಾರಿವರೆಗೆ ಮತ್ತು ಗುಜರಾತ್‌ನಿಂದ ನಾಗಾಲ್ಯಾಂಡ್‌ವರೆಗೆ 200ಕ್ಕೂ ಹೆಚ್ಚು ಮಳಿಗೆಗಳನ್ನು ಹೊಂದಿದೆ. ವಿಳಾಸ: ಬಾಕ್ಸೈಟ್ ರಸ್ತೆ, ರಿಲಯನ್ಸ್ ಮಾಲ್ ಪಕ್ಕದಲ್ಲಿ, ಕಮಲೇಶ್ವರ ನಗರ, ಬೆಳಗಾವಿ ದೂರವಾಣಿ ಸಂಖ್ಯೆ: 9740780714


### ಉತ್ಪನ್ನಗಳು ಲಭ್ಯ

**ಈ ಹೊಸ ಮಳಿಗೆಯು 12,000 ಚದರ ಅಡಿಗಳಷ್ಟು ವಿಶಾಲವಾದ ವಿಸ್ತೀರ್ಣ ಹೊಂದಿದ್ದು, ಇಲ್ಲಿ ಮನೆಯ ಪ್ರತೀ ಭಾಗಕ್ಕೆ ಸಲ್ಲುವ ಪೀಠೋಪಕರಣಗಳ ವ್ಯಾಪಕ ಶ್ರೇಣಿ ಲಭ್ಯವಿದೆ. ಲಿವಿಂಗ್ ರೂಮ್, ಬೆಡ್ ರೂಮ್, ಡೈನಿಂಗ್ ಏರಿಯಾ, ಅಧ್ಯಯನ ಸ್ಥಳ ಮತ್ತು ಕಚೇರಿ, ಔಟ್‌ಡೋರ್, ಹೋಮ್ ಡೆಕೋರ್, ಹಾಸಿಗೆಗಳು ಹೀಗೆ ವಿವಿಧ ವಿಭಾಗಗಳ ಉತ್ಪನ್ನಗಳು ಇಲ್ಲಿ ದೊರೆಯುತ್ತವೆ. ಇದೀಗ ಬೆಳಗಾವಿಯ ಮಂದಿ ತಮ್ಮ ಮನೆ ಹತ್ತಿರದಲ್ಲಿಯೇ ಅತ್ಯುತ್ತಮ ಉತ್ಪನ್ನಗಳನ್ನು ಕೈಗೆಟುಕುವ ಬೆಲೆಯಲ್ಲಿ ಕೊಂಡುಕೊಳ್ಳಬಹುದು.**


# ಭಾರತದ ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿರವರ 07ನೇ ಪುಣ್ಯಸ್ಮರಣೆ


ಕಲಾ ಸಾಹಿತ್ಯ
ಕೃಷ್ಣಪ್ಪ
ಲೇಖಕರು
ಪ್ರಗತಿ ಪರ ಚಿಂತಕ ಹಾಗೂ ವಿಮರ್ಶಕರು

ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿರವರು 1924 ಡಿಸೆಂಬರ್ 25 ರಂದು ಮಧ್ಯಪ್ರದೇಶದ ಗ್ವಾಲಿಯರ್ ನಲ್ಲಿ ಜನಿಸಿದರು. ಬಾಲ್ಯ, ವಿದ್ಯಾಭ್ಯಾಸ, ಸಂಸ್ಕಾರ, ಪೋಷಕರ ಹಾಗೂ ಗುರುಗಳ ಆಶೀರ್ವಾದದಿಂದ ಶ್ರದ್ಧೆ, ಶಿಸ್ತು, ಪ್ರಯತ್ನ, ಕಠಿಣ ಪರಿಶ್ರಮದಿಂದ ರಾಷ್ಟ್ರದ ಉತ್ತುಂಗ ಸ್ಥಿತಿಗೆ ಏರಿದ ಪೈಕಿ ಒಬ್ಬರಾಗಿರುತ್ತಾರೆ. ಜಾತಿ,ಧರ್ಮ,ಪಕ್ಷ ಭೇದ ಮರೆತು ಕಾಲಾ ದೇಶ, ಜಾತಿ, ಧರ್ಮ, ಪಕ್ಷ ಮೀರಿ ಭಾರತೀಯರ ಹೃದಯಗಳಲ್ಲಿ ಗೌರವ,ಹೆಮ್ಮೆ,ಆದರ ಭಾವನೆಗಳು ಮೂಡುವಂತೆ ಅವರು ಯಾವ ಕೆಲಸವನ್ನು ಮಾಡಿದರೂ ದೇಶದ ಘನತೆ,ಗೌರವ, ಹಿರಿಮೆಗಳನ್ನು ಎತ್ತಿ ತೋರುವಂತೆ ಮಾಡುವ ಮಹಾನ್ ವ್ಯಕ್ತಿತ್ವ ಅವರದು. ಕವಿ,ಪತ್ರಿಕೋದ್ಯಮಿ,ಶ್ರೇಷ್ಠ ವಾಗ್ಮಿ, ಪ್ರಾಮಾಣಿಕ ರಾಜಕಾರಣಿ,ಅಜಾತಶತ್ರು, ಶ್ರೇಷ್ಠ ಸಂಸದೀಯ ಪಟು,ಹಾಸ್ಯ ಸ್ವಭಾವ, ಸ್ವಾತಂತ್ರ ಮನೋಭಾವ, ಯುಕ್ತಾಯುಕ್ತ ಆಲೋಚನೆ, ಪರಾಮರ್ಶೆ, ವೈಚಾರಿಕತೆ ಹೀಗೆ ಹಲವು ಹತ್ತು ಗುಣಗಳನ್ನು ಮೈಗೂಡಿಸಿಕೊಂಡು ತಮ್ಮ ಸ್ವಂತ ಪ್ರತಿಭೆ, ಬೌದ್ಧಿಕ ಶಕ್ತಿ ಸಾಮರ್ಥ್ಯಗಳಿಂದ ದೇಶದ ಪ್ರಧಾನಮಂತ್ರಿಯಾಗಿ ಪ್ರಸಿದ್ಧರಾದರು. ದೇಶದ ಪ್ರಗತಿಗಾಗಿ ಹತ್ತು ಹಲವಾರು ಉಪಯುಕ್ತ ಯೋಜನೆಗಳನ್ನು ರೂಪಿಸಿ ಭಾರತದ ನದಿಗಳೆಲ್ಲವನ್ನೂ ಒಟ್ಟುಗೂಡಿಸಿ ಬರಪೀಡಿತ ಪ್ರದೇಶಗಳಲ್ಲಿ ಸಂಪದ್ಭರಿತ ಪ್ರಾಂತ್ಯಗಳನ್ನಾಗಿ ಮಾಡುವ ಉದ್ದೇಶ ಹೊಂದಿದ್ದರು. ಅಟಲ್ ಬಿಹಾರಿ ವಾಜಪೇಯಿ ಅವರು ಓರ್ವ ಆದರ್ಶ ರಾಜಕೀಯ ನಾಯಕರಾಗಿದ್ದು, ನಿಸ್ವಾರ್ಥ ಮನೋಭಾವ, ಉಜ್ವಲ ದೇಶಪ್ರೇಮ, ರಾಷ್ಟ್ರೀಯತೆ ಇವುಗಳಿಂದ ಕೂಡಿದ ಪಾರದರ್ಶಕ ವ್ಯಕ್ತಿತ್ವ ಅವರದಾಗಿತ್ತು.ದೇಶಕ್ಕಾಗಿ ಎಂಥ ತ್ಯಾಗಕ್ಕೂ ಕೂಡ ಅವರು ಸಿದ್ಧರಾಗಿದ್ದರು. ಭಾರತ ಸರ್ಕಾರ 2015ರಲ್ಲಿ ಭಾರತ ರತ್ನ ಪ್ರಶಸ್ತಿ ನೀಡಿ ಗೌರವಿಸಿತು.ಇಂತಹ ಮಹಾನ್ ಚೇತನ ಆಗಸ್ಟ್ 16, 2018 ರಂದು ತನ್ನ 94 ನೇ ವಯಸ್ಸಿನಲ್ಲಿ ಭೌತಿಕ ಶರೀರವನ್ನು ಬಿಟ್ಟು ಬಾರದ ಲೋಕಕ್ಕೆ ಹೋದರು.ಆದರೂ ಅವರ ಆದರ್ಶಗಳು ಜೀವಂತವಾಗಿವೆ ಹಾಗೂ ಎಲ್ಲಾ ಪಕ್ಷದ ರಾಜಕೀಯ ಮುಖಂಡರುಗಳಿಗೆ ಆದರ್ಶರಾಗಿ, ಮಾರ್ಗದರ್ಶಕರಾಗಿ ರಾಷ್ಟ್ರದಲ್ಲಿ ಚಿರಸ್ಮರಣೀಯರಾಗಿದ್ದಾರೆ. ಅವರೇ ಧನ್ಯರು, ಹಾಗೂ ರಾಷ್ಟ್ರದ ಶಕ್ತಿ ಮತ್ತು ಆಸ್ತಿವಂತ ರಾಗಿದ್ದರು. ಭಾರತೀಯರಾದ ನಾವು ಅಟಲ್ ಬಿಹಾರಿ ವಾಜಪೇಯಿರವರ 07 ನೇ ವರ್ಷದ ಪುಣ್ಯಸ್ಮರಣೆಯ ದಿನ ಇಂದು ಅವರನ್ನು ಸ್ಮರಿಸಿ ನೆನೆಯುತ್ತಾ ಅವರ ಆದರ್ಶಗಳನ್ನು ಪಾಲಿಸುವ ಸಂಕಲ್ಪ ಮಾಡೋಣ.



# ಮಾನವೀಯತೆಯ ಸಾಕಾರ ಮೂರ್ತಿ ಶ್ರೀ ಕೃಷ್ಣ


ಕಲಾ ಸಾಹಿತ್ಯ
ಕೃಷ್ಣಪ್ಪ
ಲೇಖಕರು
ಪ್ರಗತಿ ಪರ ಚಿಂತಕ ಹಾಗೂ ವಿಮರ್ಶಕರು

ಜಗತ್ಪ್ರಸಿದ್ಧ ಈ ಪವಿತ್ರವಾದ ಪುಣ್ಯಭೂಮಿಯಲ್ಲಿ ಶ್ರೀಕೃಷ್ಣ ಜನಿಸಿದರು. ಅಂದೇ ಈ ಪುಣ್ಯಭೂಮಿ ಪವಿತ್ರವಾಯಿತು. ಶ್ರೀ ಕೃಷ್ಣ ಮಾನವನಾಗಿ ಜನಿಸಿ ಮಾನವೀಯತೆಯ ಸಾಕಾರ ಮೂರ್ತಿಯಾಗಿ ದೈವತ್ತ ಗುಣಗಳನ್ನ ಬೆಳೆಸಿಕೊಂಡು ದೇವರಾದರು. ಜಗತ್ತಿಗೆ ಗೀತೋಪದೇಶವನ್ನು ನೀಡಿದ ಗೀತಾಚಾರ್ಯನು, ದುಷ್ಟರನ್ನು ಶಿಕ್ಷಿಸಲು ಶಿಷ್ಟರನ್ನ ರಕ್ಷಿಸಲು ಯುಗ-ಯುಗಗಳಲ್ಲಿ ಹುಟ್ಟಿ ಬರುವುದಾಗಿ ಪ್ರಮಾಣ ಮಾಡಿ ಹೇಳಿದ ಧರ್ಮ ಸಂಸ್ಥಾಪಕ ಶ್ರೀ ಕೃಷ್ಣ. ಫಲಾಪೇಕ್ಷೆ ಪಡೆಯದೇ ನಿನ್ನ ಕರ್ತವ್ಯ ಅಷ್ಟೇ ಮಾಡು ಫಲಕ್ಕಿಂತ ಕರ್ಮ ಮುಖ್ಯ, ಜಯಕ್ಕಿಂತ ಪ್ರಯತ್ನ ಮುಖ್ಯ ಮತ್ತು ಮಾತಿಗಿಂತ ಕೃತಿ ಮುಖ್ಯ ಎಂದು ವೇದೋಕ್ತಿಯನ್ನು ಸಾರಿದ ಕರ್ಮಯೋಗಿ, ಧರ್ಮ ಸಂಸ್ಥಾಪಕ ಶ್ರೀ ಕೃಷ್ಣ ಪರಮಾತ್ಮ. ಸತ್ಯ ಮತ್ತು ನೇರ ಬದುಕಿನ ಶ್ರೀರಾಮ ದೇವರಾದ, ಅದೇ ರೀತಿ ಚಕ್ರವರ್ತಿಗಳ ಕಿರೀಟಗಳು ತನ್ನ ಕಾಲಿಡಿಯಲ್ಲಿ ಇದ್ದರೂ ತಾನು ಮಾತ್ರ ಎಂದಿಗೂ ರಾಜನಾಗದೇ ಧರ್ಮ ಸ್ಥಾಪಿಸಲು ಕರ್ಮವನ್ನೇ ಸಾರಿದ ಶ್ರೀ ಕೃಷ್ಣನೂ ದೇವರಾದ. ಶ್ರೀರಾಮನ ನೈತಿಕ ವ್ಯಕ್ತಿತ್ವ, ಶ್ರೀ ಕೃಷ್ಣನ ಕಲಾತ್ಮಕ ವ್ಯಕ್ತಿತ್ವ ಸಾರ್ವಕಾಲಿಕ ಸತ್ಯ.

ಶ್ರೀಕೃಷ್ಣನ ಸಂದೇಶವು ಇಡೀ ಜಗತ್ತಿನ ಮನುಕುಲಕ್ಕೆ ಬೆಳಕು ಚೆಲ್ಲುವ ಸಂದೇಶಗಳು. ಜಗತ್ತಿನ ಎಲ್ಲಾ ರಾಷ್ಟ್ರಗಳು ಶ್ರೀ ಕೃಷ್ಣನ ಸಂದೇಶಗಳನ್ನ ಪಾಲಿಸಿದ್ದೇ ಆದರೆ ಇಡೀ ಜಗತ್ತು ಶಾಂತಿ, ನೆಮ್ಮದಿ, ಸಂತೋಷವಾಗಿರಲು ಸಾಧ್ಯ.



ಶ್ರೀ ಕೃಷ್ಣನ ಮತ್ತೊಂದು ಮುಖವೇ ಅಹಿಂಸಾಮೂರ್ತಿ, ಸಹನಾಮೂರ್ತಿ, ಕರುಣಾಮೂರ್ತಿ, ಜಗತ್ತನ್ನ ಪ್ರೀತಿಸುವ ಮಹಾನ್ ಮಾನವತಾವಾದಿ. ಎಲ್ಲಾ ಧರ್ಮಕ್ಕಿಂತ ಮಾನವ ಧರ್ಮವೇ ಅತ್ಯಂತ ಶ್ರೇಷ್ಠವಾದ ಧರ್ಮ ಎಂದು ಒತ್ತಿ -ಒತ್ತಿ ಜಗತ್ತಿನ ಮನುಕುಲಕ್ಕೆ ಸಾರಿದ ಶ್ರೀ ಕೃಷ್ಣನ ಸಂದೇಶವೇ ಸಾರ್ವಕಾಲಿಕ ಸತ್ಯ. ಶ್ರೀ ಕೃಷ್ಣನ ಸಂದೇಶವೇ ಜಗತ್ತಿಗೆ ದಾರಿದೀಪ ಹಾಗೂ ಬೆಳಕು. ಶನಿವಾರ ಶ್ರೀ ಕೃಷ್ಣ ಜನ್ಮಾಷ್ಟಮಿ ಇರುವ ಪ್ರಯುಕ್ತ ಮಾನವ ಧರ್ಮವನ್ನು ಅತ್ಯಂತ ಮುಕ್ತವಾಗಿ ಪ್ರೀತಿಸಿ, ಗೌರವಿಸಿ, ಆರಾಧಿಸುವ ಸರ್ವರಿಗೂ ಶುಭಾಶಯಗಳನ್ನು ಕೋರುತ್ತೇನೆ.

# ಶ್ರೀ ರಾಘವೇಂದ್ರ ಸ್ವಾಮಿಗಳವರ 354ನೇ ಆರಾಧನಾ ಸಪ್ತರಾತ್ರೋತ್ಸವದ ಸಮಾರೋಪ ಸಮಾರಂಭ

• ಉದಯವಾಹಿನಿ, ಬೆಂಗಳೂರು

ಜಯನಗರ 5ನೇ ಬಡಾವಣೆಯ ನಂಜನಗೂಡು ಶ್ರೀರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಪರಮಪೂಜ್ಯ ಶ್ರೀಶ್ರೀ ಸುಬುಧೇಂದ್ರತೀರ್ಥ ಶ್ರೀಪಾದಂಗಳವರ ಆದೇಶದಂತೆ ಶ್ರೀಮಠದ ಹಿರಿಯ ವ್ಯವಸ್ಥಾಪಕರಾದ ಶ್ರೀ ಆರ್.ಕೆ. ವಾದೀಂದ್ರಾಚಾರ್ಯರ ನೇತೃತ್ವದಲ್ಲಿ ಆಗಸ್ಟ್ 8 ರಿಂದ 14ರ ವರೆಗೆ ಹಮ್ಮಿಕೊಂಡಿದ್ದ ಶ್ರೀ ರಾಘವೇಂದ್ರ ಸ್ವಾಮಿಗಳವರ 354ನೇ ಆರಾಧನಾ ಸಪ್ತರಾತ್ರೋತ್ಸವದ ಸಮಾರೋಪ ಸಮಾರಂಭವು ಆ. 14ರಂದು ಸಂಪನ್ನಗೊಂಡಿತು.

ಆರಾಧನಾ ಪ್ರಾರಂಭದ ಮುನ್ನ ಮೂರು ದಿನಗಳ ಕಾಲ ಶ್ರೀಮದ್ ರಾಮಾಯಣ ಪ್ರವಚನ ನಡೆಸಿಕೊಟ್ಟ ಶ್ರೀ ಪೇಜಾವರ ಮಠಾಧೀಶರಾದ ಶ್ರೀ ವಿಶ್ವಪ್ರಸನ್ನತೀರ್ಥರು ಆ. 8ರಂದು ಆರಾಧನಾ ಸಪ್ತರಾತ್ರೋತ್ಸವದ ಉದ್ಘಾಟನೆಯನ್ನು ಮಾಡಿದರು. ಆರಾಧನೆ ಸಮಯದಲ್ಲಿ ಜರುಗಿದ ಕಾರ್ಯಕ್ರಮಗಳು: ಆರಾಧನೆಯ ಎಲ್ಲಾ ದಿನಗಳಲ್ಲೂ ಬೆಳಗ್ಗೆ ವಿಶೇಷ ಪೂಜಾ ಕಾರ್ಯಕ್ರಮಗಳು, ಉತ್ತರಾರಾಧನೆಯಂದು ರಾಜಬೀದಿ ಉತ್ಸವ ವಿಜೃಂಭಣೆಯಿಂದ ನಡೆಯಿತು. ಪ್ರತಿದಿನ ಸಂಜೆ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಆಗಸ್ಟ್ 8 ರಿಂದ 14ರ ವರೆಗೆ ಕ್ರಮವಾಗಿ ಶ್ರೀ ಜಯತೀರ್ಥ ತಾಸಗಾಂವ್ ಮತ್ತು ಸಂಗಡಿಗರಿಂದ ದಾಸವಾಣಿ, ಕು. ದಿವ್ಯ ಶ್ರೀ ರಂಗನಾಥನ್, ಸಂಗಡಿಗರಿಂದ ಸ್ಯಾಕ್ಸೋಫೋನ್ ವಾದನ, ಶ್ರೀಮತಿ ದೀಪಾ ಕಾಸರವಳ್ಳಿ ಮತ್ತು ಸಂಗಡಿಗರಿಂದ ದಾಸ ತರಂಗಿಣಿ, ಶ್ರೀಮತಿ ರಮಾಮಣಿ ಗುರುಪ್ರಸಾದ್ ಮತ್ತು ಸಂಗಡಿಗರಿಂದ ದಾಸ ಝೇಂಕಾರ, ಡಾ. ರಾಯಚೂರು ಶೇಷಗಿರಿದಾಸ್ ಮತ್ತು ಸಂಗಡಿಗರಿಂದ ದಾಸಲಹರಿ, ಆಗಸ್ಟ್ 14ರಂದು ಪ್ರಭಾತ್ ಆರ್ಟ್ ಇಂಟರ್ನ್ಯಾಷನಲ್ ಶ್ರೀಮತಿ ಶಕುಂತಲಾ ರಾಘವೇಂದ್ರ ಪ್ರಭಾತ್ ಇವರ ನಿರ್ದೇಶನದಲ್ಲಿ ಭಕ್ತಿ ಯೆಂಬ ಭರತನಾಟ್ಯ ಕಾರ್ಯಕ್ರಮವನ್ನು ನಡೆಸಿಕೊಟ್ಟ ವಿದ್ಯಾರ್ಥಿಗಳು ಶೀತಲ್, ಶಿಲ್ಪಾ, ಸುರಭಿ, ಕಾಶಿಕಾ, ಮಹತಿ, ಸಂಹಿತಾ, ಹರ್ಷಲಾ, ಐಶ್ವರ್ಯ , ಮೃದುಲಾ, ದೀಕ್ಷಾ, ಅನನ್ಯಾ, ಪಾಯಲ್, ತನ್ಯಾ, ಸುನಿಷ್ಟಿ, ಸ್ವಪ್ನಂತಿ, ವೇದಿಕಾ, ಪ್ರತ್ಯುಷಾ, ಶಾಶ್ವತಿ, ಶರಣ್ಯ, ಸಮನ್ವಿತಾ, ಬೃಹತಿ, ಮಾನ್ಯಾ, ಶ್ರೀಯಾ, ಸನಿಹಾ, ವೈಷ್ಣವಿ, ಸುಪರ್ಣ, ಸಿರಿ ಇವರುಗಳ ವಿಶೇಷ ನೃತ್ಯದೊಂದಿಗೆ ಸಪ್ತಾಹ ಸಮಾರಂಭವು ಸಂಪನ್ನಗೊಂಡಿತು ಎಂದು ಶ್ರೀ ನಂದಕಿಶೋರ್ ಆಚಾರ್ಯರು ತಿಳಿಸಿದರು.


ಉದಯವಾಹಿನಿ ಚಿತ್ರ


# ಶುಂಠಿಯ ಆರೋಗ್ಯ ಲಾಭ



ಶುಂಠಿಯಲ್ಲಿ ಧಾರಾಳ ರೋಗ ನಿರೋಧಕ ಶಕ್ತಿಇದೆ. ಇದು ದೇಹದ ರೋಗವನ್ನು ತಡೆಗಟ್ಟುವ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ. ಜೀರ್ಣ ಶಕ್ತಿಯನ್ನು ಹೆಚ್ಚಿಸಲು ಶುಂಠಿ ರಸ ಬೆರೆಸಿದ ನೀರನ್ನು ಉಪಯೋಗಿಸುವುದು ಒಳ್ಳೆಯದು. ಮಲಬದ್ಧತೆಯಿಂದ ಆರಂಭಿಸಿ ಹೊಟ್ಟೆತೊಳೆಸುವುದರ ತನಕ ಎಲ್ಲ ವಿಧದ ಹೊಟ್ಟೆಯ ಅನಾರೋಗ್ಯಕ್ಕೆ ಶುಂಠಿ ಒಳ್ಳೆಯ ಔಷಧ. ಗಂಟುಗಳಲ್ಲಿ ನೋವು ಅನುಭವಿಸುವವರಿಗೆ ವಿಶೇಷವಾಗಿ ಆರ್ಥ್ರೈಟಿಸ್‌ನಂತಹವಾತರೋಗಗಳಿಗೆ ನೋವುನಿವಾರಕದಂತೆ ಶುಂಠಿ ಕೆಲಸ ಮಾಡುತ್ತದೆ. ಮಾಂಸ ಖಂಡಗಳ ಚಲನೆಗೂ ಸಹಾಯಕವಾಗುತ್ತದೆ. ಋತುಸ್ರಾವದ ಸಂದರ್ಭದಲ್ಲಿ ಹೆಣ್ಣು ಮಕ್ಕಳು ಅನುಭವಿಸುವ ಹೊಟ್ಟೆ ನೋವಿಗೆ ಶುಂಠಿಯ ರಸ ಕುಡಿಯುವುದು ಒಳ್ಳೆಯದು. ಮುಟ್ಟಿನ ದಿನಗಳ ಮೊದಲೇ ಸಣ್ಣಪ್ರಮಾಣದಲ್ಲಿ ಶುಂಠಿಯ ಸೇವನೆ ಆರಂಭಿಸಿದರೆ ಮುಟ್ಟಿನ ದಿನಗಳು ವೇದನೆ ಇಲ್ಲದೆ ಮುಗಿದು ಬಿಡುತ್ತದೆ. ಗ್ಯಾಸ್‌ನ ತೊಂದರೆಯಿಂದ ಹೊಟ್ಟೆಯುಬ್ಬರಿಸುವುದು ಹಲವು ರೀತಿಯ ತೊಂದರೆಗಳಿಗೆ ಕಾರಣವಾಗುತ್ತದೆ. ಇಂತಹ ಸಂದರ್ಭಗಳಲ್ಲಿ ಒಂದು ತುಂಡು ಹಸಿಶುಂಠಿಯನ್ನು ಬಾಯಿಯಲ್ಲಿ ಹಾಕಿ ಜಗಿಯುವುದರಿಂದ ಗ್ಯಾಸ್ ತೊಂದರೆ ಶಮನವಾಗುತ್ತದೆ. ಗರ್ಭಧಾರಣೆಯ ಸಂದರ್ಭದಲ್ಲಿ ವಾಕರಿಗೆ ಮತ್ತು ವಾಂತಿ ತುಂಬಾ ತೊಂದರೆ ನೀಡುತ್ತದೆ.


# ಸಾರಾಯಿ ಮಾತ್ರವಲ್ಲ, ನಲ್ಲಿ ನೀರು ಕುಡಿದರೂ ಕೂಡ ಮೆದುಳಿಗೆ ಹಾನಿ

ಆಲ್ಕೋಹಾಲ್,ತಂಪು ಪಾನೀಯಗಳು ಮತ್ತು ಫ್ಲೋರೈಡ್-ಭರಿತ ಟ್ಯಾಪ್ ವಾಟರ್‌ನಂತಹ ಕೆಲವು ಪಾನೀಯಗಳು ಮೆದುಳಿಗೆ ನಿಧಾನವಾಗಿ ಹಾನಿ ಮಾಡುತ್ತವೆ. ಅವು ಸ್ಮರಣಶಕ್ತಿಯ ನಷ್ಟ, ನಿದ್ರೆಯ ತೊಂದರೆ, ಮೆದುಳಿನ ಕೋಶಗಳಿಗೆ ಹಾನಿಯನ್ನುಂಟುಮಾಡುತ್ತವೆ. ಮೆದುಳನ್ನು ಚುರುಕಾಗಿ, ಆರೋಗ್ಯವಾಗಿಡಲು, ಜನರು ಯೋಗ ಧ್ಯಾನ ಮತ್ತು ಆರೋಗ್ಯಕರ ಆಹಾರದತ್ತ ಗಮನ ಹರಿಸುತ್ತಾರೆ. ಆದರೆ ಪ್ರತಿದಿನ ಸೇವಿಸುವ ಕೆಲವು ಪಾನೀಯ ಗಳು ಮೌನವಾಗಿ ಅವರ ಮೆದುಳಿನ ಆರೋಗ್ಯಕ್ಕೆ ಹಾನಿ ಮಾಡುತ್ತಿವೆ.




ಆಶ್ಚರ್ಯಕರ ಸಂಗತಿಯೆಂದರೆ, ಜನರು ಈ ಪಾನೀಯಗಳಲ್ಲಿ ಕೆಲವನ್ನು ಆರೋಗ್ಯಕರವೆಂದು ಪರಿಗಣಿಸಿ ಪ್ರತಿ ದಿನ ಕುಡಿಯುತ್ತಾರೆ. ಆದರೆ ವಾಸ್ತವದಲ್ಲಿ, ಇದು ಸ್ಮರಣಶಕ್ತಿ, ಆಲೋಚನಾ ಸಾಮರ್ಥ್ಯ ಮತ್ತು ನಿದ್ರೆಯ ಗುಣಮಟ್ಟದ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ. ನಿಮ್ಮ ಹೃದಯ ಮತ್ತು ಹೊಟ್ಟೆಗೆ ಕೆಟ್ಟದ್ದು ಮೆದುಳಿಗೆ ಸಹ ಹಾನಿಕಾರಕವಾಗಿದೆ ಎಂದು ಆರೋಗ್ಯ ತಜ್ಞರು ಕೂಡ ಅಭಿಪ್ರಾಯಪಡುತ್ತಾರೆ ಇನ್ನು ಈ ಬಗ್ಗೆ ನರವಿಜ್ಞಾನಿ ರಾಬರ್ ಡಬ್ಲ್ಯು ಬಿ ಲವ್ ನಮ್ಮ ಮೆದುಳಿಗೆ ಹಾನಿ ಮಾಡುವ 3 ಪಾನೀಯಗಳ ಬಗ್ಗೆ ತಮ್ಮ ಇನ್ಸ್ಟಾಗ್ರಾಮ್‌ನಲ್ಲಿ ಹಂಚಿಕೊಂಡಿದ್ದಾರೆ, ಅವುಗಳ ಬಗ್ಗೆ ಮಾಹಿತಿ ನೋಡೋಣ ಬನ್ನಿ

**ಮದ್ಯ:** ಮದ್ಯದ ಹಾನಿಯ ಬಗ್ಗೆ ಬಹಳ ಸಮಯದಿಂದ ಚರ್ಚೆ ನಡೆ ಯುತ್ತಿದೆ. ಆದರೆ ಇತ್ತೀಚಿನ ವರ್ಷಗಳಲ್ಲಿ ಮಾಡಲಾದ ಕೆಲವು ಅಧ್ಯಯನಗಳು ಅದು ಮೆದುಳಿಗೆ ಒಳ್ಳೆಯದಲ್ಲ ಎಂದು ಸಾಬೀತು ಪಡಿಸಿವೆ. ಮದ್ಯದ ಪರಿಣಾಮ ಕ್ರಮೇಣ ಕಂಡುಬರುತ್ತದೆ. ಇದು ಸ್ಮರಣಶಕ್ತಿಯನ್ನು ದುರ್ಬಲಗೊಳಿಸುತ್ತದೆ. ಇದು ನಿದ್ರೆಯ ಮಾದರಿಯನ್ನು ತೊಂದರೆಗೊಳಿಸುತ್ತದೆ ಮತ್ತು ಕರುಳಿನ ಆರೋಗ್ಯಕರ ಬ್ಯಾಕ್ಟೀರಿಯಾವನ್ನು ಕೊಲ್ಲುತ್ತದೆ. ಕರುಳಿನ ಆರೋಗ್ಯವು ಮೆದುಳಿನ ಆರೋಗ್ಯಕ್ಕೆ ನೇರವಾಗಿ ಸಂಬಂಧಿಸಿದೆ, ಆದ್ದರಿಂದ ಕರುಳಿನಲ್ಲಿನ ಅಸಮತೋಲನವು ನಿಮ್ಮ ಮೆದುಳಿನ ಆರೋಗ್ಯದ ಮೇಲೂ ಪರಿಣಾಮ ಬೀರುತ್ತದೆ ಎಂದರ್ಥ.



**ಸಿಹಿ ಸೋಡಾ ಮತ್ತು ತಂಪು ಪಾನೀಯಗಳು:** ಹೆಚ್ಚಿನ ಜನರು ಸೋಡಾ ತೂಕವನ್ನು ಮಾತ್ರ ಹೆಚ್ಚಿಸುತ್ತದೆ ಎಂದು ನಂಬುತ್ತಾರೆ. ಆದರೆ ವಾಸ್ತವದಲ್ಲಿ, ಅದರ ಪರಿಣಾಮ ಮೆದುಳನ್ನು ತಲುಪುತ್ತದೆ. ಇದರಲ್ಲಿರುವ ಹೆಚ್ಚಿನ ಸಕ್ಕರೆ ಅಂಶವು ಫೈಬರ್ ಇಲ್ಲದೆ ರಕ್ತದಲ್ಲಿನ ಸಕ್ಕರೆ ಮತ್ತು ಇನ್ಸುಲಿನ್ ಮಟ್ಟವನ್ನು ನೇರವಾಗಿ ಹೆಚ್ಚಿಸುತ್ತದೆ. ಇದು ದೇಹದಲ್ಲಿ ಉರಿಯೂತವನ್ನು ಉಂಟುಮಾಡುತ್ತದೆ, ಇದು ಮೆದುಳಿನ ಕೋಶಗಳನ್ನು ಹಾನಿಗೊಳಿಸುತ್ತದೆ ಮತ್ತು ಅಕಾಲಿಕ ವಯಸ್ಸಾಗುವಿಕೆಗೆ ಕಾರಣವಾಗಬಹುದು. ಡಯಟ್ ಸೋಡಾವನ್ನು ಸಹ ಸುರಕ್ಷಿತವೆಂದು ಪರಿಗಣಿಸಲಾಗುವುದಿಲ್ಲ. ಇದರಲ್ಲಿರುವ ಕೃತಕ ಸಿಹಿಕಾರಕಗಳು ಮಧುಮೇಹ, ಚಯಾಪಚಯ ರೋಗಗಳ ಅಪಾಯವನ್ನು ಹೆಚ್ಚಿಸಬಹುದು.

**ನಲ್ಲಿ ನೀರು:** ಅನೇಕ ಜನರು ನಲ್ಲಿ ನೀರನ್ನು ಸಂಪೂರ್ಣವಾಗಿ ಸಾಮಾನ್ಯವೆಂದು ಪರಿಗಣಿಸುತ್ತಾರೆ. ಆದರೆ ಅದರಲ್ಲಿರುವ ಫ್ಲೋರೈಡ್ ದೀರ್ಘಾವಧಿಯಲ್ಲಿ ಮೆದುಳಿನ ಕಾರ್ಯಗಳ ಮೇಲೆ ಪರಿಣಾಮ ಬೀರುತ್ತದೆ. ಸಂಶೋಧನೆಗಳು ಫ್ಲೋರೈಡ್ ಅನ್ನು ಅತಿಯಾಗಿ ಸೇವಿಸುವುದರಿಂದ ಮಕ್ಕಳ ಐಕ್ಯೂ ಮಟ್ಟ ಕಡಿಮೆಯಾಗುತ್ತದೆ ಎಂದು ಸೂಚಿಸುತ್ತದೆ. ಹಲ್ಲುಗಳನ್ನು ರಕ್ಷಿಸುವ ಹೆಸರಿನಲ್ಲಿ ನೀರಿಗೆ ಸೇರಿಸಲಾದ ಫ್ಲೋರೈಡ್ ದೇಹದಲ್ಲಿ ಸಂಗ್ರಹವಾಗಬಹುದು, ನುಂಗಿದರೆ ಹಾನಿಯನ್ನುಂಟುಮಾಡಬಹುದು. ಸುರಕ್ಷಿತವಾಗಿರಲು, ಆರೋ, ಡಿಸ್ಟಿಲ್ಡ್ ವಾಟರ್ ಕುಡಿಯುವುದು ಉತ್ತಮ.



**ಈ ಬಗ್ಗೆ ತಜ್ಞರು ಹೇಳುವ ಪ್ರಕಾರ:** ಇಂದಿನ ಒತ್ತಡದ ಜೀವನಶೈಲಿಯಲ್ಲಿ ನಮ್ಮಲ್ಲಿ ಬಹುತೇಕ ಜನರು ಮೆದುಳಿನ ಮೇಲೆ ಕೆಟ್ಟ ಪರಿಣಾಮ ಬೀರುವ ಕೆಲವು ಅಭ್ಯಾಸಗಳನ್ನು ಅನುಸರಿಸಿಕೊಂಡು ಹೋಗುತ್ತಿದ್ದಾರೆ.

ಆದ್ದರಿಂದ, ಆ ಕೆಟ್ಟ ಅಭ್ಯಾಸಗಳನ್ನು ಬದಲಾಯಿಸುವುದು, ಮೆದುಳಿಗೆ ಒಳ್ಳೆಯದನ್ನು ಮಾಡುವ ಒಳ್ಳೆಯ ಅಭ್ಯಾಸಗಳನ್ನು ಅಳವಡಿಸಿಕೊಳ್ಳುವುದು ಬಹಳ ಮುಖ್ಯ ಎಂದು ಆರೋಗ್ಯ ತಜ್ಞರಾದ ಡಾ. ಸಂಜೀವ್ ಸೂರಿ ಅವರು ಸಲಹೆ ನೀಡುತ್ತಾರೆ.

**ಸಕ್ಕರೆಯಾಂಶ ಆಹಾರಗಳಿಂದ ದೂರವಿರಬೇಕು:** ನಮ್ಮ ಆಹಾರವು ಮೆದುಳಿನ ಮೇಲೆ ನೇರವಾಗಿ ಪರಿಣಾಮ ಬೀರುತ್ತದೆ. ದೀರ್ಘಕಾಲದವರೆಗೆ ಸಕ್ಕರೆಯನ್ನು ಹೆಚ್ಚಿನ ಪ್ರಮಾಣದಲ್ಲಿ ಸೇವಿಸಿದರೆ, ಅದು ಮೆದುಳಿನ ಬೆಳವಣಿಗೆಯನ್ನು ನಿಧಾನಗೊಳಿಸುತ್ತದೆ ಎಂದು ತಜ್ಞರು ಹೇಳುತ್ತಾರೆ. ಇದು ಮೆದುಳಿನ ಮೇಲೂ ಪರಿಣಾಮ ಬೀರುವ ಇತರ ಅನೇಕ ಆರೋಗ್ಯ ಸಮಸ್ಯೆಗಳನ್ನು ಸಹ ಉಂಟುಮಾಡುತ್ತದೆ. ಆದ್ದರಿಂದ, ಈ ಅಭ್ಯಾಸವನ್ನು ಈಗಲೇ ಬದಲಾಯಿಸುವುದು ಮುಖ್ಯ.

**ಬೆಳಗ್ಗಿನ ತಿಂಡಿ ಮಿಸ್ ಮಾಡಬಾರದು:** ದಿನವಿಡೀ ತಾಜಾತನದಿಂದಿರಲು ಉಪಾಹಾರ ಅಗತ್ಯ. ಆದಾಗ್ಯೂ, ಅನೇಕ ಜನರು ಬೆಳಗ್ಗೆ ಉಪಾಹಾರ ಸೇವಿಸದಿರುವುದು ಅಥವಾ ಅದನ್ನು ಮರೆತುಬಿಡುವುದು ಅಭ್ಯಾಸವನ್ನು ಹೊಂದಿರುತ್ತಾರೆ. ಅಂತಹ ಪರಿಸ್ಥಿತಿಯಲ್ಲಿ, ಅದು ದೇಹಕ್ಕೆ ಮಾತ್ರವಲ್ಲದೆ ಮನಸ್ಸಿಗೂ ಹಾನಿಕಾರಕ ವಾಗಿದೆ.

• ತೆಂಗಿನಕಾಯಿಗೆ ಮಾರುಕಟ್ಟೆಯಲ್ಲಿ ಉತ್ತಮ ಧಾರಣೆ ಇದ್ದು, ಈ ಸಂದರ್ಭದಲ್ಲೇ ಕೊಳೆ ರೋಗ ಕಾಣಿಸಿಕೊಂಡಿದೆ

# ತೆಂಗಿಗೂ ಕೊಳೆರೋಗ: ಹೈರಾಣಾದ ರೈತ: ಇಳುವರಿ ಕುಸಿತ ಭೀತಿಯಲ್ಲಿ ಕೃಷಿಕರು

• **ಉದಯವಾಹಿನಿ ಉಡುಪಿ**

ಜಿಲ್ಲೆಯಲ್ಲಿ ತೆಂಗಿನ ಮರಗಳಿಗೂ ಕೊಳೆ ರೋಗ ತೀವ್ರವಾಗಿ ಬಾಧಿಸಿದ್ದು, ಈಗಾಗಲೇ ಅಡಿಕೆ ಕೊಳೆ ರೋಗದಿಂದ ಬೇಸತ್ತಿರುವ ರೈತರಿಗೆ ಬರೆ ಎಳೆದಂತಾಗಿದೆ. ಈ ಬಾರಿ ಮೇ ತಿಂಗಳಿನಿಂದಲೇ ವಿಪರೀತ ಮಳೆ ಆರಂಭವಾಗಿದ್ದು, ವಾಡಿಕೆಗಿಂತ ಅಧಿಕ ಮಳೆ ಸುರಿದಿದೆ. ನಿರಂತರ ಮಳೆಯ ಪರಿಣಾಮವಾಗಿ ತೆಂಗಿನ ಮರಗಳಲ್ಲೂ ಕೊಳೆ ರೋಗ ಕಾಣಿಸಿಕೊಂಡಿದೆ.

**ಅತಿಯಾದ ಮಳೆ ತಂದ ಆಪತ್ತು**

ತೆಂಗಿನಕಾಯಿಗೆ ಮಾರುಕಟ್ಟೆಯಲ್ಲಿ ಉತ್ತಮ ಧಾರಣೆ ಇದ್ದು, ಈ ಸಂದರ್ಭದಲ್ಲೇ ಕೊಳೆ ರೋಗ ಕಾಣಿಸಿಕೊಂಡು ಕಾಯಿ ಉದುರಿ ಬುಡಕ್ಕೆ ಬೀಳುತ್ತಿದ್ದು, ರೈತರಲ್ಲಿ ಆತಂಕ ಉಂಟು ಮಾಡಿದೆ.ಅಡಿಕೆ ತೋಟಗಳಲ್ಲಿ ಕೊಳೆ ರೋಗ ಉಲ್ಬಣಗೊಂಡ ಪರಿಣಾಮವಾಗಿ ಈ ಸಲ ರೈತರಿಗೆ ಸಾಕಷ್ಟು ನಷ್ಟ ಉಂಟಾಗಿದೆ. ತೆಂಗಿಗೂ ಕೊಳೆ ರೋಗ ಬಾಧಿಸಿರುವುದರಿಂದ ಅದರ ಇಳುವರಿಯೂ ಕುಸಿತವಾಗುವ ಭೀತಿ ರೈತರನ್ನು ಕಾಡುತ್ತಿದೆ.

ತೆಂಗಿನ ಮರಗಳು ಎತ್ತರವಾಗಿ ಬೆಳೆಯುವುದರಿಂದ ಅವುಗಳ ಗೊನೆಗಳಿಗೆ ಬೋರ್ಡೊ ದ್ರಾವಣ ಮತ್ತು ಇತರ ಔಷಧಗಳನ್ನು ಸಿಂಪಡಿಸುವುದು ಸುಲಭದ ಮಾತಲ್ಲ. ಇದೇ ಕಾರಣಕ್ಕೆ ಕೊಳೆ ರೋಗವು ಉಲ್ಬಣಗೊಳ್ಳುತ್ತಿದೆ ಎನ್ನುತ್ತಾರೆ ಕೃಷಿಕರು.

ಮಳೆಗಾಲದ ಅವಧಿಯಲ್ಲಿ ಅಡಿಕೆ ತೋಟಕ್ಕೆ ಬೋರ್ಡೊ ದ್ರಾವಣ ಸಿಂಪಡಿಸಲು ಕಾರ್ಮಿಕರು ಸಿಗುತ್ತಿಲ್ಲ. ಅದರ ಜೊತೆ ತೆಂಗಿನ ಮರಗಳಿಗೂ ಬೋರ್ಡೊ ದ್ರಾವಣ ಸಿಂಪಡಿಸುವುದು ನಡೆಯದ ಕೆಲಸ ಎನ್ನುತ್ತಾರೆ ರೈತರು.

ತೇವಾಂಶ ಹೆಚ್ಚಾಗುವುದರಿಂದ ಬೆಳೆಗಳಿಗೆ ಕೊಳೆ ರೋಗ ಬಾಧಿಸುತ್ತದೆ. ತೆಂಗಿನ ತೋಟಗಳನ್ನು ಸ್ವಚ್ಛವಾಗಿಟ್ಟುಕೊಂಡರೆ ಕೊಳೆರೋಗ ಹೆಚ್ಚಾಗಿ ಬಾಧಿಸುವುದಿಲ್ಲ. ಕೊಳೆ ರೋಗವು ತೆಂಗಿನ ಬೇರುಗಳಿಗೂ ಬಾಧಿಸುವುದರಿಂದ ಅನಂತರ ಕಾಯಿ ಉದುರಲು ಆರಂಭವಾಗುತ್ತದೆ. ಗರಿಗಳು ಕೂಡ ಕೊಳೆಯುತ್ತವೆ ಎನ್ನುತ್ತವೆ ತೋಟಗಾರಿಕಾ ಇಲಾಖೆಯ ಮೂಲಗಳು.

ಸುಮಾರು ವರ್ಷಗಳ ಬಳಿಕ ಈ ಬಾರಿ ತೆಂಗಿನ ಬೆಳೆಗೆ ಕೊಳೆ ರೋಗ ಬಾಧಿಸಿದೆ. ಇದರಿಂದ ಸಿಯಾಳ ಕಪ್ಪಾಗಿ ಉದುರಿ ಬೀಳುತ್ತಿದೆ. ಒಂದು ಸಿಯಾಳ ಕಪ್ಪಾದರೆ ಆ ಗೊನೆಯಲ್ಲಿರುವ ಎಲ್ಲಾ ಸಿಯಾಳಗಳು ಕಪ್ಪಾಗಿ ಉದುರಿ ಬೀಳುತ್ತಿವೆ’ ಎನ್ನುತ್ತಾರೆ ಉಡುಪಿ ಜಿಲ್ಲಾ ಕೃಷಿಕ ಸಂಘದ ಪ್ರಧಾನ ಕಾರ್ಯದರ್ಶಿ


ಉದಯವಾಹಿನಿ ಚಿತ್ರ

> ಜಿಲ್ಲೆಯ ವಿವಿಧೆಡೆ ಅಡಿಕೆಯ ಜೊತೆಗೆ ತೆಂಗಿನ ಬೆಳೆಗೂ ಕೊಳೆರೋಗ ಬಾಧಿಸಿದೆ. ಈ ಬಾರಿ ಅತಿಯಾದ ಮಳೆಯಿಂದಾಗಿ ತೋಟಗರಿಕಾ ಬೆಳೆಗಳಿಗೆ ಸಾಕಷ್ಟು ಹಾನಿಯಾಗಿದೆ.
> -ಕುದಿ ಶ್ರೀನಿವಾಸ ಭಟ್
> ಪ್ರಧಾನ ಕಾರ್ಯದರ್ಶಿ ಉಡುಪಿ ಜಿಲ್ಲಾ ಕೃಷಿಕ ಸಂಘ

ಕುದಿ ಶ್ರೀನಿವಾಸ ಭಟ್. ಕೆಂಪು ಮೂತಿ ಹುಳು ಬಾಧೆಯು ಸಣ್ಣ ತೆಂಗಿನ ಮರಗಳ ಕಾಂಡಗಳಿಗೆ ಬಾಧಿಸಿದರೆ ದೊಡ್ಡ ತೆಂಗಿನ ಮರಗಳ ತುದಿಯ ಸುಳಿಗೆ ಬಾಧಿಸಿ ಸುಳಿ ತುಂಡಾಗಿ ಬೀಳುತ್ತಿದೆ ಎಂದೂ ಅವರು ತಿಳಿಸಿದರು.

### ರೈತರಲ್ಲಿ ಜಾಗೃತಿ ಮೂಡಿಸುತ್ತಿದ್ದೇವೆ

**ಈ ಬಾರಿ ಮಳೆ ಜಾಸ್ತಿ ಸುರಿದಿರುವ ಪರಿಣಾಮವಾಗಿ ತೆಂಗಿನ ತೋಟಗಳಲ್ಲೂ ಕೊಳೆ ರೋಗ ಕಾಣಿಸಿಕೊಂಡಿದೆ. ಈ ಕುರಿತು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ರೈತರಿಗೆ ಜಾಗೃತಿ ಮೂಡಿಸಲಾಗುತ್ತಿದೆ ಎನ್ನುತ್ತಾರೆ ತೋಟಗಾರಿಕಾ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕ ಹೇಮಂತ್ ಕುಮಾರ್. ಜಿಲ್ಲೆಯಲ್ಲಿ ಶೇ 10 ರಿಂದ ಶೇ 20ರಷ್ಟು ತೆಂಗಿನ ಬೆಳೆಗೆ ಕೊಳೆ ರೋಗ ಬಾಧಿಸಿದೆ. ಕೊಳೆರೋಗ ಕಾಣಿಸಿಕೊಂಡಿರುವ ತೆಂಗಿನ ಮರಗಳ ಗೊನೆಗಳಿಗೆ ಶಿಲೀಂಧ್ರ ನಾಶಕ ದ್ರಾವಣ ಅಥವಾ ಬೋರ್ಡೊ ದ್ರಾವಣವನ್ನು ಸಿಂಪಡಿಸಬಹುದಾಗಿದೆ ಎನ್ನುತ್ತಾರೆ ಅವರು. ಕೊಳೆ ರೋಗ ತೇವಾಂಶ ಹೆಚ್ಚಾದಾಗ ಬರುವ ಕಾರಣದಿಂದಾಗಿ ತೆಂಗಿನ ಮರಗಳ ಬುಡಕ್ಕೆ ಎರೆಹುಳ ಗೊಬ್ಬರ ಮತ್ತು ಬೇವಿನ ಹಿಂಡಿ ಹಾಕಬಹುದು. 20 ವರ್ಷಕ್ಕಿಂತ ಮೇಲ್ಪಟ್ಟ ತೆಂಗಿನ ಮರಗಳಿಗೆ ಮೂರರಿಂದ ಐದು ಕೆ.ಜಿ.ಯಷ್ಟು ಬೇವಿನ ಹಿಂಡಿ ಹಾಕಬಹುದು. 20 ವರ್ಷಕ್ಕಿಂತ ಕೆಳಗಿನ ತೆಂಗಿನ ಮರಗಳಿಗೆ ಎರಡರಿಂದ ಮೂರು ಕೆ.ಜಿ.ಯಷ್ಟು ಬೇವಿನ ಹಿಂಡಿ ಹಾಕಬಹುದು. ಬೇವಿನ ಹಿಂಡಿಯು ತೇವಾಂಶ ನಿಯಂತ್ರಿಸಲು ಸಹಕಾರಿಯಾಗಿದ್ದು ಇದರಿಂದ ರೋಗವು ನಿಯಂತ್ರಣಕ್ಕೆ ಬರಬಹುದು ಎಂದು ತಿಳಿಸಿದರು.**

### ಕಾಡುತ್ತಿದೆ ಕೆಂಪು ಮೂತಿ ಹುಳ

**ಈ ಬಾರಿ ತೆಂಗಿನ ಮರಗಳಿಗೆ ಕೊಳೆ ರೋಗದ ಜೊತೆ ಕೆಂಪುಮೂತಿ ಹುಳುವಿನ ಕಾಟ ಕೂಡ ಆರಂಭವಾಗಿದ್ದು ಕೃಷಿಕರನ್ನು ಕಂಗೆಡಿಸಿದೆ. ಕೆಂಪು ಮೂತಿ ಹುಳು ಕಾಂಡಗಳನ್ನು ಕೊರೆಯುವುದರಿಂದ ತೆಂಗಿನ ಕೃಷಿಗೆ ಮಾರಕವಾಗಿದೆ. ಇದರ ಕಾಟದಿಂದ ಪಾರಾಗಲು ತೆಂಗಿನ ಮರದ ಬುಡವನ್ನು ಸ್ವಚ್ಛವಾಗಿಟ್ಟುಕೊಳ್ಳಬೇಕು ಕಾಂಡದಲ್ಲಿ ಸಣ್ಣ ರಂಧ್ರಗಳು ಕಂಡು ಬಂದರೆ ಲೀಟರ್ ನೀರಿಗೆ 10 ಎಂ.ಎಲ್. ಇಮಿಡಾಕ್ಲೋಪ್ರಿಡ್ 10 ಎಂ.ಎಲ್. ಕ್ಲೋರ್‌ಪೈರಿಪಾಸ್ ಸೇರಿಸಿ ದ್ರಾವಣ ತಯಾರಿಸಿ ಸಿರಿಂಜ್ ಮೂಲಕ ರಂಧ್ರಗಳಿಗೆ ಸಿಂಪಡಿಸಬೇಕು ಎಂದು ತೋಟಗಾರಿಕಾ ಇಲಾಖೆ ಮೂಲಗಳು ತಿಳಿಸಿವೆ.**

## ಮಿನಿ ನ್ಯೂಸ್

### ಅಕ್ರಮ ತಂಬಾಕು ಸಾಗಾಟ: ಇಬ್ಬರ ಬಂಧನ

• **ಉದಯವಾಹಿನಿ ಕಾಸರಗೋಡು**

ಕರ್ನಾಟಕದಿಂದ ಕೇರಳಕ್ಕೆ ಕಾರಿನಲ್ಲಿ ಸಾಗಾಟ ಮಾಡುತ್ತಿದ್ದ ಸುಮಾರು ಎರಡು ಲಕ್ಷ ರೂ. ಮೌಲ್ಯದ ತಂಬಾಕು ಉತ್ಪನ್ನಗಳನ್ನು ಮಂಜೇಶ್ವರ ಅಬಕಾರಿ ದಳದ ಸಿಬ್ಬಂದಿ ವಶಪಡಿಸಿಕೊಂಡಿದ್ದು, ಇಬ್ಬರನ್ನು ಬಂಧಿಸಿದ್ದಾರೆ. ವಡಗರದ ಅಫ್ಜಲ್ (32) ಮತ್ತು ಅಶ್ರಫ್ (30) ಬಂಧಿತರು. ಮಂಜೇಶ್ವರದಲ್ಲಿ ವಾಹನ ತಪಾಸಣೆ ನಡೆಸುತ್ತಿದ್ದಾಗ ಈ ದಾರಿಯಾಗಿ ಬಂದ ಕಾರನ್ನು ತಡೆದು ತಪಾಸಣೆ ನಡೆಸಿದಾಗ ಅಕ್ರಮವಾಗಿ ಸಾಗಾಟ ಮಾಡುತ್ತಿದ್ದ ಸುಮಾರು 214 ಕಿಲೋ ತಂಬಾಕು ಉತ್ಪನ್ನ ಪತ್ತೆಯಾಗಿದೆ. ಕೇರಳದ ಹಲವೆಡೆಗಳಿಗೆ ಇವರು ತಂಬಾಕು ಉತ್ಪನ್ನಗಳನ್ನು ಸಾಗಿಸಿ ಮಾರಾಟ ಮಾಡುತ್ತಿದ್ದರು ಎಂದು ತನಿಖೆಯಿಂದ ತಿಳಿದುಬಂದಿದೆ. ಕೇರಳದಲ್ಲಿ ನಿಷೇಧಗೊಂಡಿರುವ ತಂಬಾಕು ಉತ್ಪನ್ನಗಳನ್ನು ಕೇರಳಕ್ಕೆ ಅಕ್ರಮವಾಗಿ ತಂದು ಮಾರಾಟ ಮಾಡುವ ಜಾಲದವರು ಎಂದು ಪೊಲೀಸರು ತಿಳಿಸಿದ್ದಾರೆ.

# ಹಿರಿಯೂರು ತಾಲ್ಲೂಕು ಯರಬಳ್ಳಿ ಗ್ರಾಮದಲ್ಲಿ 79ನೇ ಸ್ವಾತಂತ್ರ್ಯ ದಿನಾಚರಣೆ

• **ಉದಯವಾಹಿನಿ ಚಿತ್ರದುರ್ಗ**

ಜಿಲ್ಲೆಯ ಹಿರಿಯೂರು ತಾಲ್ಲೂಕಿನ ಯರಬಳ್ಳಿ ಗ್ರಾಮದ ಸರ್ಕಾರಿ ಪಿ.ಎಂ.ಶ್ರೀ ಹಿರಿಯ ಮಾಧ್ಯಮಿಕ ಶಾಲೆಯಲ್ಲಿ ಶುಕ್ರವಾರ 79ನೇ ಸ್ವಾತಂತ್ರ್ಯ ದಿನಾಚರಣೆಯನ್ನು ವಿಜೃಂಭಣೆಯಿಂದ ಆಚರಿಸಲಾಯಿತು. ಶಾಲೆಯ ಎಸ್ ಡಿ ಎಂ ಸಿ ಅಧ್ಯಕ್ಷರಾದ ಟಿ ತಿಪ್ಪೇಸ್ವಾಮಿ ಕಾರ್ಯಕ್ರಮ ಅಧ್ಯಕ್ಷತೆ ವಹಿಸಿ ಧ್ವಜಾರೋಹಣ ನೆರವೇರಿಸಿದರು.

ಇದಕ್ಕೂ ಮೊದಲು ಬೆಳಗಿನ 6:30ರ ವೇಳೆಗೆ ಸುರಿಯುತ್ತಿದ್ದ ತುಂತುರು ಮಳೆಯನ್ನು ಲೆಕ್ಕಿಸದೆ ಶಾಲಾ ಮಕ್ಕಳು ಶಿಕ್ಷಕ ವರ್ಗ ಶಾಲೆಯ ಸುತ್ತಮುತ್ತ ಸ್ವಚ್ಛತೆಯನ್ನು ಮಾಡಿ ಶಿಸ್ತಿನಿಂದ ಯರಬಳ್ಳಿ ಗ್ರಾಮದ ಬೀದಿಗಳಲ್ಲಿ ಪ್ರಭಾತ್ ಪೇರಿ ನಡಿಸಿ ರಸ್ತೆಯ ಉದ್ದಕ್ಕೂ ದೇಶಕ್ಕೆ ಸ್ವಾತಂತ್ರ್ಯವನ್ನು ತಂದುಕೊಟ್ಟ ಮಹಾ ನಾಯಕರಿಗೆ ಭಾರತಾಂಬೆಗೆ ಜಯ ಘೋಷವನ್ನು ಕೂಗುತ್ತಾ ಗ್ರಾಮದ ಜನರಿಗೆ ಸ್ವಾತಂತ್ರ್ಯ ದಿನದ ಧ್ವಜಾರೋಹಣ ಕಾರ್ಯಕ್ರಮಕ್ಕೆ ಆಗಮಿಸುವಂತೆ ಆಹ್ವಾನ ನೀಡಿದರು. ಧ್ವಜಾರೋಹಣ ಕಾರ್ಯಕ್ರಮದ ನಂತರ ಪ್ರಾಥಮಿಕವಾಗಿ ಮಾತನಾಡಿದ ಶಾಲಾ ಮುಖ್ಯ


ಉದಯವಾಹಿನಿ ಚಿತ್ರ

**ಭಾರತಾಂಬೆಗೆ ಜಯ ಘೋಷಣೆ**

ಶಿಕ್ಷಕಿ ಸವಿತಾ ರಾಷ್ಟ್ರೀಯ ಶಿಕ್ಷಣ ನೀತಿಯ ಅನುಷ್ಠಾನದಡಿಯಲ್ಲಿ ಪಿ ಎಂ ಶ್ರೀ ಆಯ್ಕೆಮಾಡಲಾಗುವ ಶಾಲೆಗಳಲ್ಲಿ ಚಿತ್ರದುರ್ಗ ಜಿಲ್ಲೆಯಲ್ಲಿಯೇ ಉತ್ತಮ ಸರ್ಕಾರಿ ಪಿಎಂಶ್ರೀ ಶಾಲೆಯಾಗಿ ಆಯ್ಕೆಯಾಗಿರುವ ನಮ್ಮ ಯರಬಳ್ಳಿ ಗ್ರಾಮದ ಸರ್ಕಾರಿ ಶಾಲೆ ಗ್ರಾಮದ ಮುಖಂಡರು ಹಾಗೂ ಶಾಲಾ ಶಿಕ್ಷಕ ವೃಂದದವರ ಸಹಕಾರ ಕಾರಣವಾಗಿದೆ.ಯರಬಳ್ಳಿ ಸರ್ಕಾರಿ ಪಿಎಂ ಶ್ರೀ ಶಾಲೆ ದೇಶದ ಸರ್ಕಾರಿ ಶಿಕ್ಷಣ ವ್ಯವಸ್ಥೆಯಲ್ಲಿ ಒಂದು ಮಹತ್ವದ ಬದಲಾವಣೆಯನ್ನು ತರುವ ಗುರಿ ಹೊಂದಿದೆ. ಗುಣಮಟ್ಟದ ಸಮಗ್ರ ಮತ್ತು ಸಮಾನತೆಯ ಶಿಕ್ಷಣವನ್ನು ಒದಗಿಸುವಲ್ಲಿ ಶಾಲಾ ಮಕ್ಕಳ ಪೋಷಕರ ಮುಂದಾಳತ್ವ ಸಹ ಅಗತ್ಯವಾಗಿದೆ ಆಗಮಾತ್ರ ಇತರೆ ಯಾವುದೇ ಖಾಸಗಿ ಶಾಲೆಗಳಿಗಿಂತ ಉತ್ತಮ ಮಾದರಿ ಶಾಲೆಯಾಗಿ ಯರಬಳ್ಳಿ ಸರ್ಕಾರಿ ಶಾಲೆ ಹೊರಹೊಮ್ಮಲಿದೆ. ಎಂದು ಅಭಿಪ್ರಾಯ ಪಟ್ಟರು.

ಇದೇ ಸಂದರ್ಭದಲ್ಲಿ ಸ್ವಾತಂತ್ರ್ಯ ದಿನದ ಅಂಗವಾಗಿ ಏರ್ಪಡಿಸಿದ್ದ ಚಿತ್ರಕಲಾ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆ ಮಾಡಲಾಯಿತು ಸಂಜೆ ಸುಮಾರು 5:00 ಗಂಟೆ ವರೆಗೂ ನಡೆದ ಮಕ್ಕಳ ಸಾಂಸ್ಕೃತಿಕ ಕಾರ್ಯಕ್ರಮ ಗ್ರಾಮಸ್ಥರ ಮೆಚ್ಚುಗೆಗಳಿಸಿತು.

ಕಾರ್ಯಕ್ರಮದಲ್ಲಿ ಶಾಲಾ ಶಿಕ್ಷಕರಾದ ಲಿಂಗರಾಜು ಪಿ.ರಾಜಪ್ಪ ನೀಲಕಂಠ್ ಸಿಎಂ ಮಾರುತಿ ಟಿವಿ ಮಂಜುನಾಥ್ ಸಿಬಿ ಶಾರದಮ್ಮ ಎಲ್ ಸಂತೋಷ್ ಕುಮಾರ ಹಾಗೂ ಗ್ರಾಮ ಪಂಚಾಯಿತಿ ಅಧ್ಯಕ್ಷರು ಸದಸ್ಯರು ಗ್ರಾಮದ ಮುಖಂಡರು ಪಾಲ್ಗೊಂಡಿದ್ದರು.

# ಸಾರ್ವಜನಿಕರ ಕಣ್ಣಾವಲಿಗೆ ಪೊಲೀಸರ ದಿಟ್ಟ ಕ್ರಮ

• **ಉದಯವಾಹಿನಿ ಉಡುಪಿ**

ಸಾರ್ವಜನಿಕರ ಹಿತದೃಷ್ಟಿಯಿಂದ ಉಡುಪಿ ನಗರ, ಗ್ರಾಮೀಣ ಪ್ರದೇಶ ಹಾಗೂ ಗಡಿ ಭಾಗಗಳಲ್ಲಿ ಸಿ.ಸಿ.ಟಿ.ವಿ. ಕ್ಯಾಮೆರಾ ಅಳವಡಿಕೆಗೆ ಮುಂದಾಗಿರುವ ಉಡುಪಿ ಜಿಲ್ಲಾ ಪೊಲೀಸ್ ಇಲಾಖೆಯ ಕಾರ್ಯ ನಿಜಕ್ಕೂ ಶ್ಲಾಘನೀಯ ಎಂದು ಜಿಲ್ಲಾ ಉಸ್ತುವಾರಿ ಸಚಿವೆ ಲಕ್ಷ್ಮಿ ಹೆಬ್ಬಾಳಕರ ಹೇಳಿದರು.

ಉಡುಪಿಯ ಚೇಂಬರ್ ಆಫ್ ಕಾಮರ್ಸ್ ಸಹಕಾರದೊಂದಿಗೆ ಜಿಲ್ಲಾ ಪೊಲೀಸ್ ಇಲಾಖೆ ವತಿಯಿಂದ ಜಿಲ್ಲೆಯಾದ್ಯಂತ ಅಳವಡಿಸಲು ಉದ್ದೇಶಿಸಲಾಗಿರುವ ಶೈನ ದೃಷ್ಟಿ ಕೇಂದ್ರಕ್ಕೆ ನಗರದ ಸರ್ವಿಸ್ ಬಸ್ ನಿಲ್ದಾಣದಲ್ಲಿ ಚಾಲನೆ ನೀಡಿ ಮಾತನಾಡಿದ ಅವರು, ಸಿ.ಸಿ.ಟಿ.ವಿ. ಕ್ಯಾಮೆರಾ ಅಳವಡಿಕೆಯಿಂದ ಜಿಲ್ಲೆಯಲ್ಲಿ ಅಹಿತಕರ ಘಟನೆಗಳನ್ನು ತಡೆಗಟ್ಟಬಹುದು ಎಂದರು.

ಜಿಲ್ಲೆಯ 207 ಜಂಕ್ಷನ್‌ಗಳಲ್ಲಿ 621 ನೈಟ್ ವಿಷನ್ ಕ್ಯಾಮೆರಾಗಳನ್ನು ಮತ್ತು 10 ಜಿಲ್ಲಾ ಗಡಿ ರಸ್ತೆಗಳಲ್ಲಿ 20 ಸ್ವಯಂಚಾಲಿತ ನಂಬರ್ ಪ್ಲೇಟ್ ರೀಡರ್ ಕ್ಯಾಮೆರಾಗಳನ್ನು ಅಳವಡಿಸಲಾಗುತ್ತಿದೆ. ಈ ಯೋಜನೆಗೆ ಸುಮಾರು 2.50 ಕೋಟಿಯಿಂದ 3


ಉದಯವಾಹಿನಿ ಚಿತ್ರ

ಕೋಟಿ ವೆಚ್ಚವಾಗಲಿದೆ. ಅದನ್ನು ಸಂಪೂರ್ಣವಾಗಿ ಚೇಂಬರ್ ಆಫ್ ಕಾಮರ್ಸ್ ನೀಡಿದೆ ಎಂದು ತಿಳಿಸಿದರು.

ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ., ಜಿಲ್ಲಾ ಪಂಚಾಯಿತಿ ಸಿಇಒ ಪ್ರತೀಕ್ ಬಾಯಲ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹರಿರಾಮ್ ಶಂಕರ್ ಉಪಸ್ಥಿತರಿದ್ದರು. ಬಳಿಕ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ ಹಾಗೂ ಸಂಜೀವಿನಿ ಯೋಜನೆಯಡಿ, ಉಡುಪಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಸಹಯೋಗದಲ್ಲಿ ಉಡುಪಿ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ನೂತನವಾಗಿ ಆರಂಭಿಸಲಾಗಿರುವ ಅಕ್ಕ ಕೆಫೆಗೆ ಸಚಿವೆ ಚಾಲನೆ ನೀಡಿದರು.

### ಅನಿರ್ದಿಷ್ಟಾವಧಿ ಧರಣಿ

• **ಉದಯವಾಹಿನಿ ಬೀದರ**

ಆಧುನಿಕ ದುಬಾರಿ ದಿನಗಳಲ್ಲಿ ಕಡಿಮೆ ಸಂಬಳದಲ್ಲಿ ಜೀವನ ಸಾಗಿಸುವುದು ದುಸ್ತರವಾಗಿದೆ ವರ್ಷದಲ್ಲಿ ಕೇವಲ 8ತಿಂಗಳ ಮಾತ್ರ ವೇತನ ದೊರೆಯುತ್ತದೆ ಉಳಿದ ದಿನಗಳು ಸಾಗಿಸುವುದು ತೊಂದರೆಯಾಗಿದೆ ಹೀಗಾಗಿ ತಿಂಗಳ 50000/- ರೂ ಗಳಂತೆ ವರ್ಷದ ತಿಂಗಳಾದರೂ ವೇತನ ದೊರೆತರೆ ಜೀವನ ಸಾಗಿಸಬಹುದು ಬೀದರ್ ವಿಶ್ವವಿದ್ಯಾಲಯ ಸ್ನಾತಕೋತ್ತರ ಕೇಂದ್ರವಾಗಿತ್ತು ಆಗ ಒಂದು ಅವಧಿಗೆ ರೊ 1500/- ರಂತೆ ಮಾಸಿಕ 50000/- ವೇತನ ನೀಡಿದ್ದರು ಆದರೆ ಎಲ್ಲಾ ರೀತಿಯ ಅರ್ಹತೆಯಿದ್ದರು ಬೀದರ್ ವಿಶ್ವವಿದ್ಯಾಲಯವು 36000/- ಮಾತ್ರ ನೀಡುತ್ತಿದೆ ಆದ್ದರಿಂದ ಮಾತ್ರ ವಿಶ್ವವಿದ್ಯಾಲಯ ನಿಮಯದಂತೆ ತಿಂಗಳ 50000/- ರೂ ನೀಡಿ ಕನಿಷ್ಠ 11 ತಿಂಗಳು ನೀಡಬೇಕು ಆತಂಕದಲ್ಲಿರುವ ಅಥಿತಿ ಉಪನ್ಯಾಸಕರ ಜೀವನಪಯೋಕ್ಕಾಗಿ ಸೇವಾ ಭದ್ರತೆ ನೀಡಲು ಕೋರುತ್ತೇವೆ ಅದಕ್ಕಾಗಿ ಮುಂದಿನ ಶೈಕ್ಷಣಿಕ ಅವಧಿಗೆ ಅಥಿತಿ ಉಪನ್ಯಾಸಕರ ನೇಮಕದ ಸಂದರ್ಭದಲ್ಲಿ ಸಂದರ್ಶನ ನಡೆಸದೇ ಇರುವ ಉಪನ್ಯಾಸಕರನ್ನು ಮುಂದುವರೆಸಲು ಕೋರುತ್ತೇವೆ.

### ಎಂಎಲ್ಸಿ ಬಸನಗೌಡ ಬಾದರ್ಲಿ ನೇತೃತ್ವದಲ್ಲಿ ಮತಗಳ್ಳತನ ವಿರೋಧಿಸಿ ಪ್ರತಿಭಟನಾ ಜಾಥಾ.


ಉದಯವಾಹಿನಿ ಚಿತ್ರ

• **ಉದಯವಾಹಿನಿ ಸಿಂಧನೂರು**

ಎಂಎಲ್ಸಿ ಬಸನಗೌಡ ಬಾದರ್ಲಿ ನೇತೃತ್ವದಲ್ಲಿ ಮತ ಕಳ್ಳತನದ ವಿರೋಧಿಸಿ ಪ್ರತಿಭಟನಾ ಜಾಥಾ. ಬಿಜೆಪಿ ಪಕ್ಷದ ನಾಯಕರು ವಿರುದ್ಧ ಆಕ್ರೋಶವನ್ನು ವ್ಯಕ್ತಪಡಿಸಿದರು.

ನಗರದ ಕಾಂಗ್ರೆಸ್ ಜನಸ್ಪಂದನ ಕಾರ್ಯಾಲಯದಿಂದ ವಿವಿಧ ಬೀದಿಗಳಲ್ಲಿ ಮತ ಕಳ್ಳರು ವಿರುದ್ಧ ಘೋಷಣೆ ಕೂಗುತ್ತಾ ಜಾಥಾ ಹಮ್ಮಿಕೊಂಡಿದ್ದ. ಬಿಜೆಪಿ ಪಕ್ಷದ ನಾಯಕರು ಹಾಗೂ ಚುನಾವಣೆ ಆಯೋಗ ಹೊಂದಾಣಿಕೆ ಮೂಲಕ ಮತ ಕಳ್ಳತನ ಮಾಡುತ್ತದೆ ಎಂದು ಆಗ್ರಹಿಸಿ ಇವತ್ತು ಸಂವಿಧಾನ ರಕ್ಷಿಸಿ ಪ್ರಜಾಪ್ರಭುತ್ವ ಉಳಿಸಿ ಎಂಬ ಘೋಷ ವಾಕ್ಯದೊಂದಿಗೆ ಕೂಗುತ್ತಾ ಕಾಂಗ್ರೆಸ್ ಪಕ್ಷದ ಮುಖಂಡರು. ಕಾರ್ಯಕರ್ತರು ಸೇರಿ ಬಿಜೆಪಿ ವಿರುದ್ಧ ಧಿಕ್ಕಾರ ಧಿಕ್ಕಾರ ಎಂದು ಘೋಷಣೆ ಕೂಗುತ್ತ ಆಗ್ರಹಿಸಿದರು.

# ಬೆಳೆ ಹಾನಿ ಪರಿಹಾರ ನೀಡಲು ಆಗ್ರಹ


ಉದಯವಾಹಿನಿ ಚಿತ್ರ

• **ಉದಯವಾಹಿನಿ ಬೈಲಹೊಂಗಲ**

ಕಳಪೆ ಬೀಜ, ಕೀಟನಾಶಕದಿಂದ ಪ್ರಸಕ್ತ ಹಂಗಾಮಿನ ಸೋಯಾಬಿನ್, ಹೆಸರು, ಹತ್ತಿ ಮತ್ತು ಉದ್ದು ಸೇರಿದಂತೆ ವಿವಿಧ ತರಹದ ಬೆಳೆ ಹಾನಿಗೆ ಸರ್ಕಾರ ಸೂಕ್ತ ಪರಿಹಾರ ಒದಗಿಸಬೇಕೆಂದು ಒತ್ತಾಯಿಸಿ ಕರ್ನಾಟಕ ರಾಜ್ಯ ರೈತ ಸಂಘ ಪದಾಧಿಕಾರಿಗಳು ರಾಜ್ಯ ಘಟಕದ ಅಧ್ಯಕ್ಷ ಬಿ.ಎ.ಲಕ್ಷ್ಮೀನಾರಾಯಣಗೌಡ ಅವರ ಆದೇಶ ಪ್ರಕಾರ ರಾಜ್ಯ ಉಪಾಧ್ಯಕ್ಷ ಬಸವರಾಜ ಬೆಳ್ಳಿಕಟ್ಟಿ ಅವರ ನೇತೃತ್ವದಲ್ಲಿ ಉಪವಿಭಾಗಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಬೆಳಗಾವಿ ಜಿಲ್ಲೆಯ ಬೈಲಹೊಂಗಲ, ಸವದತ್ತಿ, ಚನ್ನಮ್ಮನ ಕಿತ್ತೂರು, ಗೋಕಾಕ ಹಾಗೂ ರಾಮದುರ್ಗ ತಾಲ್ಲೂಕಿನಾದ್ಯಂತ ಬೆಳೆ ಸಂಪೂರ್ಣ ಹಾಳಾಗಿವೆ. ಇದಕ್ಕೆ ಕಳಪೆ ಬೀಜ, ಕಳಪೆ ಕೀಟನಾಶಕ ಕಾರಣವಾಗಿದ್ದು ಸುಮಾರು 4 ರಿಂದ 5 ಬಾರಿ ಔಷದ ಸಿಂಪಡಣೆ ಮಾಡಿದರೂ ಪ್ರಯೋಜನವಾಗಿಲ್ಲ. ಒಂದು ಎಕರೆ ಬೆಳೆಯಲು ಸುಮಾರು 40ಸಾವಿರದಿಂದ 50ಸಾವಿರದವರೆಗೆ ಬೀಜ, ಔಷಧಕ್ಕೆ ಖರ್ಚು ಮಾಡಲಾಗಿದ್ದು ಪ್ರಯೋಜನ ಆಗಿಲ್ಲಶ್ರ. ಕೂಡಲೇ ಸರ್ಕಾರ ರೈತರ ಹಿತ ದೃಷ್ಟಿಯಿಂದ ಪರಿಹಾರ ನೀಡಬೇಕೆಂದು ಆಗ್ರಹಿಸಿದರು.

ಸಂಘಟಣೆ ಉತ್ತರ ಕರ್ನಾಟಕದ ರಾಜ್ಯ ಘಟಕದ ಅಧ್ಯಕ್ಷ ಶಿವಾನಂದ ಪಡಸಲಗಿ, ಜಿಲ್ಲಾ ಘಟಕದ ಅಧ್ಯಕ್ಷ ಈರಪ್ಪ ಹುಬ್ಬಳ್ಳಿ, ಜಿಲ್ಲಾ ಘಟಕದ ಉಪಾಧ್ಯಕ್ಷ ಸಿದ್ದರಾಯ ಕಳ್ಳಿಮನಿ, ಸವದತ್ತಿ ತಾಲ್ಲೂಕು ಗೌರವಾಧ್ಯಕ್ಷ ಕುಮಾರಸ್ವಾಮಿ ಹಿರೇಮಠ, ತಾಲ್ಲೂಕು ಘಟಕದ ಅಧ್ಯಕ್ಷ ರಮೇಶ ಸಾಳುಂಕೆ, ಯರಗಟ್ಟಿ ತಾಲ್ಲೂಕು ಘಟಕದ ಅಧ್ಯಕ್ಷ ರಾಯಪ್ಪ ಮಳಗಲಿ, ಮಹಾದೇವ ಕಲಭಾಂವಿ, ರೈತ ಧುರೀಣ ಶ್ರೀಶೈಲ ಕೋಟಗಿ, ಗಂಗಪ್ಪ ನಾಶಿಪುಡಿ, ಸುರೇಶ ತೋಟಗಿ, ಅದೃಶ್ಯ ಬೆಳ್ಳಿಕಟ್ಟಿ ಪಾಲ್ಗೊಂಡಿದ್ದರು.


ಉದಯವಾಹಿನಿ ಚಿತ್ರ

• **ಉದಯವಾಹಿನಿ ಚಿಕ್ಕಮಗಳೂರು**

ವೈದ್ಯಕೀಯ ಕಾಲೇಜು ಕಟ್ಟಡ ಕಾಮಗಾರಿ ಅಂತಿಮ ಹಂತಕ್ಕೆ ಬಂದಿದೆ. ಆದರೆ, ಸಿಬ್ಬಂದಿ ಕೊರತೆ ಕಾಲೇಜನ್ನು ಕಾಡುತ್ತಿದೆ. ಮಂಜೂರಾಗಿರುವ ಹುದ್ದೆಗಳಲ್ಲಿ ಅರ್ಧಕ್ಕೂ ಕಡಿಮೆ ಬೋಧನಾ ಸಿಬ್ಬಂದಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಚಿಕ್ಕಮಗಳೂರು ವೈದ್ಯಕೀಯ ಕಾಲೇಜಿಗೆ ರಾಜ್ಯ ಸರ್ಕಾರ 2020ರಲ್ಲಿ ಅನುಮೋದನೆ ನೀಡಿದ್ದು, ನಗರದ ಹೊರ ವಲಯದ ತೇಗೂರು ಗ್ರಾಮದ ಬಳಿ 40 ಎಕರೆ 11 ಗುಂಟೆ ವಿಸ್ತೀರ್ಣದಲ್ಲಿ ಕಟ್ಟಡ ನಿರ್ಮಾಣವಾಗುತ್ತಿದೆ. 2022-23ನೇ ಸಾಲಿನಿಂದ 150 ಸೀಟುಗಳಿಗೆ ರಾಷ್ಟ್ರೀಯ ವೈದ್ಯಕೀಯ ಆಯೋಗ ಅನುಮತಿ ನೀಡಿದ್ದು, ನಂತರ ಪ್ರತಿ ವರ್ಷ 150 ಸೀಟುಗಳಂತೆ ಮೂರನೇ ಬ್ಯಾಚ್ ಈಗ ಚಾಲ್ತಿಯಲ್ಲಿದೆ. ಶೀಘ್ರವೇ 2025-26ರ ಹೊಸ ಬ್ಯಾಚ್ ಆರಂಭವಾಗಲಿದೆ. ಸಂಸ್ಥೆಯ ಕಟ್ಟಡ ಬಹುತೇಕ ಅಂತಿಮ ಹಂತಕ್ಕೆ ಬಂದಿದ್ದು, ಶೇ 97ರಷ್ಟು ಕಾಮಗಾರಿ ಪೂರ್ಣಗೊಂಡಿದೆ.

# ವೈದ್ಯಕೀಯ ಕಾಲೇಜು: ಸಿಬ್ಬಂದಿ ಕೊರತೆ

### ಫೆಬ್ರುವರಿಯಲ್ಲಿ ಕಾಮಗಾರಿ ಪೂರ್ಣ

**ವೈದ್ಯಕೀಯ ಕಾಲೇಜು ಕಟ್ಟಡ ಕಾಮಗಾರಿ ಸೆಪ್ಟೆಂಬರ್ ಅಂತ್ಯದಲ್ಲಿ ಪೂರ್ಣಗೊಂಡರೆ ಪಕ್ಕದಲ್ಲೇ ನಿರ್ಮಾಣವಾಗುತ್ತಿರುವ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಕಟ್ಟಡ ಕಾಮಗಾರಿ 2026ರ ಫೆಬ್ರುವರಿ ಅಂತ್ಯಕ್ಕೆ ಪೂರ್ಣಗೊಳ್ಳಲಿದೆ. ಶಾಸಕ ಎಚ್.ಡಿ.ತಮ್ಮಯ್ಯ ವಿಧಾನಸಭೆಯಲ್ಲಿ ಕೇಳಿರುವ ಪ್ರಶ್ನೆಗೆ ಉತ್ತರ ನೀಡಿರುವ ಸಚಿವ ಡಾ.ಶರಣ ಪ್ರಕಾಶ ಪಾಟೀಲ 'ವೈದ್ಯಕೀಯ ಕಾಲೇಜಿಗೆ ಹೊಂದಿಕೊಂಡಂತೆ ಒಪಿಡಿ ಸೂಪರ್ ಸ್ಪೆಷಾಲಿಟಿ ಬ್ಲಾಕ್ ಎಂಸಿಎಚ್ ಬ್ಲಾಕ್ ವೈದ್ಯರ ವಸತಿಗೃಹ ಕಟ್ಟಡ ನಿರ್ಮಾಣ ಕಾಮಗಾರಿಯನ್ನು 174 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗುತ್ತಿದೆ. ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಕಟ್ಟಡ ಕಾಮಗಾರಿ ಶೇ 73ರಷ್ಟು ಪೂರ್ಣಗೊಂಡಿದೆ. 53.50 ಕೋಟಿ ಬಿಡುಗಡೆಗೆ ಬಾಕಿ ಇದೆ. ಫೆಬ್ರುವರಿ ಅಂತ್ಯದಲ್ಲಿ ಕಾಮಗಾರಿ ಪೂರ್ಣಗೊಳ್ಳಲಿದೆ’ ಎಂದು ತಿಳಿಸಿದ್ದಾರೆ. ವೈದ್ಯಕೀಯ ಕಾಲೇಜು ಕಟ್ಟಡ ಕಾಮಗಾರಿ ಶೇ 97ರಷ್ಟು ಪೂರ್ಣಗೊಂಡಿದೆ. ಸೆಪ್ಟೆಂಬರ್ ಅಂತ್ಯದೊಳಗೆ ಪೂರ್ಣಗೊಳ್ಳಲಿದೆ. 454.94 ಕೋಟಿ ಮೊತ್ತದ ಯೋಜನೆಯಲ್ಲಿ 21 ಕೋಟಿ ಬಿಡುಗಡೆಗೆ ಬಾಕಿ ಇದೆ ಎಂದು ವಿವರಿಸಿದ್ದಾರೆ.**

454.94 ಕೋಟಿ ಮೊತ್ತದ ಯೋಜನೆಯ ಕಾಮಗಾರಿ 2024ರ ಜನವರಿ ವೇಳೆಗೆ ಪೂರ್ಣಗೊಳ್ಳಬೇಕಿತ್ತು. ಆದರೆ, ಕಾಮಗಾರಿ ಇನ್ನೂ ಅಂತಿಮಗೊಂಡಿಲ್ಲ. ಸೆಪ್ಟೆಂಬರ್‌ನಲ್ಲಿ ಕಾಮಗಾರಿ ಪೂರ್ಣಗೊಳ್ಳುವ ಸಾಧ್ಯತೆ ಇದೆ.

ಇದರ ನಡುವೆ ಸಿಬ್ಬಂದಿ ಕೊರತೆ ಸಮಸ್ಯೆಯೂ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯನ್ನು ಕಾಡುತ್ತಿದೆ. 126 ಬೋಧಕ ಹುದ್ದೆಗಳನ್ನು ಸೃಜಿಸಲಾಗಿದೆ. ಸದ್ಯ 59 ಹುದ್ದೆಗಳ ಭರ್ತಿಯಾಗಿದ್ದು, 67 ಹುದ್ದೆಗಳು ಖಾಲಿ ಇವೆ. ಇನ್ನು ಬೋಧಕೇತರ 113 ಸಿಬ್ಬಂದಿ ಮಂಜೂರಾಗಿದ್ದು, 53 ಹುದ್ದೆಗಳು ಭರ್ತಿಯಾಗಿದ್ದರೆ 60 ಹುದ್ದೆಗಳು ಖಾಲಿ ಇವೆ. ಪ್ರಮುಖವಾಗಿ 19 ಪ್ರಾಧ್ಯಾಪಕರ ಹುದ್ದೆಗಳಲ್ಲಿ ಮೂವರು ಮಾತ್ರ ಕಾರ್ಯ ನಿರ್ವಹಿಸುತ್ತಿದ್ದಾರೆ. 26 ಸಹ ಪ್ರಾಧ್ಯಾಪಕರ ಪೈಕಿ 11 ಹುದ್ದೆಗಳು, 43 ಸಹಾಯಕ ಪ್ರಾಧ್ಯಾಪಕರ ಪೈಕಿ 25 ಹುದ್ದೆಗಳು ಭರ್ತಿಯಾಗಿವೆ.

### ಅನರ್ಹರ ವಿರುದ್ಧ ಕ್ರಮಕ್ಕೆ ಆಗ್ರಹ: ಡಿಸಿಗೆ ಮನವಿ ಸಲ್ಲಿಸಿದ ತಜ್ಞ ವೈದ್ಯರ ನಿಯೋಗ

• **ಉದಯವಾಹಿನಿ ದಾವಣಗೆರೆ**

ವೈದ್ಯಕೀಯ ಅರ್ಹತೆ ಹೊಂದಿಲ್ಲದವರು ಚರ್ಮ ಹಾಗೂ ಕೂದಲು ಚಿಕಿತ್ಸಾ ತಜ್ಞರ ಹೆಸರಿನಲ್ಲಿ ಮೋಸ ಮಾಡುತ್ತಿದ್ದಾರೆ. ಸಾರ್ವಜನಿಕರ ಆರೋಗ್ಯಕ್ಕೆ ಅಪಾಯ ಉಂಟು ಮಾಡುವ ನಕಲಿ ತಜ್ಞರ ವಿರುದ್ಧ ಕ್ರಮ ಕೈಗೊಳ್ಳುವಂತೆ ಚರ್ಮ ವೈದ್ಯರು ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದರು. ವೈದ್ಯಕೀಯ ಅರ್ಹತೆ ಇಲ್ಲದವರು ಚರ್ಮ, ಕೂದಲು ಹಾಗೂ ಸೌಂದರ್ಯ ಚಿಕಿತ್ಸೆ ನೀಡುತ್ತಿದ್ದಾರೆ. ಬ್ಯೂಟಿಷಿಯನ್‌ಗಳು ಕೂಡ ಜನರಿಗೆ ತಪ್ಪು ಮಾಹಿತಿ ನೀಡಿ ದಿಕ್ಕು ತಪ್ಪಿಸುವ ಪ್ರಯತ್ನದಲ್ಲಿದ್ದಾರೆ. ಸಾರ್ವಜನಿಕರಿಗೆ ಮೋಸ ಮಾಡಿ ಅನ್ಯಾಯ ಎಸಗುತ್ತಿದ್ದಾರೆ ಎಂದು ಗಮನ ಸೆಳೆದರು. ಚರ್ಮ ಮತ್ತು ಕೂದಲು ಕ್ಲಿನಿಕ್‌ಗಳು ಎಲ್ಲೆಡೆ ತಲೆ ಎತ್ತಿವೆ. ಲೇಸರ್, ಮೈಕ್ರೋನೀಡ್ಲಿಂಗ್ ಯಂತ್ರಗಳಂತಹ ವೈದ್ಯಕೀಯ ಸಾಧನಗಳನ್ನು ಬಳಸಲಾಗುತ್ತಿದೆ. ಇವುಗಳಿಗೆ ಕಾನೂನಿನ ಪ್ರಕಾರ ಮಾನ್ಯತೆ ನೀಡಬಾರದು. ನಕಲಿ ತಜ್ಞರು ಮಾಡಿದ ಚಿಕಿತ್ಸೆಗಳಿಂದ ಮುಖ-ಕೂದಲು-ಚರ್ಮಗಳಿಗೆ ಹಾನಿ ಮಾಡಿಕೊಂಡ ಜನರ ಸಂಖ್ಯೆ ಹೆಚ್ಚಾಗುತ್ತಿದೆ. ಈ ಕುರಿತು ಗಮನ ಹರಿಸಬೇಕು ಎಂದು ಮನವಿ ಮಾಡಿದರು.

# ಕಾಮಗಾರಿ ಮುಗಿದರೂ ಮುಕ್ತವಾಗದ ಸೇತುವೆ


• **ಉದಯವಾಹಿನಿ ಆಲೂರು**

ತಾಲ್ಲೂಕಿನ ಕರಿಗೌಡನಹಳ್ಳಿ ಗ್ರಾಮದ ಸಮೀಪ ಹೇಮಾವತಿ ನದಿಗೆ ಅಡ್ಡಲಾಗಿ ಕೆಆರ್‌ಡಿಸಿಎಲ್‌ನಿಂದ ನಿರ್ಮಿಸಿದ ಹೊಸ ಸೇತುವೆ ಕಾಮಗಾರಿ ಮುಗಿದು ಎರಡು ವರ್ಷಗಳಾದರೂ ಸಂಚಾರಕ್ಕೆ ಅನುಕೂಲವಾಗದೇ ನನೆಗುದ್ದಿಗೆ ಬಿದ್ದಿದೆ.

ತಾಲ್ಲೂಕಿನ ಕರಿಗೌಡನಹಳ್ಳಿ, ಚಾಕನಹಳ್ಳಿ, ಹಸಗನೂರು, ಹಾಸನ ತಾಲ್ಲೂಕಿನ ಬಳ್ಳೆಕೆರೆ, ಮಲ್ಲಿಗೆವಾಳು, ದುಂಡನಾಯಕನಹಳ್ಳಿ ಗ್ರಾಮಸ್ಥರ ಜಮೀನು ಸೇತುವೆ ಇಕ್ಕೆಲಗಳಲ್ಲಿದ್ದರೂ, ಮಳೆಗಾಲದಲ್ಲಿ ಹೇಮಾವತಿ ಜಲಾಶಯ ತುಂಬಿದ ಸಂದರ್ಭದಲ್ಲಿ ತೆಪ್ಪ ಬಳಸಿ, ಜೀವ ಕೈಯಲ್ಲಿ ಹಿಡಿದು ಓಡಾಡಬೇಕಾದ ಅನಿವಾರ್ಯತೆ ಎದುರಾಗಿದೆ. ಆಲೂರು, ಹಾಸನ ಮತ್ತು ಅರಕಲಗೂಡು ತಾಲ್ಲೂಕುಗಳ ಸಂಬಂಧ ಬೆಸೆಯುವ ಮತ್ತು ಮಡಿಕೇರಿ ಜಿಲ್ಲೆಗೆ ಸಂಪರ್ಕ ಕಲ್ಪಿಸುವ ಸೇತುವೆ ಇದಾಗಿದೆ.

> ಶಾಸಕ ಸಿಮೆಂಟ್ ಮಂಜು ಜಮೀನು ಮಾಲೀಕರ ಮನವೊಲಿಸಿ ಅಡಚಣೆ ನಿವಾರಿಸಿದ್ದು ಸೇತುವೆ ಇಕ್ಕೆಲಗಳಲ್ಲಿ ರಸ್ತೆ ನಿರ್ಮಾಣ ಕಾಮಗಾರಿ ಆರಂಭವಾಗಿದೆ
> -ವೆಂಕಟಲಕ್ಷ್ಮಿ ,ಕೆಆರ್‌ಡಿಸಿಎಲ್ ಸಹಾಯಕ ಕಾರ್ಯಪಾಲಕ ಎಂಜಿನಿಯರ್

ವಾಹನಗಳಲ್ಲಿ ತೆರಳಬೇಕಾದರೆ ಸುಮಾರು 40 ಕಿ.ಮೀ. ಗಳಿಗೂ ಅಧಿಕ ದೂರ ಕ್ರಮಿಸಿ ಜಮೀನಿಗೆ ತಲುಪಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಆಲೂರು ತಾಲ್ಲೂಕು ಭಾಗದ ಜನರು ಗೊರೂರು, ಅರಕಲಗೂಡು, ಹೊಳೆನರಸೀಪುರ, ಮಡಿಕೇರಿ ಜಿಲ್ಲೆ ಸೇರಿದಂತೆ ಈ ಭಾಗಗಳಿಗೆ ತೆರಳಲು ಸುಮಾರು 50-60 ಕಿ.ಮೀ.


ಉದಯವಾಹಿನಿ ಚಿತ್ರ

ಕ್ರಮಿಸಬೇಕಾಗಿದೆ. ಇಲ್ಲಿ ಸೇತುವ ನಿರ್ಮಾಣ ಮಾಡಬೇಕೆಂದು ನಾಲ್ಕು ಐದು ದಶಕಗಳಿಂದ ಹೋರಾಟ ನಡೆಯುತ್ತಲೇ ಇತ್ತು.

> ಸೇತುವೆ ಇಕ್ಕೆಲಗಳಲ್ಲಿರುವ ಜಮೀನಿಗೆ ತೆರಳಲು 40 ಕಿ.ಮೀ. ದೂರ ಕ್ರಮಿಸಬೇಕಾಗಿದೆ. ರಸ್ತೆ ನಿರ್ಮಾಣ ಪ್ರಾರಂಭವಾಗಿದ್ದು ಶೀಘ್ರ ಸಂಚಾರಕ್ಕೆ ಅನುಕೂಲ ಮಾಡಬೇಕು -ಕೃಷ್ಣಗೌಡ, ಕರಿಗೌಡನಹಳ್ಳಿ

ಎಚ್.ಕೆ. ಕುಮಾರಸ್ವಾಮಿ ಶಾಸಕರಾಗಿದ್ದ ಸಂದರ್ಭದಲ್ಲಿ ಸುಮಾರು 16 ಕೋಟಿ ವೆಚ್ಚದಲ್ಲಿ ಕೆ.ಆರ್.ಡಿ.ಸಿ.ಎಲ್. ನಿಂದ ಕಾಮಗಾರಿ ನಿರ್ವಹಿಸಿ ಸೇತುವ ಕಾಮಗಾರಿ ಪೂರ್ಣಗೊಳಿಸಲಾಗಿದೆ.

ಕೆಲ ಅಡೆತಡೆಗಳನ್ನು ಮುಗಿಸಿ ಲೋಕಾರ್ಪಣೆ ಮಾಡಬೇಕು ಎನ್ನುವಷ್ಟರಲ್ಲಿ ರಸ್ತೆಗೆ ಅಗತ್ಯವಿರುವ ಜಾಗದ ಬಗ್ಗೆ ಕೆಲವು ತೊಡಕುಗಳು ಎದುರಾದವು. ತೊಡಕು ಸರಿಪಡಿಸುವಷ್ಟರಲ್ಲಿ ವಿಧಾನಸಭೆ ಚುನಾವಣೆ ಪ್ರಕ್ರಿಯೆ ಪ್ರಾರಂಭವಾಗಿದ್ದರಿಂದ ಮುಂದಿನ ಕಾಮಗಾರಿ ನನೆಗುದಿಗೆ ಬಿದ್ದಿದೆ.

ಈ ಯೋಜನೆಗೆ ಬೇಕಾದ ಅನುದಾನವನ್ನು ಸರಿಯಾದ ಕ್ರಮದಲ್ಲಿ ಎಲ್ಲೂ ವ್ಯರ್ಥವಾಗದಂತೆ ಜಿ.ಪಂ ನಿಗಾವಹಿಸಿ ಬಳಸುತ್ತಿದೆ

# ನರೇಗಾ: ಗ್ರಾಮೀಣರ ಬದುಕು ಸರಾಗ: ಮಹಿಳಾ ಫಲಾನುಭವಿಗಳೇ ಹೆಚ್ಚು

• **ಉದಯವಾಹಿನಿ ಶಿವಮೊಗ್ಗ**

ಜಿಲ್ಲೆಯ ಗ್ರಾಮೀಣ ಭಾಗದ ಮಹಿಳೆಯರಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಹೆಚ್ಚಿನ ಚೈತನ್ಯ ತುಂಬಿದೆ. ಅವರಿಗೆ ಸ್ವಾವಲಂಬಿ ಬದುಕು ಕಟ್ಟಿಕೊಟ್ಟಿದೆ. ವಿಶೇಷವೆಂದರೆ ಯೋಜನೆಯಡಿ ಪುರುಷರಿಗಿಂತ ಹೆಚ್ಚು ಮಹಿಳೆಯರೇ ಕೆಲಸದಲ್ಲಿ ತೊಡಗಿಕೊಂಡಿದ್ದಾರೆ. ಶಿವಮೊಗ್ಗ ಜಿಲ್ಲೆಯ ಏಳು ತಾಲ್ಲೂಕುಗಳಲ್ಲಿ ಒಟ್ಟು 262 ಗ್ರಾಮಗಳು ಇದ್ದು, 2.42 ಲಕ್ಷ ಜನರು ಎನ್‌ಆರ್‌ಇಜಿಎ ಅಡಿ ಉದ್ಯೋಗ ಕಾರ್ಡ್ ಹೊಂದಿದ್ದಾರೆ. ಅದರಲ್ಲಿ 1.47 ಲಕ್ಷ ಜನರ ಜಾಬ್ ಕಾರ್ಡ್ ಚಾಲ್ತಿಯಲ್ಲಿವೆ. ಇದರಲ್ಲಿ ಪರಿಶಿಷ್ಟ ಜಾತಿಯವರು ಶೇ 2.82 ಹಾಗೂ ಪರಿಶಿಷ್ಟ ಪಂಗಡದವರು ಶೇ 5ರಷ್ಟು ಇದ್ದಾರೆ. ಮಹಿಳೆಯರ ಪ್ರಮಾಣ ಶೇ 54.950.

**ನರೇಗಾ ಫಲಾನುಭವಿ, ಮಹಿಳೆಯರೇ ಮೇಲುಗೈ:** ಜಿಲ್ಲೆಯಲ್ಲಿ ನರೇಗಾ ಅಡಿ ಕೆಲಸದ ಲಾಭವನ್ನು ಮಹಿಳೆಯರೇ ಹೆಚ್ಚಾಗಿ ಪಡೆಯುತ್ತಿದ್ದಾರೆ. 2019ರಲ್ಲಿ ಇದ್ದ ನರೇಗಾ ಫಲಾನುಭವಿಗಳ ಸಂಖ್ಯೆಯಲ್ಲಿ ಶೇ 50.86ರಷ್ಟು ಮಹಿಳೆಯರು ಇದ್ದರೆ, 2020ರಲ್ಲಿ


ಉದಯವಾಹಿನಿ ಚಿತ್ರ

**ಸ್ವಾವಲಂಬಿ ಬದುಕು ಕಟ್ಟಿಕೊಟ್ಟಿದೆ**

ಆ ಪ್ರಮಾಣ ಶೇ 49.65, 202100 5 49.39, 202200 8 51.29, 202300 8 53.84, 202400 8 540. 2 ಯೋಜನೆಯಲ್ಲಿ ಮಹಿಳೆಯರ ಭಾಗಿತ್ವದಲ್ಲಿ ಆಗಿರುವ ಏರಿಳಿತದ ಪ್ರಮಾಣವನ್ನು ಬಿಂಬಿಸುತ್ತದೆ.

ಜಿಲ್ಲೆಯಲ್ಲಿ ನರೇಗಾ ಯೋಜನೆ ಯಶಸ್ವಿಯಾಗಿ ಸಾಗುತ್ತಿದೆ. ಪ್ರತಿ ವರ್ಷವೂ ಈ ಯೋಜನೆಗೆ ಬೇಕಾದ ಅನುದಾನವನ್ನು ಸರಿಯಾದ ಕ್ರಮದಲ್ಲಿ ಎಲ್ಲೂ ವ್ಯರ್ಥವಾಗದಂತೆ ಜಿಲ್ಲಾ ಪಂಚಾಯತ್ ನಿಗಾವಹಿಸಿ ಬಳಸುತ್ತಿದೆ. ಅದರಂತೆ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಿಗೆ ಎಷ್ಟು ಅನುದಾನ ಬೇಕೋ ಅಷ್ಟು ಮಾತ್ರ ಪಡೆಯುತ್ತಿದ್ದು, ಇದು ವ್ಯರ್ಥವಾಗದಂತೆ ಕಾಪಾಡಿ ಕೊಂಡು ಬರುತ್ತಿದೆ.

**ಕೆರೆ ಹೂಳೆತ್ತಲು ನರೇಗಾ’ ಆಸರೆ:** ಸಾಗರ ತಾಲ್ಲೂಕಿನ ಕೆಳದಿಯಲ್ಲಿ ಶಿವಪ್ಪನಾಯಕರ ಕಾಲದಲ್ಲಿ ನಿರ್ಮಿಸಿರುವ 150 ಎಕರೆ ವಿಸ್ತೀರ್ಣದ ಹಿರೇಕೆರೆಯ ಹೂಳೆತ್ತುವ ಕಾಮಗಾರಿ ನರೇಗಾ ಯೋಜನೆಯಡಿ ಕೈಗೊಂಡಿದ್ದು, ಮಳೆಗಾಲದಲ್ಲಿ ಕೆರೆ ತುಂಬಿ ಸುತ್ತಲಿನ 200 ಎಕರೆಗೂ ಹೆಚ್ಚಿನ ಜಮೀನುಗಳಲ್ಲಿ ಭತ್ತ ಹಾಗೂ ಅಡಿಕೆ ಬೆಳೆಗೆ ಬೇಸಿಗೆಯಲ್ಲಿ ನೀರಿನ ಆಸರೆ ಒದಗಿಸಿದೆ. ಕೊಳವೆ ಬಾವಿಗಳಲ್ಲೂ ಸಮೃದ್ಧ ನೀರು ಬರುತ್ತಿದೆ.

ಕೆಳದಿಯಲ್ಲಿ ಕೆರೆ ಹೂಳೆತ್ತುವ ಜೊತೆಗೆ 3 ಲಕ್ಷ ಮೊತ್ತದಲ್ಲಿ ಕಾಲುವೆ ಹೂಳೆತ್ತುವ ಕಾಮಗಾರಿ ಕೈಗೊಂಡಿದ್ದು, 250 ಮಾನವ ದಿನಗಳನ್ನು ಸೃಜಿಸಿ, ಒಟ್ಟು 2.75 ಲಕ್ಷ ವೆಚ್ಚ ಮಾಡಲಾಗಿದೆ.

### ದಿನವೊಂದಕ್ಕೆ 370 ಕೂಲಿ

**ನರೇಗಾ ಅಡಿ ಜಿಲ್ಲೆಯಲ್ಲಿ ಕೆರೆ ಹೂಳೆತ್ತುವ ಕಾಲುವೆ ನಿರ್ಮಾಣ ಸೇರಿದಂತೆ ಗ್ರಾಮೀಣ ಭಾಗದ ಜನ ಜೀವನ ಸುಗಮಗೊಳಿಸುವ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ. ಪ್ರವಾಹ ಬರದಂತಹ ಪ್ರಾಕೃತಿಕ ವಿಕೋಪ ಸಂಭವಿಸಿದ ಪ್ರದೇಶಗಳಲ್ಲಿ 150 ದಿನ ಕೆಲಸ ಕೊಡಲಾಗುತ್ತಿದೆ. ಪ್ರಸ್ತುತ ಪ್ರತಿ ಕಾರ್ಮಿಕರಿಗೆ ದಿನವೊಂದಕ್ಕೆ 370 ಕೂಲಿ ಪಾವತಿ ಮಾಡಲಾಗುತ್ತಿದೆ’ ಎಂದು ಶಿವಮೊಗ್ಗ ಜಿಲ್ಲಾ ಪಂಚಾಯಿತಿ ಸಿಇಒ ಎನ್. ಹೇಮಂತ್ ಹೇಳುತ್ತಾರೆ.**

### ಭದ್ರಾವತಿ ಮೊದಲ ಸ್ಥಾನ

**ನರೇಗಾ ಅನುಷ್ಠಾನದಲ್ಲಿ ಜಿಲ್ಲೆಯ ವ್ಯಾಪ್ತಿಯಲ್ಲಿ ಭದ್ರಾವತಿ ತಾಲ್ಲೂಕು ಮೊದಲ ಸ್ಥಾನದಲ್ಲಿದ್ದರೆ ತೀರ್ಥಹಳ್ಳಿ ಕೊನೆಯ ಸ್ಥಾನದಲ್ಲಿದೆ. ಭದ್ರಾವತಿಯಲ್ಲಿ ಶೇ 85.38ರಷ್ಟು ಭೌತಿಕ ಹಾಗೂ ಶೇ 64.86ರಷ್ಟು ಆರ್ಥಿಕ ಗುರಿ ಸಾಧಿಸಲಾಗಿದೆ. ಹೊಸನಗರ ಶೇ 59ರಷ್ಟು ಭೌತಿಕ ಶೇ 50.89ರಷ್ಟು ಆರ್ಥಿಕ ಸಾಗರ ಶೇ 86.84ರಷ್ಟು ಭೌತಿಕ ಹಾಗೂ ಶೇ 71.27 ಆರ್ಥಿಕ ಶಿಕಾರಿಪುರ ಶೇ 73.69ರಷ್ಟು ಭೌತಿಕ ಶೇ 59.52ರಷ್ಟು ಆರ್ಥಿಕ ಶಿವಮೊಗ್ಗ ಶೇ 91.45ರಷ್ಟು ಭೌತಿಕ ಹಾಗೂ ಶೇ 61.53ರಷ್ಟು ಆರ್ಥಿಕ ಸೊರಬ ಶೇ 74.92 ಭೌತಿಕ ಶೇ 50.43ರಷ್ಟು ಆರ್ಥಿಕ ತೀರ್ಥಹಳ್ಳಿ ಶೇ 61.50ರಷ್ಟು ಭೌತಿಕ ಶೇ 42.02ರಷ್ಟು ಆರ್ಥಿಕ ಗುರಿ ಸಾಧಿಸಲಾಗಿದೆ.**

### ವಿದ್ಯಾರ್ಥಿವೇತನ: ಅರ್ಜಿ ಆಹ್ವಾನ

• **ಉದಯವಾಹಿನಿ ಗದಗ**

ಅಂಚೆ ಇಲಾಖೆಯಿಂದ 6ರಿಂದ 9ನೇ ತರಗತಿ ವಿದ್ಯಾರ್ಥಿಗಳಿಗೆ ಅಂಚೆ ಚೀಟಿಗಳ ಸಂಗ್ರಹ ಉತ್ತೇಜಿಸಲು ದೀನ್ ದಯಾಳ್ ಸ್ಪರ್ಶ ಯೋಜನೆಯಡಿ ವಿದ್ಯಾರ್ಥಿವೇತನದ ಅರ್ಜಿ ಆಹ್ವಾನಿಸಲಾಗಿದೆ.

ಈ ಯೋಜನೆಯು ಮಕ್ಕಳಿಗೆ ಅಂಚೆಚೀಟಿಗಳ ಮಹತ್ವ ಮತ್ತು ಸಂಗ್ರಹದ ಹವ್ಯಾಸ ಬೆಳೆಸುವ ಗುರಿಯನ್ನು ಹೊಂದಿದೆ.


ಮಕ್ಕಳು 2024-25ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಶೇ 60 ಅಂಕವನ್ನು ಗಳಿಸಿರಬೇಕು. ಕಡ್ಡಾಯವಾಗಿ ಮಕ್ಕಳು ಅಂಚೆಚೀಟಿ ಠೇವಣಿ ಖಾತೆ ಅಥವಾ ಅಂಚೆಚೀಟಿ ಕ್ಲಬ್‌ನ ಸದಸ್ಯರಾಗಿರಬೇಕು. ಅಂಚೆಚೀಟಿ ಬಹು ಆಯ್ಕೆ ಲಿಖಿತ ಪರೀಕ್ಷೆ ಮತ್ತು ಅಂಚೆಚೀಟಿ ಸಂಗ್ರಹ ಪ್ರಾಜೆಕ್ಟ್‌ನ ಆಧಾರದ ಮೇಲೆ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗುವುದು.

ಆಯ್ಕೆಯಾದ ವಿದ್ಯಾರ್ಥಿಗಳಿಗೆ 6 ಸಾವಿರ ವಿದ್ಯಾರ್ಥಿವೇತನ ನೀಡಲಾಗುವುದು. ಅರ್ಜಿ ಸಲ್ಲಿಸಲು ಸೆಪ್ಟೆಂಬರ್ 4 ಕೊನೆಯ ದಿನವಾಗಿದೆ. ಗದಗ ಶೈಕ್ಷಣಿಕ ಜಿಲ್ಲೆಯ ಆಸಕ್ತ ವಿದ್ಯಾರ್ಥಿಗಳು ಮತ್ತು ಶಾಲೆಗಳು 98861 17229 ಮೊಬೈಲ್ ನಂಬರ್ ಸಂಪರ್ಕಿಸಬಹುದು ಎಂದು ಗದಗ ವಿಭಾಗದ ಅಂಚೆ ಅಧೀಕ್ಷಕ ರಮೇಶ ಮಡಿವಾಳರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸ್ಥಿರವಾಗಿ ಕಲೆಕ್ಷನ್ ಮಾಡಿದ ಸು ಫ್ರಮ್ ಸೋ

**ಕೂಲಿ, ವಾರ್ 2 ಚಿತ್ರದ ಅಬ್ಬರ**

'ಸು ಫ್ರಮ್ ಸೋ' ಚಿತ್ರವು ವಾರ್ 2 ಮತ್ತು ಕೂಲಿ ಚಿತ್ರಗಳ ಬಿಡುಗಡೆಯ ನಡುವೆಯೂ ಅದ್ಭುತ ಗಳಿಕೆಯನ್ನು ಮಾಡುತ್ತಿದೆ. ಬೆಂಗಳೂರಿನಲ್ಲಿ ಹೌಸ್‌ಫುಲ್ ಶೋಗಳಿವೆ ಮತ್ತು ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಗಳಿಕೆ ನಿರೀಕ್ಷಿಸಲಾಗಿದೆ. ಈ ಚಿತ್ರ ಶೀಘ್ರದಲ್ಲೇ 100 ಕೋಟಿ ಕ್ಲಬ್ ಸೇರಲಿದೆ ಎಂದು ನಿರೀಕ್ಷಿಸಲಾಗಿದೆ. 'ವಾರ್ 2' ಹಾಗೂ 'ಕೂಲಿ' ಅಂಥ ದೊಡ್ಡ ಚಿತ್ರಗಳು ರಿಲೀಸ್ ಆಗುತ್ತವೆ ಎಂದರೆ ಸಾಮಾನ್ಯವಾಗಿ ಸಣ್ಣಪುಟ್ಟ ಚಿತ್ರಗಳು ಹೇಳ ಹೆಸರಿಲ್ಲದೆ ಕಳೆದು ಹೋಗುತ್ತವೆ. ಉತ್ತಮ ಪ್ರದರ್ಶನ ಕಾಣುತ್ತಿರುವ ಸಿನಿಮಾಗಳು ಕೂಡ ಡಲ್ ಆಗುತ್ತವೆ. ಆದರೆ, 'ಸು ಫ್ರಮ್ ಸೋ' ಸಿನಿಮಾ ಮಾತ್ರಕ್ಕೆ ಇದಕ್ಕೆ ಅಪವಾದ. ಈ ಎರಡೂ ಮಲ್ಟಿಸ್ಟಾರರ್ ಸಿನಿಮಾ ಅಬ್ಬರದ ಮಧ್ಯೆಯೂ ಸ್ಥಿರವಾದ ಕಲೆಕ್ಷನ್ ಮಾಡಿದೆ. ಮುಂದಿನ ಮೂರು ದಿನ ಸಿನಿಮಾ ಒಳ್ಳೆಯ ಗಳಿಕೆ ಮಾಡುವ ನಿರೀಕ್ಷೆ ಇದೆ. 'ಸು ಫ್ರಮ್ ಸೋ' ರಿಲೀಸ್ ಆದ ದಿನದಿಂದಲೂ ಅಬ್ಬರಿಸುತ್ತಿದೆ. ಈ ಚಿತ್ರದ ಎದುರು ಅನೇಕ ದೊಡ್ಡ ಸಿನಿಮಾಗಳು ಡಲ್ ಆಗಿವೆ. ಈಗ ಸ್ಟಾರ್ ಹೀರೋಗಳ ಅಬ್ಬರದ ಮಧ್ಯೆಯೂ ಸಿನಿಮಾ ಸ್ಥಿರವಾದ ಪ್ರದರ್ಶನ ನೀಡುತ್ತಿದೆ.



ಇದು ಅಭಿಮಾನಿಗಳ ಖುಷಿಗೆ ಕಾರಣ ಆಗಿದೆ. ಇನ್ನೂ ಕೆಲವು ದಿನಗಳ ಕಾಲ ಸಿನಿಮಾದ ಅಬ್ಬರ ಮುಂದುವರಿಯಲಿದೆ. 21ನೇ ದಿನವಾದ ಆಗಸ್ಟ್ 14ರಂದು 'ಸು ಫ್ರಮ್‌ಸೋ' ಸಿನಿಮಾ 1.07 ಕೋಟಿ ರೂಪಾಯಿ ಕಲೆಕ್ಷನ್ ಮಾಡುತ್ತಿದೆ. ದೊಡ್ಡ ಸಿನಿಮಾಗಳ ಅಬ್ಬರದ ಮಧ್ಯೆಯೂ ಚಿತ್ರದ ಗಳಿಕೆ ಕಡಿಮೆ ಆಗಿಲ್ಲ.

ಇಂದು ಬೆಂಗಳೂರಿನಲ್ಲಿ ಬಹುತೇಕ ಶೋಗಳು ಹೌಸ್‌ಫುಲ್ ಆಗಿವೆ. ಶನಿವಾರ ಹಾಗೂ ಭಾನುವಾರ ಕೂಡ ಸಿನಿಮಾಗೆ ಒಳ್ಳೆಯ ಕಲೆಕ್ಷನ್ ಆಗುವ ನಿರೀಕ್ಷೆ ಇದೆ. ಸದ್ಯ ಸಿನಿಮಾಗೆ 90 ಕೋಟಿ ರೂಪಾಯಿ ಕಲೆಕ್ಷನ್ ಆಗಿದೆ.



## ಜೈಲಲ್ಲಿ ಸ್ವಾತಂತ್ರ್ಯೋತ್ಸವದಲ್ಲಿ ಭಾಗಿಯಾಗದ ದರ್ಶನ್, ಪ್ರಜ್ವಲ್

**ದರ್ಶನ್ ಮತ್ತೆ ಜೈಲು**





ಪರಪ್ಪನ ಅಗ್ರಹಾರ ಜೈಲಿನಲ್ಲಿ 79ನೇ ಸ್ವಾತಂತ್ರ್ಯೋತ್ಸವ ಆಚರಿಸಲಾಗಿದ್ದು, ನಟ ದರ್ಶನ್ ಮತ್ತು ಪ್ರಜ್ವಲ್ ರೇವಣ್ಣ ಗೈರಾಗಿದ್ದಾರೆ. ಪ್ರತಿ ವರ್ಷ ಜೈಲಿನಲ್ಲಿ ಸ್ವಾತಂತ್ರ್ಯ ದಿನಾಚರಣೆ ಮಾಡಲಾಗುತ್ತದೆ.ವಿಚಾರಣಾಧೀನ ಆರೋಪಿಗಳು, ಸಜಾ ಬಂಧಿಗಳು ಎಲ್ಲರೂ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಾರೆ. ಅಂತೆಯೇ ಈ ಬಾರಿಗೂ ಸಮಾರಂಭ ಮಾಡಲಾಯಿತು. ಆದರೆ, ದರ್ಶನ್ ಮತ್ತು ಪ್ರಜ್ವಲ್ ರೇವಣ್ಣ ಭಾಗಿಯಾಗಿಲ್ಲ.

ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ದರ್ಶನ್ ಮತ್ತೆ ಜೈಲು ಪಾಲಾಗಿದ್ದಾರೆ. ಪವಿತ್ರಾ ಗೌಡ ಕೂಡ ಜೈಲು ಸೇರಿದ್ದಾರೆ. ಇಬ್ಬರನ್ನೂ ಪರಪ್ಪನ ಅಗ್ರಹಾರ ಜೈಲಿಗೆ ಕಳುಹಿಸಲಾಗಿದೆ. ನಟ ದರ್ಶನ್ ಮಾನಸಿಕವಾಗಿ ಕುಗ್ಗಿ ಹೋಗಿದ್ದಾರೆ. ಹೀಗಾಗಿ, ಸ್ವಾತಂತ್ರ್ಯೋತ್ಸವಕ್ಕೆ ಗೈರಾಗಿದ್ದಾರೆ.

ಮನೆ ಕೆಲಸದಾಕೆ ಮೇಲೆ ಅತ್ಯಾಚಾರ ಆರೋಪ ಪ್ರಕರಣದಲ್ಲಿ ಪ್ರಜ್ವಲ್ ರೇವಣ್ಣ ಕೂಡ ಜೈಲಲ್ಲಿದ್ದಾರೆ. ಅವರು ಕೂಡ ಕಾರ್ಯಕ್ರಮದಲ್ಲಿ ಭಾಗವಹಿಸಿಲ್ಲ.

## 1 ಕೋಟಿ ರೂ.ಕೊಟ್ಟ ಚಿರಂಜೀವಿ

ಚಿರಂಜೀವಿ ಅವರ ವಿಶಾಲ ಮನಸ್ಸಿನ ಬಗ್ಗೆ ತಮಿಳು ಸ್ಟಂಟ್ ಮಾಸ್ಟರ್ ಪೊನ್ನಂಬಲಂ ಅವರು ಮಾತನಾಡಿದ್ದಾರೆ. ಕಿಡ್ನಿ ಸಮಸ್ಯೆಯಿಂದ ಬಳಲುತ್ತಿದ್ದ ಅವರಿಗೆ ಚಿರಂಜೀವಿ 1 ಕೋಟಿ ರೂಪಾಯಿಗಳ ಸಹಾಯ ಮಾಡಿದ್ದಾರೆ. ಇದು ಪೊನ್ನಂಬಲಂ ಅವರ ಜೀವನದಲ್ಲಿ ಒಂದು ದೊಡ್ಡ ಬದಲಾವಣೆ ತಂದಿದೆ. ಚಿರಂಜೀವಿ ಅವರು ಚಲನಚಿತ್ರೋದ್ಯಮದವರಿಗೆ ಮತ್ತು ಸಾಮಾನ್ಯ ಜನರಿಗೆ ಸಹಾಯ ಮಾಡುವುದರಲ್ಲಿ ಯಾವಾಗಲೂ ಮುಂಚೂಣಿಯಲ್ಲಿದ್ದಾರೆ. ಚಿರಂಜೀವಿ ಅವರು ಯಾವಾಗಲೂ ಸಾಮಾಜಿಕ ಕೆಲಸಗಳ ಮೂಲಕ ಸುದ್ದಿ ಆಗುತ್ತಾ ಇರುತ್ತಾರೆ. ಅವರು ಈ ಮೂಲಕ ಅನೇಕರಿಗೆ ಮಾದರಿ ಆಗಿದ್ದಾರೆ ಎನ್ನಬಹುದು. ಅವರು ಮಾಡುವ ಅನೇಕ ಒಳ್ಳೆಯ ಕೆಲಸಗಳು ಹೊರಗೆ ಬರೋದೆ ಇಲ್ಲ. ಈಗ ತಮಿಳಿನ ಸ್ಟಂಟ್ ಮಾಸ್ಟರ್ ಹಾಗೂ ಕ್ಯಾರೆಕ್ಟರ್ ಆರ್ಟಿಸ್ಟ್ ಪೊನ್ನಂಬಲಂ ಈ ಬಗ್ಗೆ ಹೇಳಿದ್ದಾರೆ. ತಾವು ಕಷ್ಟದಲ್ಲಿ ಇದ್ದಾಗ ಚಿರಂಜೀವಿಯಿಂದ ಬಂದ ಸಹಾಯವನ್ನು ನೆನಪಿಸಿಕೊಂಡಿದ್ದಾರೆ.

ಪೊನ್ನಂಬಲಂ ಅವರು ಸ್ಟಂಟ್ ಮಾಸ್ಟರ್ ಆಗಿ ಕೆಲಸ ಮಾಡುತ್ತಿದ್ದಾರೆ. ಇದರ ಜೊತೆಗೆ ಸಣ್ಣ ಪುಟ್ಟ ಪಾತ್ರಗಳನ್ನು ಮಾಡಿಕೊಂಡಿದ್ದಾರೆ. ಅವರು ಆರ್ಥಿಕವಾಗಿ ಅಷ್ಟು ಸಬಲರಾಗಿಲ್ಲ. ಅವರ ದಿನ ನಿತ್ಯದ ಕೂಳಿಗೆ ಅವರ ಈ ಕೆಲಸದ ಹಣ ಸಾಕಾಗುತ್ತದೆ. ಆದರೆ, ಅವರಿಗೆ ಕಿಡ್ನಿ ಸಂಬಂಧಿತ ಸಮಸ್ಯೆ ಬಂದಿತು. ಇದರಿಂದ ಅವರಿಗೆ ಸಾಕಷ್ಟು ಸಮಸ್ಯೆ ಕೂಡ ಉಂಟಾಯಿತು. ಆಗ, ಚಿರಂಜೀವಿ ಅವರು ಸಹಾಯ ಮಾಡಿದ್ದರು. ಅದೂ ಅಂತಿಂಥ ಸಹಾಯವಲ್ಲ ಎಂಬುದು ಇಲ್ಲಿ ಗಮನಿಸಬೇಕಾದ ವಿಚಾರ.

## ಹಲಗಲಿ ಚಿತ್ರದ ಫಸ್ಟ್ ರೋರ್ ರಿಲೀಸ್

**ವಾರಿಯರ್ ಪಾತ್ರದಲ್ಲಿ ಧನಂಜಯ್**



ಕನ್ನಡದ ಐತಿಹಾಸಿಕ ಸಿನಿಮಾ 'ಹಲಗಲಿ' ಚಿತ್ರಕ್ಕೆ ಡಾಲಿ ಧನಂಜಯ ಹೈಲೆಟ್. ಅವರಿಗೆ ನಾಯಕಿಯಾಗಿ ಕಾಂತಾರ ಖ್ಯಾತಿಯ ಸಪ್ತಮಿ ಗೌಡ ಕಾಣಿಸಿಕೊಂಡಿದ್ದಾರೆ.

ಸುಕೇಶ್ ಡಿಕೆ ನಿರ್ದೇಶನದ ಯುವ ಉದ್ಯಮಿ ಕಲ್ಯಾಣ್ ಚಕ್ರವರ್ತಿ ಧೂಳಿಪಾಳ್ಳ ನಿರ್ಮಾಣದ ಬಹು ತಾರಾಗಣದ ಅದ್ದೂರಿ ಬಜೆಟ್ ಚಿತ್ರ 'ಹಲಗಲಿ' ಈಗಾಗಲೇ ಸಾಕಷ್ಟು ಸದ್ದು ಮಾಡಿದೆ. ಇದು ಸ್ವಾತಂತ್ರ್ಯ ವೀರರ ಕಥೆ. ಎರಡು ಭಾಗಗಳಲ್ಲಿ, ಮೂಡಿ ಬರಲಿರುವ ಈ ಸಿನಿಮಾ ಕೋಟಿ ವೆಚ್ಚದಲ್ಲಿ ತಯಾರಾಗುತ್ತಿದೆ ಎಂಬುದು ವಿಶೇಷ.

ಐದು ಭಾಷೆಯಲ್ಲಿ ಅದ್ದೂರಿಯಾಗಿ ಚಿತ್ರೀಕರಣ ಆಗುತ್ತಿರುವ ಕನ್ನಡದ ಐತಿಹಾಸಿಕ ಸಿನಿಮಾದ ಫಸ್ಟ್ ರೋರ್ ಸಖತ್ ಆಗಿದೆ. ಕನ್ನಡ ಸೇರಿ ಐದು ಭಾಷೆಯಲ್ಲಿ ಮೂಡಿ ಬರುತ್ತಿರುವ ಕನ್ನಡ ನಾಡಿನ ಸ್ವಾತಂತ್ರ್ಯ ಪೂರ್ವದ ವೀರರ ಕಥೆ ಇದಾಗಿದ್ದು, ವಿಶೇಷ ಸ್ಥಳಗಳಲ್ಲಿ ಶೂಟಿಂಗ್ ನಡೆಯುತ್ತಿದೆ. ನಟ ಡಾಲಿ ಧನಂಜಯ ಅವರ ವೃತ್ತಿ ಪಯಣದಲ್ಲಿ ಮತ್ತೊಂದು ಮೈಲುಗಲ್ಲಿನ ಚಿತ್ರವಿದು ಅನ್ನೋದು ವಿಶೇಷ. ಇಲ್ಲಿವರೆಗೂ ಅವರನ್ನು ತೆರೆ ಮೇಲೆ ವಿಭಿನ್ನ ಪಾತ್ರಗಳಲ್ಲಿ ನೋಡಿ ಮೆಚ್ಚಿದ್ದ ಪ್ರೇಕ್ಷಕರು, ಈಗ ವಾರಿಯರ್ ಪಾತ್ರದಲ್ಲಿ ನೋಡಲಿದ್ದಾರೆ. ಇವರ ಕೈಗೆ ಬಿಲ್ಲು, ಬಾಣ, ಮದ್ದು- ಗುಂಡುಗಳನ್ನು ಕೊಟ್ಟು ಯುದ್ಧದ ಅಖಾಡಕ್ಕೆ ಇಳಿಸಿರುವುದು ಕನ್ನಡ ನಾಡಿನ ಇತಿಹಾಸ ಪುಟಗಳಲ್ಲಿ ಅಚ್ಚಳಿಯದೆ ದಾಖಲಾಗಿರುವ ಒಂದು ರೋಚಕ ಇತಿಹಾಸ. ಹಲಗಲಿ. ಬ್ರಿಟಿಷರ ವಿರುದ್ಧ ಮೊದಲ ಗೆರಿಲ್ಲಾ ವಾರ್ ಮಾಡಿದ ನಮ್ಮದೇ ರಾಜ್ಯದ ಹಲಗಲಿಯ ಊರಿನ ಬೇಡರ ಕುರಿತು ನಾವು ಓದಿರುವ ಮತ್ತು ಕೇಳಿರುವ ಸಂಗತಿಗಳು ಬಹು ರೋಚಕ.

## ಮೀ ಟೂ ನಟಿ 'ಮಾಂಸ ದಂಧೆ'ಯಲ್ಲಿ ಬಂಧನ



ಮೀ ಟೂ ಚಳವಳಿಯ ವೇಳೆ ಹಲವು ನಟರುಗಳು, ತಂತ್ರಜ್ಞರ ವಿರುದ್ಧ ಲೈಂಗಿಕ ದೌರ್ಜನ್ಯದ ಆರೋಪ ಮಾಡಿದ್ದ ನಟಿಯೇ ಈಗ ವೇಶ್ಯಾವಾಟಿಕೆಗೆ ಸಂಬಂಧಿಸಿದ ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿದ್ದಾರೆ. ತಮಿಳುನಾಡು ಪೊಲೀಸರು ಪೋಕ್ಸೊ ಸೇರಿದಂತೆ ಇನ್ನೂ ಕೆಲವು ಪ್ರಕರಣಗಳನ್ನು ನಟಿಯ ವಿರುದ್ಧ ದಾಖಲಿಸಿದ್ದು, ನಟಿಯನ್ನು ಬಂಧಿಸಿದ್ದಾರೆ. ಈ ಹಿಂದೆ ಮೀ ಟೂ ಆರೋಪ ಮಾಡಿ ಸುದ್ದಿಯಾಗಿದ್ದ ನಟಿ ಈಗ 'ಮಾಂಸ ದಂಧೆ' ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿದ್ದಾರೆ. ನಟಿ ಮೀನು ಮುನೀರ್ ಅವರನ್ನು ತಮಿಳುನಾಡು ಪೊಲೀಸರು ಬಂಧಿಸಿದ್ದಾರೆ. ಯುವತಿಯೊಬ್ಬಾಕೆಯನ್ನು ವೇಶ್ಯಾವಾಟಿಕೆಗೆ ಬಲವಂತವಾಗಿ ತಳ್ಳಿದ ಆರೋಪ ಸೇರಿದಂತೆ ಇನ್ನೂ ಕೆಲವು ಆರೋಪಗಳು ನಟಿಯ ಮೇಲಿದೆ. ತಮಿಳುನಾಡು ಪೊಲೀಸರು ನಟಿ ಮೀನು ಮುನೀರ್ ಅನ್ನು ಕೇರಳದ ಅಲುವಾನಲ್ಲಿ ಬಂಧಿಸಿ ಚೆನ್ನೈಗೆ ಕರೆದುಕೊಂಡು ಬಂದಿದ್ದಾರೆ.

ತಮಿಳು ಮತ್ತು ಮಲಯಾಳಂನ ಹಲವು ಸಿನಿಮಾಗಳಲ್ಲಿ ನಟಿಸಿರುವ ನಟಿ ಮೀನು ಮುನೀರ್ ತಮ್ಮದೇ ಸಂಬಂಧದ ಯುವತಿಯೊಬ್ಬಾಕೆಯನ್ನು ವೇಶ್ಯಾವಾಟಿಕೆಗೆ ತಳ್ಳಲು ಯತ್ನಿಸಿದ್ದರಂತೆ. 2014 ರಲ್ಲಿ ಈ ಘಟನೆ ನಡೆದಿದ್ದು ಈಗ ಪ್ರಕರಣ ದಾಖಲಾಗಿದೆ. ಮೀನು ಮುನೀರ್, ತನ್ನ ಹತ್ತಿರದ ಸಂಬಂಧದ ಯುವತಿಯೊಬ್ಬಾಕೆಗೆ ಸಿನಿಮಾನಲ್ಲಿ ಅವಕಾಶ ಕೊಡಿಸುವುದಾಗಿ ಹೇಳಿ ಆಕೆಯನ್ನು ವೇಶ್ಯಾವಾಟಿಕೆಗೆ ತಳ್ಳಿದ್ದರಂತೆ. ತಮಿಳುನಾಡಿನ ಚೆನ್ನೈನ ತಿರುಮಂಗಲಂ ಪೊಲೀಸರ ಬಳಿ ಈ ಬಗ್ಗೆ ದೂರು ದಾಖಲಾಗಿತ್ತು. ಪೋಕ್ಸೊ ಕಾಯ್ದೆ ಅಡಿಯಲ್ಲಿ ಕೇಸು ದಾಖಲಿಸಿಕೊಂಡಿರುವ ಪೊಲೀಸರು ಅದರನ್ವಯ ನಟಿಯನ್ನು ಬಂಧಿಸಿದ್ದಾರೆ. ಇನ್ನು ನಟಿ ಮೀನು ಮುನೀರ್‌ಗೆ ಪ್ರಕರಣ, ಜೈಲು ಹೊಸದೇನೂ ಅಲ್ಲ. ಮಲಯಾಳಂ ನಟ ಬಾಲಚಂದ್ರ ಮೆನನ್ ವಿರುದ್ಧ ನಟಿ ಮೀನು ಮುನೀರ್ ಲೈಂಗಿಕ ದೌರ್ಜನ್ಯದ ಆರೋಪವನ್ನು ಮಾಡಿದ್ದರು. ಆದರೆ ಸಾಕ್ಷ್ಯಗಳ ಕೊರತೆಯಿಂದಾಗಿ ಆ ಪ್ರಕರಣವನ್ನು ನ್ಯಾಯಾಲಯ ಕೈಬಿಟ್ಟಿತು.

## ನೂತನ ಸೀಸನ್ ಆರಂಭಕ್ಕೂ ಮುನ್ನ ನಾಯಕನನ್ನು ಬದಲಿಸಿದ ನೈಟ್ ರೈಡರ್ಸ್

ಆಗಸ್ಟ್ 14 ರಂದು ಆರಂಭವಾಗುವ ಐಪಿಎಲ್ 2025ರಲ್ಲಿ, ಶಾರುಖ್ ಖಾನ್ ಮಾಲೀಕತ್ವದ ಟ್ರಿನ್‌ಬಾಗೊ ನೈಟ್ ರೈಡರ್ಸ್ ತಂಡವು ತಮ್ಮ ನಾಯಕ ಕೀರನ್ ಪೊಲಾರ್ಡ್ ಅವರನ್ನು ಬದಲಿಸಿ ನಿಕೋಲಸ್ ಪೂರನ್ ಅವರನ್ನು ನೂತನ ನಾಯಕರನ್ನಾಗಿ ನೇಮಕ ಮಾಡಿದೆ. ಪೂರನ್ ಅವರು ಟಿ20 ಕ್ರಿಕೆಟ್‌ನಲ್ಲಿ ಅತ್ಯಂತ ಸ್ಫೋಟಕ ಬ್ಯಾಟ್ಸ್‌ಮನ್ ಆಗಿದ್ದು, ಐಪಿಎಲ್ ಮತ್ತು ಮೇಜರ್ ಲೀಗ್ ಕ್ರಿಕೆಟ್‌ನಲ್ಲಿಯೂ ನಾಯಕತ್ವ ವಹಿಸಿದ ಅನುಭವ ಹೊಂದಿದ್ದಾರೆ. ಆಗಸ್ಟ್ 14 ರಂದು ವೆಸ್ಟ್ ಇಂಡೀಸ್‌ನಲ್ಲಿ (ಆಗಸ್ಟ್ 15 ರ ಬೆಳಿಗ್ಗೆ ಭಾರತದಲ್ಲಿ) ಪ್ರಾರಂಭವಾಗುವ ಸಿಪಿಎಲ್ 2025 ಸೀಸನ್ ಪ್ರಾರಂಭವಾಗುವ ಕೆಲವೇ ಗಂಟೆಗಳ ಮೊದಲು ಶಾರುಖ್ ಖಾನ್ ಒಡೆತನದ ಟ್ರಿನ್‌ಬಾಗೊ ನೈಟ್ ರೈಡರ್ಸ್ ತನ್ನ ತಂಡದ ನಾಯಕನನ್ನು ಬದಲಿಸಿದೆ. ನಾಲ್ಕು ಬಾರಿ ಸಿಪಿಎಲ್ ಚಾಂಪಿಯನ್



ಟ್ರಿನ್‌ಬಾಗೊ 6 ಸೀಸನ್‌ಗಳ ನಂತರ ನಾಯಕತ್ವವನ್ನು ಬದಲಾಯಿಸಿದೆ. ಟಿ20 ಸ್ವರೂಪದಲ್ಲಿ ಅತ್ಯಂತ ಸ್ಫೋಟಕ ಬ್ಯಾಟ್ಸ್‌ಮನ್‌ಗಳಲ್ಲಿ ಒಬ್ಬರಾದ ನಿಕೋಲಸ್ ಪೂರನ್ ಅವರನ್ನು ನೂತನ ನಾಯಕನನ್ನಾಗಿ ನೇಮಿಸಿದೆ. ವಾಸ್ತವವಾಗಿ 2019 ರಿಂದ ಈ ತಂಡದ ನಾಯಕರಾಗಿದ್ದ ಮತ್ತು 2020ರಲ್ಲಿ ತಂಡವನ್ನು ಚಾಂಪಿಯನ್ ಮಾಡಿದ್ದ ಅನುಭವಿ ಕೆರಿಬಿಯನ್ ಆಲ್‌ರೌಂಡರ್ ಕೀರನ್ ಪೊಲಾರ್ಡ್ ಬದಲಿಗೆ ಪೂರನ್ ಈ ಜವಾಬ್ದಾರಿಯನ್ನು ವಹಿಸಿಕೊಂಡಿದ್ದಾರೆ.

29 ವರ್ಷದ ಎಡಗೈ ವಿಂಡೀಸ್ ಬ್ಯಾಟ್ಸ್‌ಮನ್ ಪೂರನ್ ಕೆಲವು ತಿಂಗಳ ಹಿಂದೆ ಅಂತರರಾಷ್ಟ್ರೀಯ ಕ್ರಿಕೆಟ್‌ನಿಂದ ನಿವೃತ್ತಿ ಘೋಷಿಸಿದ್ದರು. ಇದರಿಂದಾಗಿ ಅವರು ತಮ್ಮ ಪೂರ್ಣ ಸಮಯವನ್ನು ಫ್ರಾಂಚೈಸಿ ಕ್ರಿಕೆಟ್‌ಗೆ ಮೀಸಲಿಡಬಹುದು. ಇದಕ್ಕಾಗಿ ಅವರು ಈಗ ಟಿಕೆಆರ್‌ನ ನಾಯಕತ್ವದ ರೂಪದಲ್ಲಿ ಪ್ರತಿಫಲವನ್ನು ಪಡೆದಿದ್ದಾರೆ. ಪೂರನ್ ಟಿ20 ಲೀಗ್‌ಗಳಲ್ಲಿ ನಾಯಕತ್ವದ ಅನುಭವವನ್ನೂ ಹೊಂದಿರುವ ಪೂರನ್, ಈಗಾಗಲೇ ಕೆಲವು ಐಪಿಎಲ್ ಪಂದ್ಯಗಳಲ್ಲಿ ಲಕ್ನೋ ಸೂಪರ್ ಜೈಂಟ್ಸ್‌ನ ನಾಯಕತ್ವ ವಹಿಸಿದ್ದಾರೆ. ಹಾಗೆಯೇ ಅಮೆರಿಕದ ಮೇಜರ್ ಲೀಗ್ ಕ್ರಿಕೆಟ್ ಟೂರ್ನಮೆಂಟ್‌ನಲ್ಲಿ, ಅವರು ಎಂಐ ನ್ಯೂಯಾರ್ಕ್ (ಮುಂಬೈ ಇಂಡಿಯನ್ಸ್ ಫ್ರಾಂಚೈಸಿ) ನ ನಾಯಕರಾಗಿದ್ದು, ಈ ಸೀಸನ್‌ನಲ್ಲಿ ತಂಡವನ್ನು ಚಾಂಪಿಯನ್ ಕೂಡ ಮಾಡಿದ್ದಾರೆ. ವಿಶೇಷವೆಂದರೆ ಪೂರನ್ ಈ ಫ್ರಾಂಚೈಸಿಯೊಂದಿಗೆ ಟಿ20 ಕ್ರಿಕೆಟ್‌ನಲ್ಲಿ ತಮ್ಮ ವೃತ್ತಿಜೀವನವನ್ನು ಪ್ರಾರಂಭಿಸಿದರು.

2013ರಲ್ಲಿ ಸಿಪಿಎಲ್‌ನ ಮೊದಲ ಸೀಸನ್‌ನಲ್ಲಿ, ಅವರು ಟ್ರಿನ್‌ಬಾಗೊ ಪರ ಪಾದಾರ್ಪಣೆ ಮಾಡಿದರು. ಆಗ ಅವರಿಗೆ 17 ವರ್ಷ ವಯಸ್ಸಾಗಿತ್ತು ಆದರೆ 2 ಸೀಸನ್‌ಗಳ ನಂತರ, ಅವರು 2016 ರಿಂದ ಬಾರ್ಬಡೋಸ್ ರಾಯಲ್ಸ್ ಪರ ಆಡಲು ಪ್ರಾರಂಭಿಸಿದರು.

ಅಲ್ಲಿ 3 ಸೀಸನ್‌ಗಳನ್ನು ಆಡಿದ ನಂತರ, ಪೂರನ್ 2019ರಲ್ಲಿ ಗಯಾನಾ ಅಮೆಜಾನ್ ವಾರಿಯರ್ಸ್ ತಂಡವನ್ನು ಸೇರಿಕೊಂಡರು. 2022ರಲ್ಲಿ ಈ ತಂಡದ ಪರ 3 ಸೀಸನ್‌ಗಳನ್ನು ಆಡಿದ್ದ ಪೂರನ್ ಟಿಕೆಆರ್ ತಂಡವನ್ನು ಸೇರಿಕೊಂಡರು. ಸಿಪಿಎಲ್‌ನ ಅತ್ಯಂತ ಯಶಸ್ವಿ ಬ್ಯಾಟ್ಸ್‌ಮನ್‌ಗಳಲ್ಲಿ ಒಬ್ಬರಾಗಿರುವ ಪೂರನ್ ಆಡಿರುವ 114 ಪಂದ್ಯಗಳಲ್ಲಿ 3 ವಿಭಿನ್ನ ತಂಡಗಳ ಪರ 28 ಸರಾಸರಿ ಮತ್ತು 152 ಸ್ಟ್ರೈಕ್ ರೇಟ್‌ನಲ್ಲಿ 2447 ರನ್ ಗಳಿಸಿದ್ದಾರೆ.

## ಏಷ್ಯಾ ಕಪ್‌ನಲ್ಲಿ ಭಾರತ ಪಾಕ್ ವಿರುದ್ಧ ಆಡಬಾರದು

**ದೇಶದ ಮುಂದೆ ಕ್ರಿಕೆಟ್ ತುಂಬಾ ಚಿಕ್ಕ ವಿಷಯ**

2025 ರ ಏಷ್ಯಾಕಪ್‌ನಲ್ಲಿ ಸೆಪ್ಟೆಂಬರ್ 14 ರಂದು ಭಾರತ ಮತ್ತು ಪಾಕಿಸ್ತಾನ ನಡುವೆ ಕ್ರಿಕೆಟ್ ಪಂದ್ಯ ನಡೆಯಲಿದೆ. ಈ ಪಂದ್ಯಾವಳಿಯಲ್ಲಿ ಭಾರತ-ಪಾಕಿಸ್ತಾನ ಮೂರು ಬಾರಿ ಮುಖಾಮುಖಿಯಾಗಬಹುದು. ಹೀಗಿರುವಾಗ ಹರ್ಭಜನ್ ಸಿಂಗ್ ಯಾವುದೇ ಕಾರಣಕ್ಕೂ ಭಾರತ ಪಾಕ್ ವಿರುದ್ಧ ಆಡಕೂಡದು ಎಂದು ಹೇಳಿದ್ದಾರೆ. ಪೆಹಲ್ಗಾಮ್ ಭಯೋತ್ಪಾದಕ ದಾಳಿ ಮತ್ತು ಆಪರೇಷನ್ ಸಿಂಧೂರ್ ನಂತರ, ಕ್ರಿಕೆಟ್ ಸೇರಿದಂತೆ ಎಲ್ಲಾ ರಂಗಗಳಲ್ಲಿ ಭಾರತ ಪಾಕಿಸ್ತಾನವನ್ನು ಬಹಿಷ್ಕರಿಸಬೇಕೆಂಬ ಬೇಡಿಕೆ ಹೆಚ್ಚುತ್ತಿದೆ. ಇತ್ತೀಚೆಗೆ ವರ್ಲ್ಡ್ ಚಾಂಪಿಯನ್‌ಶಿಪ್ ಆಫ್ ಲೆಜೆಂಡ್ಸ್ (ಡಬ್ಲ್ಯುಸಿಎಲ್) ಸಮಯದಲ್ಲಿ, ಭಾರತ ಚಾಂಪಿಯನ್ಸ್ ಗುಂಪು ಹಂತ ಮತ್ತು ಸೆಮಿಫೈನಲ್ ಎರಡರಲ್ಲೂ ಪಾಕಿಸ್ತಾನ ಚಾಂಪಿಯನ್ಸ್ ಎದುರಿಸಲು ನಿರಾಕರಿಸಿತು. ಶಿಖರ್ ಧವನ್, ಯುವರಾಜ್ ಸಿಂಗ್, ಹರ್ಭಜನ್ ಸಿಂಗ್ ಇರ್ಫಾನ್ ಪಠಾಣ್, ಸುರೇಶ್ ರೈನಾ ಮತ್ತು ಯೂಸುಫ್ ಪಠಾಣ್ ಅವರಂತಹ ದಿಗ್ಗಜರನ್ನು ಒಳಗೊಂಡ ಭಾರತೀಯ ತಂಡವು ಪಾಕ್ ವಿರುದ್ಧ ನಾವು ಆಡಲ್ಲ ಎಂದು ದೃಢವಾಗಿ ನಿಂತರು.



ಇದೀಗ ಸೂರ್ಯಕುಮಾರ್ ಯಾದವ್ ನೇತೃತ್ವದ ಭಾರತ ತಂಡವು ಮುಂಬರುವ ಏಷ್ಯಾಕಪ್ ಟೂರ್ನಿನಲ್ಲೂ ಇದೇ ರೀತಿಯ ನಿಲುವನ್ನು ತೆಗೆದುಕೊಳ್ಳಬೇಕು ಮತ್ತು ತಮ್ಮ ಸಾಂಪ್ರದಾಯಿಕ ಎದುರಾಳಿಗಳನ್ನು ಎದುರಿಸಲು ನಿರಾಕರಿಸಬೇಕು ಎಂದು ಹರ್ಭಜನ್ ಹೇಳಿದ್ದಾರೆ. 700 ಕ್ಕೂ ಹೆಚ್ಚು ಅಂತರರಾಷ್ಟ್ರೀಯ ವಿಕೆಟ್‌ಗಳನ್ನು ಪಡೆದಿರುವ ಭಾರತದ ಮಾಜಿ ಸ್ಪಿನ್ನರ್ ಹರ್ಭಜನ್ ಸಿಂಗ್ ಟೈಮ್ಸ್ ಆಫ್ ಇಂಡಿಯ ಜೊತೆ ಮಾತನಾಡುತ್ತ ಅವರು, ''ದೇಶದ ಮುಂದೆ ಕ್ರಿಕೆಟ್ ತುಂಬಾ ಚಿಕ್ಕ ವಿಷಯ'' ಎಂದು ತಮ್ಮ ನಿಲುವನ್ನು ಸ್ಪಷ್ಟಪಡಿಸಿದ್ದಾರೆ.

''ಅವರು ಯಾವುದು ಮುಖ್ಯ ಮತ್ತು ಯಾವುದು ಅಲ್ಲ ಎಂಬುದನ್ನು ಅರ್ಥಮಾಡಿಕೊಳ್ಳಬೇಕು.

ಇದು ತುಂಬಾ ಸರಳ. ನನಗೆ, ಗಡಿಯಲ್ಲಿ ನಿಂತು ಕೆಲವೊಮ್ಮೆ ಮನೆಗೆ ಮರಳಲೂ ಸಾಧ್ಯವಾಗದ ಸೈನಿಕ ಹೆಚ್ಚು ಮುಖ್ಯ. ಅವರು ದೇಶಕ್ಕಾಗಿ ತಮ್ಮ ಪ್ರಾಣವನ್ನು ತ್ಯಾಗ ಮಾಡುತ್ತಾರೆ. ಅವರ ತ್ಯಾಗ ನಮಗೆಲ್ಲರಿಗೂ ಬಹಳ ದೊಡ್ಡದು'' ಎಂದು ಹೇಳಿದರು.

''ದೇಶದ ಸೈನಿಕರಿಗೆ ಹೋಲಿಸಿದರೆ ಕ್ರಿಕೆಟ್ ತುಂಬಾ ಸಣ್ಣ ವಿಷಯ. ಗಡಿಯಲ್ಲಿ ಉದ್ವಿಗ್ನತೆ ಉಂಟಾಗಿ ನಾವು ಅವರೊಂದಿಗೆ ಕ್ರಿಕೆಟ್ ಆಡುವುದು ಸಾಧ್ಯವಿಲ್ಲ. ಎಲ್ಲಾ ಸಮಸ್ಯೆಗಳು ಬಗೆಹರಿಯುವವರೆಗೆ, ನಾವು ಅವರೊಂದಿಗೆ ಕ್ರಿಕೆಟ್ ಆಡಬಾರದು. ರಕ್ತ ಮತ್ತು ನೀರು ಒಟ್ಟಿಗೆ ಹರಿಯಲು ಸಾಧ್ಯವಿಲ್ಲ ಎಂಬುದು ನಮ್ಮ ಸರ್ಕಾರದ ನಿಲುವು'' ಎಂದು ಭಜ್ಜಿ ಹೇಳಿದರು.

## ಆಸ್ಟ್ರೇಲಿಯಾದಲ್ಲಿ ತ್ರಿವರ್ಣ ಧ್ವಜ ಹಾರಿಸಿದ ಟೀಂ ಇಂಡಿಯಾ

**ಕೊನೆಯ ಓವರ್‌ನಲ್ಲಿ ಜಯ**

ಭಾರತ ಮಹಿಳಾ 'ಎ' ತಂಡವು ಆಸ್ಟ್ರೇಲಿಯಾ-ಎ ತಂಡದ ವಿರುದ್ಧ ನಡೆದ ಎರಡನೇ ಏಕದಿನ ಪಂದ್ಯವನ್ನು ರೋಮಾಂಚಕ ರೀತಿಯಲ್ಲಿ ಗೆದ್ದು ಸರಣಿಯಲ್ಲಿ 2-0 ಮುನ್ನಡೆ ಸಾಧಿಸಿದೆ. ಮಿನ್ನು ಮಣಿ ಅವರ ಅದ್ಭುತ ಬೌಲಿಂಗ್ ಮತ್ತು ರಾಧಾ ಯಾದವ್ ಹಾಗೂ ಪ್ರೇಮಾ ರಾವತ್ ಅವರ ಅತ್ಯುತ್ತಮ ಬ್ಯಾಟಿಂಗ್ ಭಾರತದ ಗೆಲುವಿಗೆ ಕಾರಣವಾಯಿತು.

ಭಾರತ ಎ ಮಹಿಳಾ ಕ್ರಿಕೆಟ್ ತಂಡ ಪ್ರಸ್ತುತ ಆಸ್ಟ್ರೇಲಿಯಾ ಪ್ರವಾಸದಲ್ಲಿದೆ. ಟಿ20 ಸರಣಿಯ ಸೋಲಿನೊಂದಿಗೆ ಈ ಪ್ರವಾಸವನ್ನು ಪ್ರಾರಂಭಿಸಿದ್ದ ಟೀಂ ಇಂಡಿಯಾ ಏಕದಿನ ಸರಣಿಯಲ್ಲಿ ಬಲವಾದ ಪುನರಾಗಮನ ಮಾಡಿದೆ. ಎರಡು ತಂಡಗಳ ನಡುವೆ ನಡೆಯುತ್ತಿರುವ 3 ಪಂದ್ಯಗಳ ಏಕದಿನ ಸರಣಿಯಲ್ಲಿ, ಭಾರತದ ಎ ತಂಡವು ಆಸ್ಟ್ರೇಲಿಯಾ-ಎ ವಿರುದ್ಧದ ಎರಡನೇ ಏಕದಿನ ಪಂದ್ಯದಲ್ಲಿ ಅದ್ಭುತ ಪ್ರದರ್ಶನ ನೀಡಿ 2 ವಿಕೆಟ್‌ಗಳ ರೋಮಾಂಚಕ ಜಯ ಸಾಧಿಸಿತು. ಈ ಮೂಲಕ ಇನ್ನೊಂದು ಪಂದ್ಯ ಬಾಕಿ ಇರುವಂತೆಯೇ ಭಾರತ ವನಿತಾ ಪಡೆ ಏಕದಿನ ಸರಣಿಯನ್ನು ತನ್ನ ತೆಕ್ಕೆಗೆ ಹಾಕಿಕೊಂಡಿದೆ. ಮಿನ್ನು ಮಣಿ ಮಾಂತ್ರಿಕ ಬೌಲಿಂಗ್ ಟಾಸ್ ಗೆದ್ದು ಬ್ಯಾಟಿಂಗ್ ಮಾಡಿದ ಆಸ್ಟ್ರೇಲಿಯಾ-ಎ ತಂಡವು 50 ಓವರ್‌ಗಳಲ್ಲಿ 9 ವಿಕೆಟ್‌ಗಳ ನಷ್ಟಕ್ಕೆ 265 ರನ್ ಗಳಿಸಿತು.

ಅಲಿಸಾ ಹೀಲಿ 91 ರನ್‌ಗಳ ಅದ್ಭುತ ಇನ್ನಿಂಗ್ಸ್ ತಂಡದ ಪರ ಆಡಿದರೆ, ಕಿಮ್ ಗಾರ್ತ್ ಅಜೇಯ 41 ರನ್‌ಗಳ ಕಾಣಿಕೆ ನೀಡಿದರು. ಇವರನ್ನು ಹೊರತುಪಡಿಸಿ, ಯಾವುದೇ ಬ್ಯಾಟರ್‌ಗೆ 30 ರನ್‌ಗಳ ಗಡಿಯನ್ನು ಮುಟ್ಟಲು ಸಾಧ್ಯವಾಗಲಿಲ್ಲ. ಮತ್ತೊಂದೆಡೆ, ಭಾರತ-ಎ ಪರ ಮಿನ್ನು ಮಣಿ ಅದ್ಭುತ ಬೌಲಿಂಗ್ ಮಾಡಿ 3 ವಿಕೆಟ್‌ಗಳನ್ನು ಪಡೆದರು. ಇವರಲ್ಲದೆ ಸೈಮಾ ಠಾಕೂರ್ ಕೂಡ 2 ವಿಕೆಟ್‌ಗಳನ್ನು ಪಡೆದರೆ, ಟೈಟಾಸ್ ಸಾಧು, ರಾಧಾ ಯಾದವ್, ಪ್ರೇಮಾ ರಾವತ್ ಮತ್ತು ತನುಜಾ ಕನ್ವರ್ ತಲಾ 1 ವಿಕೆಟ್ ಪಡೆದರು.



## 83ನೇ ವಯಸ್ಸಿನಲ್ಲಿ ಜಗತ್ತಿಗೆ ವಿದಾಯ



ಮಹಾರಾಷ್ಟ್ರದ ಮಾಜಿ ಪ್ರಥಮ ದರ್ಜೆ ಕ್ರಿಕೆಟಿಗ ನಿಕೋಲಸ್ ಸಲ್ಡಾನಾ ಗುರುವಾರ ಪುಣೆಯಲ್ಲಿ ನಿಧನರಾಗಿದ್ದಾರೆ. ಅವರಿಗೆ 83 ವರ್ಷ ವಯಸ್ಸಾಗಿತ್ತು. ಸಲ್ಡಾನಾ ಜೂನ್ 23, 1942 ರಂದು ನಾಸಿಕ್‌ನಲ್ಲಿ ಜನಿಸಿದರು. ಬಲಗೈ ಬ್ಯಾಟ್ಸ್‌ಮನ್ ಮತ್ತು ಎಡಗೈ ಸ್ಪಿನ್ನರ್ ಸಲ್ಡಾನಾ ಮಹಾರಾಷ್ಟ್ರ ಪರ 57 ಪ್ರಥಮ ದರ್ಜೆ ಪಂದ್ಯಗಳನ್ನು ಆಡಿದ್ದಾರೆ, ಇದರಲ್ಲಿ ಅವರು 2,066 ರನ್ ಗಳಿಸಿದ್ದಾರೆ. ಅವರ ಅತ್ಯಧಿಕ ಸ್ಕೋರ್ 142 ರನ್‌ಗಳು ಮತ್ತು ಅವರ ಬ್ಯಾಟಿಂಗ್ ಸರಾಸರಿ 30.83. ಅವರು 138 ವಿಕೆಟ್‌ಗಳನ್ನೂ ಪಡೆದರು. ಮಹಾರಾಷ್ಟ್ರ ಕ್ರಿಕೆಟ್ ಅಸೋಸಿಯೇಷನ್ ಸಲ್ಡಾನಾ ಅವರನ್ನು ತನ್ನ ಅತ್ಯುತ್ತಮ ಆಟಗಾರರಲ್ಲಿ ಒಬ್ಬರು ಎಂದು ಬಣ್ಣಿಸಿದೆ. ಸಲ್ಡಾನಾ ಅವರಿಗೆ ಭಾರತೀಯ ತಂಡಕ್ಕಾಗಿ ಒಂದೇ ಒಂದು ಅಂತರರಾಷ್ಟ್ರೀಯ ಪಂದ್ಯವನ್ನು ಆಡಲು ಅವಕಾಶ ಸಿಗದಿರಬಹುದು. ಆದರೆ ಅವರು ಮಹಾರಾಷ್ಟ್ರ ಪರ ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ ಉತ್ತಮ ಪ್ರದರ್ಶನ ನೀಡಿದ್ದರು. ಸಲ್ಡಾನಾ ಅವರ ಪ್ರಥಮ ದರ್ಜೆ ವೃತ್ತಿಜೀವನದಲ್ಲಿ ಒಟ್ಟು 42 ಕ್ಯಾಚ್‌ಗಳನ್ನು ಹಿಡಿದಿದ್ದಾರೆ. ನಿಕೋಲಸ್ ಸಲ್ಡಾನಾ ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿಯೂ ಶತಕ ಗಳಿಸಿದ್ದಾರೆ. ಇದಲ್ಲದೆ, ಅವರು ಬೌಲಿಂಗ್‌ನಲ್ಲಿ 6 ಬಾರಿ ಇನ್ನಿಂಗ್ಸ್ ಅನ್ನು ತೆರೆದಿದ್ದಾರೆ. ಅವರ ಸರಾಸರಿ 22.48. ಬ್ಯಾಟಿಂಗ್ ಹೊರತುಪಡಿಸಿ, ನಿಕೋಲಸ್ ಸಲ್ಡಾನಾ 57 ಪ್ರಥಮ ದರ್ಜೆ ಪಂದ್ಯಗಳಲ್ಲಿ ಒಟ್ಟು 138 ವಿಕೆಟ್‌ಗಳನ್ನು ಪಡೆದಿದ್ದಾರೆ. ಇನ್ನಿಂಗ್ಸ್‌ನಲ್ಲಿ ಅವರ ಅತ್ಯುತ್ತಮ ಪ್ರದರ್ಶನವೆಂದರೆ 41 ರನ್‌ಗಳಿಗೆ 6 ವಿಕೆಟ್‌ಗಳು. ಅವರು 6 ಬಾರಿ ಐದು ವಿಕೆಟ್‌ಗಳನ್ನು ಪಡೆದ ಸಾಧನೆ ಮಾಡಿದ್ದಾರೆ. ನಿಕೋಲಸ್ ಸಲ್ಡಾನಾ 1942 ರ ಜೂನ್ 23 ರಂದು ಮಹಾರಾಷ್ಟ್ರದ ನಾಸಿಕ್‌ನಲ್ಲಿ ಜನಿಸಿದರು. ಅವರು ತಮ್ಮ ಇಡೀ ವೃತ್ತಿಜೀವನದಲ್ಲಿ ಮಹಾರಾಷ್ಟ್ರವನ್ನು ಹೊರತುಪಡಿಸಿ ಬೇರೆ ಯಾವುದೇ ರಾಜ್ಯಕ್ಕಾಗಿ ಪ್ರಥಮ ದರ್ಜೆ ಕ್ರಿಕೆಟ್ ಆಡಿಲ್ಲ. ಅವರು ಏಕಾಂಗಿಯಾಗಿ ಮಹಾರಾಷ್ಟ್ರ ತಂಡವನ್ನು ಹಲವು ಬಾರಿ ಗೆಲುವಿನತ್ತ ಮುನ್ನಡೆಸಿದರು ಮತ್ತು ಅವರ ಲೆಗ್-ಬ್ರೇಕ್ ಗೂಗಿಯಿಂದ ಪ್ರಸಿದ್ಧರಾಗಿದರು.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966